ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 10 ಭಾನುವಾರ 2025

₹4


ಸಂಪುಟ: 46 | ಸಂಚಿಕೆ: 115 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಭಾನುವಾರ 10 ಆಗಸ್ಟ್ 2025

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಾಮೂಹಿಕ ಋಗ್ವೇದ, ಯಜುರುಪಾಕರ್ಮ



ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಾಮೂಹಿಕ ಋಗ್ವೇದ ಹಾಗೂ ಯಜುರುಪಾಕರ್ಮ ನಡೆಯಿತು.

ಮೈಸೂರು,ಆ.9–ಮೈಸೂರಿನ ವಿಜಯ ನಗರದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನಡೆದ ಸಾಮೂಹಿಕ ಋಗ್ವೇದ ಹಾಗೂ ಯಜುರುಪಾಕರ್ಮದಲ್ಲಿ ಸಾಮೂಹಿಕವಾಗಿ ಬ್ರಾಹ್ಮಣರು ಯಜ್ಞೋಪವಿತ್ರಂ ಜನಿವಾರ ಬದಲಾಯಿಸಿಕೊಂಡು, ಸಂಧ್ಯಾವಂದನೆ, ಗಾಯತ್ರಿ ಜಪ ಪಠಣ ಮಾಡಿದರು.

ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಮಾತನಾಡಿ, ಭಾರತೀಯ ಸನಾತನ ಹಿಂದೂ ಧರ್ಮದಲ್ಲಿ ವೇದ ಮತ್ತು ಶಾಸ್ತ್ರ ಅಧ್ಯಯನಕ್ಕೆ ಬಹಳ ಮಹತ್ವವಿದೆ. 8ನೇ ವರ್ಷಕ್ಕೆ ವಟುವಿಗೆ ಉಪನಯನ ಮಾಡಿ ಗಾಯತ್ರಿ ಮಂತ್ರ ಉಪದೇಶಿಸಿ ಗುರುಕುಲಕ್ಕೆ ಕಳಿಸುವ ಪರಂಪರೆಯಿತ್ತು. ಯಜುರ್ ವೇದ, ಋಗ್ವೇದ ಪ್ರಕಾರವಾಗಿ ಶಾಸ್ತ್ರಗಳನ್ನು ಪಾಲಿಸುವ ವೈದಿಕರು ತಮ್ಮ ಋಷಿಗಳಿಗೆ ಪೂಜಿಸಿ ಯಜ್ಞೋಪವೀತ ಜನಿವಾರ ಧಾರಣೆ ಮಾಡುವ ಉಪಾಕರ್ಮ ಧರ್ಮ ರಕ್ಷಣೆ ಪ್ರತೀಕ. ಸಾವಿರಾರು ವರ್ಷಗಳ ಹಿಂದೆ ಸಂವತ್ಸರಗಳ ಹಬ್ಬಗಳಲ್ಲಿ ಪಂಚಾಂಗ ನಿರ್ಣಯಿಸಿರುವಂತೆ ಮುಹೂರ್ತ ಆಚರಣೆ ಪಾಲಿಸುವ ಕ್ರಮಕ್ಕೆ ಮೊದಲೇ ನಿಶ್ಚಯಿಸಿರುತ್ತದೆ ಎಂದರೆ ಸನಾತನ ಧರ್ಮದ ಶಕ್ತಿಯ ಸಂಕೇತವಾಗಿದೆ ಎಂದರು. ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಗಿರೀಶ್, ಅಶ್ವಿನ್, ಶ್ರೀರಾಮ್ ಇನ್ನಿತರರು ಹಾಜರಿದ್ದರು.

ಮಾಜಿ ಸೈನಿಕರ ಸಂಘದ 5ನೇ ವಾರ್ಷಿಕ ಕೂಟ

ಮೈಸೂರು, ಆ.9–ಮೈಸೂರು ಪೂರ್ವ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ 5ನೇ ವಾರ್ಷಿಕ ಸಂತೋಷ ಕೂಟವನ್ನು ಆ.10ರಂದು ಬೆಳಗ್ಗೆ 11 ಗಂಟೆಗೆ ಸಿದ್ದಾರ್ಥ ಬಡಾವಣೆಯಲ್ಲಿರುವ ಡಿಎಫ್ಆರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಂಜಿತಂಡ ಕೆ,ಅಯ್ಯಪ್ಪ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೈಸೂರಿನ ಹಾಲಿ ಡೈರಿ ಕಾರ್ಮಿಕ ಗುತ್ತಿಗೆದಾರರಾದ ಸುರೇಶ್ ಗೌಡ ಉಪಸ್ಥಿತರಿರುವರು. ವಿಶೇಷ ಆಹ್ವಾನಿತರಾಗಿ ಚಿಕ್ಕಬಳ್ಳಾಪುರದ ಮೆಡಿಕಲ್ ಕಾಲೇಜಿನ ಮುಖ್ಯ ಆಡಳಿತಾಧಿಕಾರಿ ಸಿ.ಎಲ್.ಆನಂದ್, ಡಿಎಫ್ಆರ್ಎಲ್ ಸೇವಾ ಅಧಿಕಾರಿ ಲೆಫ್ಟಿನೆಟ್ ಕರ್ನಲ್ ಲಕ್ಷ್ಮಿ ಮೋಹನ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಜವರ ನಾಯಕ

ಮೈಸೂರು,ಆ.9–ನಂಜನಗೂಡು ತಾಲೂಕು ಕುಂಬರಹಳ್ಳಿ ಗ್ರಾಮದ ನಿವಾಸಿ ಜವರನಾಯಕ (85) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ ಭವನಕ್ಕೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ

ವರ್ಷದೊಳಗೆ ಕಟ್ಟಡ ಪೂರ್ಣಗೊಳಿಸಲು ತಾಕೀತು

ಮೈಸೂರು, ಆ.9(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣದ ಬಳಿ ಇಂದಿರಾಗಾಂಧಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

ತರುವಾಯ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಇಷ್ಟು ವರ್ಷವಾದರೂ ಕಾಂಗ್ರೆಸ್ ಪಕ್ಷಕ್ಕೆ ಶಾಶ್ವತವಾದ ಕಟ್ಟಡ ಇರಲಿಲ್ಲ. ಹಲವು ವರ್ಷಗಳ ಕನಸು ಈಗ ನನಸಾಗುತ್ತಿದೆ. ಇದರಿಂದ ಅತ್ಯಂತ ಉತ್ಸಾಹ, ಹರ್ಷ, ಸಂಭ್ರಮದಿಂದ ಶಂಕುಸ್ಥಾಪನೆ ನೆರವೇರಿಸಿದ್ದೇನೆ ಎಂದು ಹೇಳಿದರು.

ಡಿ.ದೇವರಾಜ ಅರಸ್ ಅವರು ಮುಖ್ಯಮಂತ್ರಿ ಆಗಿದ್ದಾಗ ಈ ಭೂಮಿ ನೀಡಿದ್ದರು. ಅಂದಿನಿಂದ ಇಲ್ಲಿವರೆಗೆ ಕಾಂಗ್ರೆಸ್ ಮುಖಂಡ ನಾಗಭೂಷಣ್ ತಿವಾರಿ ಅವರು ಈ ಜಾಗ ರಕ್ಷಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಮೊದಲ ಇಂದಿರಾ ಗಾಂಧಿ ಭವನ ನಿರ್ಮಾಣವಾಗುತ್ತಿದೆ. ಇನ್ನು ಒಂದು ವರ್ಷದೊಳಗೆ ಕಟ್ಟಡದ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬೇಕು ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

ತಮ್ಮ ಭಾಷಣದ ತರುವಾಯ ಸಿದ್ದರಾಮಯ್ಯ ಅವರು, ಮೈಸೂರು ಜಿಲ್ಲೆ ನಂಜಗೂಡು ತಾಲೂಕಿನ ಹದಿನಾರು ಗ್ರಾಮದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಕಾರ್ಯಕ್ರಮದ ಅರ್ಧದಲ್ಲೇ ನಿರ್ಗಮಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಡಾ.ತಿಮ್ಮಯ್ಯ, ಡಾ.ಯತೀಂದ್ರ, ಕೆ.ಹರೀಶ್‌ಗೌಡ, ರವಿಶಂಕರ್, ದರ್ಶನ್ ಧ್ರುವನಾರಾಯಣ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಶಾಸಕ ಉಗ್ರಪ್ಪ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ಕಾಂಗ್ರೆಸ್ ಮುಖಂಡ ನಾಗಭೂಷಣ ತಿವಾರಿ ಈ ಸಂದರ್ಭದಲ್ಲಿ ಹಾಜರಿದ್ದರು.



ಮೈಸೂರು ರೈಲ್ವೆ ನಿಲ್ದಾಣದ ಬಳಿ ಇಂದಿರಾಗಾಂಧಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೂಮಿಪೂಜೆ ನೆರವೇರಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್‌ಸೇಠ್, ರವಿಶಂಕರ್, ಡಾ.ಯತೀಂದ್ರ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಇತರರಿದ್ದಾರೆ.

ಏಯ್ ದುಡ್ಡು ಕೊಡ್ರಯ್ಯ ಫಸ್ಟ್...!

ಕೇಕ್ ಕಟ್ ಮಾಡಲು ಸಿದ್ದರಾಮಯ್ಯ ನಿರಾಕರಣೆ

"ಏಯ್... ದುಡ್ಡು ಕೊಡ್ರಯ್ಯ ಫಸ್ಟ್... ಏಯ್... ನೀನು ಎಷ್ಟು ಕೊಡ್ತೀಯಾ ಹೇಳು...!!" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿರಾಗಾಂಧಿ ಕಾಂಗ್ರೆಸ್ ಭವನಕ್ಕೆ ವಂತಿಕೆ ನೀಡುವ ಬಗ್ಗೆ ಕಾರ್ಯಕರ್ತರಲ್ಲಿ ಬೇಡಿಕೆ ಸಲ್ಲಿಸಿದರು.

ಅಷ್ಟೇ ಕೊಡಬೇಕು, ಇಷ್ಟೇ ಕೊಡಬೇಕು ಎಂದು ತಾಕೀತು ಮಾಡುವುದಿಲ್ಲ. ನಿಮ್ಮ ಕೈಯ್ಯಲ್ಲಿ ಎಷ್ಟು ಆಗುತ್ತೊ ಅಷ್ಟು ದುಡ್ಡು ಕೊಡಿ ಎಂದು ಹೇಳಿದರು.

ಈ ವೇಳೆ ಹುಣಸೂರಿನ ಹಿರಿಯ ಕಾಂಗ್ರೆಸ್ ಮುಖಂಡ ಪ್ರೇಮ್ ಕುಮಾರ್ ಅವರು 5 ಲಕ್ಷ ರೂಪಾಯಿಗಳ ಚೆಕ್ ಅನ್ನು ಸಿದ್ದರಾಮಯ್ಯ ಅವರಿಗೆ ನೀಡಿದರು.

ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಕಾಂಗ್ರೆಸ್ ಭವನವೆಂಬ ದೇವಸ್ಥಾನ ನಿರ್ಮಾಣ ಮಾಡುತ್ತಿದ್ದೇವೆ. ಕಾರ್ಯಕರ್ತರು ಇದಕ್ಕೆ ವಂತಿಕೆ ನೀಡಬೇಕು. ಕನಿಷ್ಟ 100 ರೂಪಾಯಿಯಿಂದ ಎಷ್ಟು ಸಾಧ್ಯವೋ ಅಷ್ಟು ಹಣ ಕೊಡಿ ಎಂದು ಸಲಹೆ ನೀಡಿದರು. ಅಧಿಕಾರ ಸಿಗಲಿ, ಸಿಗದಿದ್ದರೂ ಪಕ್ಷಕ್ಕಾಗಿ ದುಡಿಯುತ್ತಿರುವ ನಿಮ್ಮ ಬಗ್ಗೆ ಹೆಮ್ಮೆ ಇದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಾರ್ಯಕರ್ತರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ವೇಳೆ ಭಾಷಣ ಮುಗಿಸಿ ನಿರ್ಗಮಿಸುತ್ತಿದ್ದ ಸಿದ್ದರಾಮಯ್ಯ ಅವರಿಂದ ಕೇಕ್ ಕಟ್ ಮಾಡಿಸಲು ವ್ಯವಸ್ಥೆ ಮಾಡಲಾಗಿತ್ತು. ಆದರೆ ಕೇಕ್ ಕಟ್ ಮಾಡಲು ನಿರಾಕರಿಸಿದರು. ನಾನು ಯಾವತ್ತೂ ಕೇಕ್ ಕಟ್ ಮಾಡಿಲ್ಲ. ಇದರಿಂದ ಒತ್ತಾಯ ಮಾಡಬೇಡಿ ಎಂದು ಹೇಳಿ ವೇದಿಕೆಯಿಂದ ಇಳಿಯಲು ಮುಂದಾದರು. ಆದರೆ ನಮ್ಮ ಸನ್ಮಾನ ಸ್ವೀಕರಿಸಬೇಕು ಎಂದು ಒತ್ತಾಯ ಮಾಡಿ ಡಿ.ಕೆ.ಶಿವಕುಮಾರ್ ಅವರಿಂದ ಶಾಲು ಹೊದಿಸಿ, ಹೂವಿನ ಹಾರ ಹಾಕಿ ಅಭಿನಂದಿಸಿದರು.

ಇಂದಿರಾಗಾಂಧಿ ಕಾಂಗ್ರೆಸ್ ಭವನ ಕಾರ್ಯಕರ್ತರಿಗೆ ದೇವಸ್ಥಾನವಿದ್ದಂತೆ

ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂತ್ರ

ಹೆಸರಿಗೆ ಇದು ಕಾಂಗ್ರೆಸ್ ಭವನ, ಆದರೆ ಪಕ್ಷದ ಕಾರ್ಯಕರ್ತರಿಗೆ ಇದು ದೇವಸ್ಥಾನವಿದ್ದಂತೆ. ಇದು ದೇವಸ್ಥಾನ ಮಾತ್ರವಲ್ಲದೆ ಪ್ರಜಾಪ್ರಭುತ್ವ ಉಳಿಸುವ ದೊಡ್ಡ ಸೌಧ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹಾಗೂ ನಾಗಭೂಷಣ ತಿವಾರಿ ಅವರು ಟ್ರಸ್ಟ್‌ವೊಂದನ್ನು ರಚಿಸಿ, ಈ ಜಾಗವನ್ನು ಸಂರಕ್ಷಿಸಿದ್ದರು. ಈಗ ಇಡೀ ಆಸ್ತಿಯನ್ನು ಟ್ರಸ್ಟ್‌ನಿಂದ ಕಾಂಗ್ರೆಸ್ ಪಕ್ಷಕ್ಕೆ ಹಸ್ತಾಂತರ ಮಾಡಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಇಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ ಭವನ ನಿರ್ಮಾಣ ಮಾಡಲು ನಾನು, ಸಿದ್ದರಾಮಯ್ಯ ಹಾಗೂ ಡಾ.ಮಹದೇವಪ್ಪ ಅವರ ಜೊತೆ ಗಲಾಟೆ ಮಾಡಿದ್ದೇನೆ. ತಡವಾದರೂ ಈಗ ಭವನ ನಿರ್ಮಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಮಹಾತ್ಮ ಗಾಂಧಿ ಅವರು ಸ್ವಾತಂತ್ರ್ಯ ಹೋರಾಟ ಆರಂಭಿಸಿ 100 ವರ್ಷವಾಗಿದೆ. ಈಗ ಆ ಸ್ಥಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಹುಟ್ಟು ಅನಿರೀಕ್ಷಿತ, ಸಾವು ಖಚಿತ. ಆದರೆ ಹುಟ್ಟು ಸಾವಿನ ನಡುವೆ ನಮ್ಮದೆಂಬ ಯಾವುದಾದರೊಂದು ನೆನಪು ಬಿಟ್ಟು ಹೋಗಬೇಕು. ಈ ಹಿನ್ನೆಲೆಯಲ್ಲಿ ಎಲ್ಲಾ ಶಾಸಕರು ತಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದರು.

ನಿಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಕಚೇರಿಗೆ ಶಾಶ್ವತ ಕಟ್ಟಡ ನಿರ್ಮಿಸಿಕೊಟ್ಟರೆ ನಿಮಗೆ ಪಕ್ಷ ಟಿಕೆಟ್ ನೀಡಿರುವುದಕ್ಕೂ ಸಾರ್ಥಕವಾಗುತ್ತದೆ. ಈ ಮೂಲಕ ಪಕ್ಷಕ್ಕೆ ಕಾಣಿಕೆ ನೀಡಬೇಕು ಎಂದು ಸಲಹೆಯಿತ್ತರು. ಎಲ್ಲಾ ಶಾಸಕರು ತಮ್ಮ ಮನೆಯಲ್ಲಿ ಆಫೀಸ್ ಮಾಡಿಕೊಳ್ಳುವುದು ಮುಖ್ಯವಲ್ಲ. ಆದರೆ ತಮ್ಮ ಕ್ಷೇತ್ರದಲ್ಲಿ ಪಕ್ಷಕ್ಕೆ ಶಾಶ್ವತ ಕಟ್ಟಡ ನಿರ್ಮಾಣ ಮಾಡುವುದು ದೊಡ್ಡ ವಿಚಾರ. ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಮಾಡುತ್ತೀರಾ. ಹೀಗಿರುವಾಗ ಪಕ್ಷಕ್ಕೆ ಶಾಶ್ವತ ಕಟ್ಟಡ ನಿರ್ಮಿಸಿ ಕೊಡುವುದು ದೊಡ್ಡ ವಿಚಾರವಲ್ಲ ಎಂದು ಅಭಿಪ್ರಾಯಪಟ್ಟರು.

ತಮ್ಮ ಕ್ಷೇತ್ರದಲ್ಲಿ ಎಲ್ಲಿ ಜಾಗವಿದೆ ಎಂದು ಮಾಹಿತಿ ನೀಡಿದರೆ, ಸರ್ಕಾರದ ಮಟ್ಟದಲ್ಲಿ ಆ ಜಾಗ ಕೊಡಿಸಲು ನಾನು ಮುಂದಾಗುತ್ತೇನೆ ಎಂದು ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್, ಮೈಗ್ರೇನ್ ಮತ್ತು ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ:** ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ, ಸಾನ್ನಿಧ್ಯ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಹೆಚ್.ವಿ.ನಾಗರಾಜ್, ಸ್ಥಳ: ಗಣಪತಿ ದೇವಸ್ಥಾನ ಹಿನಕಲ್, ಬೆಳಗ್ಗೆ 9ಕ್ಕೆ.

■ **ಶ್ರೀ ಸೂತ್ರ ಆಯುರ್ಧಾಮ:** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್:** ಶ್ರೀ ಗುರುರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 6ಕ್ಕೆ ನಿರ್ಮಾಲ್ಯ ವಿಸರ್ಜನೆ ಮತ್ತು ಪಂಚಾಮೃತ, 7ರಿಂದ ಶ್ರೀ ರಾಯರಿಗೆ ಪಾದಪೂಜೆ, ಕನಕಾಭಿಷೇಕ, ಸರ್ವಸೇವೆ ನಂತರ ಅರ್ಚನೆ, ಅಲಂಕಾರ, ಬೆಳಗ್ಗೆ 9.30ರಿಂದ ಭಜನೆ ಮತ್ತು ದೇವರನಾಮ, ಬೆಳಗ್ಗೆ 10.30ರಿಂದ ಭಜನೆ ಮತ್ತು ದೇವರನಾಮ, ಸಂಜೆ 6ರಿಂದ ಮೈಸೂರಿನ ಕೊರ್ಲಹಳ್ಳಿ ಶ್ರೀನಿವಾಸಚಾರ್ಯ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ: ಟ್ರಸ್ಟ್ ಆವರಣ, ಟಿ.ಕೆ.ಬಡಾವಣೆ 4ನೇ ಹಂತ.

■ **ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್:** ಶ್ರೀ ವಾಸುದೇವ ಮಹಾರಾಜರ 18ನೇ ಆರಾಧನಾ ಮಹೋತ್ಸವ, ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಶ್ರೀ ವಾಸುದೇವ ಮಹಾರಾಜ ಸದ್ಭಾವನಾ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ವಾಸುದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಯೋಗ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್, ಗ್ಲೋಬಲ್ ಯೋಗ ಫೋರಂ:** 50ನೇ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್, ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10ರಿಂದ.

■ **ಕರ್ನಾಟಕ ಏಕೀಕರಣ ಟ್ರಸ್ಟ್ :** ಕರ್ನಾಟಕ ಏಕೀಕರಣ ಹೋರಾಟಗಾರರ ಉಪನ್ಯಾಸ ಮಾಲೆ, ಉದ್ಘಾಟನೆ: ಹಿರಿಯ ಸಾಹಿತಿ ಚ.ಸರ್ವಮಂಗಳ, ಸ್ಥಳ: ಚಿಂತನ ಚಾವಡಿ, ಕಲಾಮಂದಿರದ ಮುಂಭಾಗ, ಬೆಳಗ್ಗೆ 10ಕ್ಕೆ.

■ **ಸಹಜ ಸಮೃದ್ಧ:** ದೇಸಿ ಅಕ್ಕಿ ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ಸ್ವಾತಂತ್ರ್ಯೋತ್ಸವ ಅಂಗವಾಗಿ ಚಿತ್ರಕಲಾವಿದ ಯು.ಜಿ.ಮೋಹನ್ ಕುಮಾರ್ ಆರಾಧ್ಯ ರಚಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನ ಹಾಗೂ ಪೌರಕಾರ್ಮಿಕರೊಂದಿಗೆ ಸ್ವಾತಂತ್ರ್ಯೋತ್ಸವ ಆಚರಣೆ, ಉದ್ಘಾಟನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ, ಪೌರಕಾರ್ಮಿಕರಿಗೆ ಗೌರವಾರ್ಪಣೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಕಂದಾಯ ಉಪಆಯುಕ್ತ ಜಿ.ಎಸ್.ಸೋಮಶೇಖರ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಆಶಯ ನುಡಿ : ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

10.08.2025 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಧನಿಷ್ಠ ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಬಸವ ಸಮಿತಿ:** ಶರಣ ಸಂಗಮ, ದತ್ತಿ ಕಾರ್ಯಕ್ರಮ, ಪ್ರಶಾಂತ್ ಅವರಿಂದ ನಿತ್ಯ ಬದುಕಿಗೆ ಶರಣರ ತತ್ವಾದರ್ಶಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ಶ್ರೀ ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ, ಶ್ರೀ ರಾಘವೇಂದ್ರ ಸ್ವಾಮಿ ಪೂರ್ವಾರಾಧನೆ, ಸಂಜೆ ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ, ಬನ್ನಿಮಂಟಪ:** 35ನೇ ವಾರ್ಷಿಕೋತ್ಸವ ಅಂಗವಾಗಿ ವಿಶೇಷ ಪೂಜೆ, ಬೆಳಗ್ಗೆ 7ರಿಂದ ಗಣಪತಿ ಪೂಜೆ, ಗಾಯತ್ರಿ ಪ್ರತಿಪತ್ ಪ್ರಯುಕ್ತ ಶ್ರೀ ಗಾಯತ್ರಿ ದೇವಿ ಹೋಮ, ಮಧ್ಯಾಹ್ನ 2ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 5.30ರಿಂದ ವಿಷ್ಣುಸಹಸ್ರನಾಮ, ಶ್ರೀ ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಪೂಜೆ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಾಲಯ, ಹುಡ್ಕೋ 1ನೇ ಹಂತ, ಬನ್ನಿಮಂಟಪ.

■ **ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಬ್ಯಾರಿ ವೆಲ್‌ಫೇರ್ ಅಸೋಸಿಯೇಷನ್ :** ಬ್ಯಾರಿ ಕುಟುಂಬ ಸಮ್ಮಿಲನ, ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು: ಡಾ.ಮಕ್ಸೂದ್ ಅಹ್ಮದ್ ಮುಲ್ಕಿ (ಬ್ಯಾರಿ ಭಾಷೆ– ಸಂಘಟನೆ), ಪಿ.ಎಂ.ಹಸನಬ್ಬ ಮೂಡುಬಿದಿರೆ (ಬ್ಯಾರಿ ಕಲೆ–ಸಂಸ್ಕೃತಿ), ಹೈದರಾಲಿ ಕಾಟಿಪಳ್ಳ (ಬ್ಯಾರಿ ಸಾಹಿತ್ಯ), ಪ್ರಶಸ್ತಿ ಪ್ರದಾನ: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್, ಮುಖ್ಯ ಅತಿಥಿಗಳು: ಶಾಸಕ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸದಸ್ಯ ಜನಾಬ್ ಅತ್ತೂರು ಚೆಯ್ಯಬ್ಬ, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಶಿಯಸ್ ರೋಡ್ರಿಗಸ್, ವಸ್ತುಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್, ಅಧ್ಯಕ್ಷತೆ: ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್, ಸ್ಥಳ: ಎ.ಆರ್.ಕನ್ವೆನ್ಷನ್ ಸೆಂಟರ್, ಬೆಳಗ್ಗೆ 10.30 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ದಿವಂಗತ ಡಾ.ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಶಾಸಕ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ದತ್ತಿ ಪ್ರಶಸ್ತಿ ಪುರಸ್ಕೃತರು: ಸಾಹಿತಿ ಡಾ.ಸಿ.ನಾಗಣ್ಣ, ಅಭಿನಂದನಾ ನುಡಿ: ವಿಮರ್ಶಕ ಪ್ರೊ.ಕೆ.ತಿಮ್ಮಯ್ಯ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ಗಾಯತ್ರಿದೇವಿ ಅಮ್ಮನವರ ದೇವಸ್ಥಾನ :** ಕಳಶ ಸ್ಥಾಪನೆ ಮತ್ತು ಗಾಯತ್ರಿದೇವಿ ಅಮ್ಮನವರ ಹೋಮ, ಶ್ರೀ ಗಾಯತ್ರಿ ಪ್ರತಿಪತ್ ಪ್ರಯುಕ್ತ ಬೆಳಗ್ಗೆ 8ರಿಂದ ಶ್ರೀ ಮಹಾಗಣಪತಿ ಹೋಮ, ನವಗ್ರಹ ಹೋಮ, ಪರಿವಾರ ದೇವತಾ ಹೋಮ, ಶ್ರೀ ಗಾಯತ್ರಿದೇವಿ ಅಮ್ಮನವರ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 1ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಗಾಯತ್ರಿ ದೇವಿ ಅಮ್ಮನವರ ದೇವಸ್ಥಾನ, ಅರಮನೆ ಕೋಟೆ ಆವರಣ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ:** ಶ್ರೀ ಗುರುರಾಘವೇಂದ್ರ ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ, ಪೂರ್ವರಾಧನೆ, ಬೆಳಗ್ಗೆ 5.30ರಿಂದ ಸುಪ್ರಭಾತ, ಪಂಚಾಮೃತ ಅಭಿಷೇಕ, ಕನಕಾಭಿಷೇಕ, ಸರ್ವಸೇವೆ, ಬೆಳಗ್ಗೆ 11.30ಕ್ಕೆ ಅಲಂಕಾರ ಸೇವೆ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಶ್ರೀಮತಿ ಸಹನಾ ಮತ್ತು ವೃಂದದವರಿಂದ ದಾಸ ಲಹರಿ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀ ರಾಘವೇಂದ್ರ ಸ್ವಾಮಿ ಮಠ):** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ರಿಂದ ಸುಪ್ರಭಾತ, ಮಹಾಪಂಚಾಮೃತ ಅಭಿಷೇಕ, ಕನಕಾಭಿಷೇಕ, ಸರ್ವಸೇವೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30ರಿಂದ ವಿದುಷಿ ಸ್ಫೂರ್ತಿರಾವ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್–ವಯೋಲಿನ್, ವಿದ್ವಾನ್ ಹರಿಹರನ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ:ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ.

■ **ಶ್ರೀ ರಾಘವೇಂದ್ರ ಧಾಮ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5ರಿಂದ ನಿರ್ಮಾಲ್ಯ, ಪಂಚಾಮೃತ ಅಭಿಷೇಕ, ಅಷ್ಟೋತ್ತರ, ವಿದ್ವಾಂಸರಿಂದ ಪ್ರವಚನ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.45 ರಿಂದ ಸಂಗೀತ ಕಾರ್ಯಕ್ರಮ, 7ಕ್ಕೆ ಪಲ್ಲಕ್ಕಿ ಉತ್ಸವ, ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ, ಸ್ಥಳ:ಶ್ರೀ ರಾಘವೇಂದ್ರ ಧಾಮ, ಕಾರ್ತಿಕ ಬಡಾವಣೆ, ರಾಮಕೃಷ್ಣನಗರ.

■ **ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ ಆರಾಧನಾ ಮಹೋತ್ಸವ, ಬೆಳಗ್ಗೆ 7ರಿಂದ ಪಾದಪೂಜೆ, 9ಕ್ಕೆ ಪಂಚಾಮೃತ, 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 7ರಿಂದ ಸಂಗೀತ ಕಾರ್ಯಕ್ರಮ, ಪಲ್ಲಕ್ಕಿ ಉತ್ಸವ, ರಥೋತ್ಸವ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್, ವಿ.ವಿ.ಮೊಹಲ್ಲಾ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ:** ಶ್ರೀ ರಾಘವೇಂದ್ರ ಸ್ವಾಮಿಗಳವರ 354ನೇ ಆರಾಧನಾ ಮಹೋತ್ಸವ, ಸಂಜೆ 6 ಗಂಟೆಯಿಂದ ಸುಪ್ರಭಾತ, ಶ್ರೀ ರಾಘವೇಂದ್ರ ಅಷ್ಟಾಕ್ಷರ ಜಪ, ಹೋಮ, ಅಷ್ಟೋತ್ತರ ಸೇವೆ, ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6ರಿಂದ ಉಪನ್ಯಾಸ ಹಾಗೂ ಸಂಗೀತ ಸೇವೆ, ರಾತ್ರಿ 9.30ರಿಂದ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ತೊಟ್ಟಿಲು ಸೇವೆ, ವಾಹನೋತ್ಸವ, ಹೋಮ, ವಿಶೇಷ ಪೂಜೆ, ಬೆಳಗ್ಗೆ 8 ಗಂಟೆಗೆ ಶ್ರೀ ಸೋಮನಾಥೇಶ್ವರ ದೇವಸ್ಥಾನದಿಂದ ವಾಹನೋತ್ಸವ, ಸ್ಥಳ: 29, ಸಾರ್ವಭೌಮ, 3ನೇ ಬ್ಲಾಕ್, ಸೋಮನಾಥನಗರ, ದಟ್ಟಗಳ್ಳಿ 3ನೇ ಹಂತ.

■ **ಪ್ರಜಾಪತಿ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ:** ರಕ್ಷಾಬಂಧನ ಮಹೋತ್ಸವ, ಸಾನ್ನಿಧ್ಯ : ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಬೆಳಗ್ಗೆ 11.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ರೋಹಿಣಿ ಸುಧಾಮ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಡಾ.ರಾಜ್‌ಕುಮಾರ್, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಫಿಸಿಯೋಥೆರಪಿ ಕುರಿತು ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಸ್ವಸ್ಥವೃತ್ತ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಫಿಸಿಯೋಥೆರಪಿಸ್ಟ್ ಡಾ.ಬಿ.ಸಿ.ಶ್ರೀಧರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ, ಕಥೆ ಕೇಳು ಪುಟ್ಟ, ಪ್ರಸ್ತುತಿ–ಬಿ.ಜಿ.ಕವಿತ, 10.30 KRISH -TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ –ಮೈಸೂರಿನ ವಿಶ್ವೇಶ್ವರನಗರದ ಡಿ.ಎ.ವಿ ಪಬ್ಲಿಕ್ ಶಾಲೆಯ ಮಕ್ಕಳಿಂದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.00ವನಿತಾ ವಿಹಾರ–ಮಹಿಳಾ ಸ್ವಾವಲಂಬನೆಗೆ ಪೂರಕವಾಗಿರುವ ಕೇಂದ್ರ ಸರಕಾರದ ಆರ್ಥಿಕ ಸಹಾಯ ಯೋಜನೆಗಳ ಬಗ್ಗೆ ಕೆನರಾ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮ್ಯಾನೇಜರ್ ಆರ್.ಗಣೇಶ್ ಅವರೊಡನೆ ಸಂದರ್ಶನ, ಸಂದರ್ಶಕರು–ಕೆ.ಎಲ್.ರಾಜೇಶ್ವರಿ, 12.35 ದೇವರನಾಮ, 12.45 ಜನಪದ ಸಂಗೀತ: ಮೈಸೂರಿನ ಯರಗನ ಹಳ್ಳಿಯ ಸಿದ್ಧಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು–ಜೆ.ಎನ್ ಧರಿತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಬಲಗಾಲಿಟ್ಟು ಒಳಗೆ ಬಾ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ–ಸಿಕ್ಕಿಲ್ ಮಾಲಾ ಚಂದ್ರಶೇಖರ್–ವೇಣುವಾದನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ:– ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಶ್ರೀಧರ್, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಸುಭದ್ರ ಕಲ್ಯಾಣದ ಗೀತೆಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ–ಅರ್ಚನ .ಎಲ್ –ಹಾಡುಗಾರಿಕೆ

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ:** ಪ್ರಕಾಶ್ ಪುಟ್ಟಪ್ಪರ ಕಥಾ ಸಂಕಲನ 'ಗಾಂಧೀ ಜೋಡಿನ ಮಳಿಗೆ' ಕುರಿತು ಸಂಸ್ಕೃತಿ ಚಿಂತಕ ಮಹೇಶ್ ಹರವೆ ಅವರಿಂದ ಮಾತು, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ರಾಜ್ಯ ಮಟ್ಟದ ಸಮಾವೇಶ, ಒಕ್ಕೂಟದ ಚುನಾವಣೆ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪುಷ್ಪಾರ್ಚನೆ: ಶಾಸಕ ಅನಿಲ್ ಚಿಕ್ಕಮಾದು, ಪ್ಲಾಗ್ ಬಿಡುಗಡೆ: ಶಾಸಕ ಯತೀಂದ್ರ, ಅಧ್ಯಕ್ಷತೆ: ಒಕ್ಕೂಟದ ಅಧ್ಯಕ್ಷ ಮಹದೇವು, ಉಪಸ್ಥಿತರು: ಸಂಸದ ಸುನೀಲ್ ಬೋಸ್, ಶಾಸಕ ದರ್ಶನ್ ಧ್ರುವನಾರಾಯಣ್, ಹರೀಶ್‌ಗೌಡ, ಡಾ.ತಿಮ್ಮಯ್ಯ, ಸ್ಥಳ: ಕಲಾಮಂದಿರ, ಮಧ್ಯಾಹ್ನ 12.30ಕ್ಕೆ.

■ **ಶಾಂತಲಾ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ :** ಲಯ ಮಾಧುರ್ಯ, ಸಂಗೀತ, ಭರತನಾಟ್ಯ, ಕಥಕ್, ಕ್ರೋರಿಯೋಗ್ರಫಿ ನಂದಿನಿ ಈಶ್ವರ್, ಶಾಂತಲಾ ವಟ್ಟಮ್, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಕೃತಜ್ಞತೆಯಿಂದ ಸಂತೃಪ್ತಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ಸಂಜನಾ ಕೌಶಿಕ್ ಅವರಿಂದ ಹಿಂದೂಸ್ಥಾನಿ ಗಾಯನ, ಪಂಡಿತ್ ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ಪಂಡಿತ್ ಪರಮೇಶ್ವರ ಹೆಗ್ಡೆ–ತಬಲಾ, ಸ್ಥಳ: ಜಯನಗರ ಶ್ರೀರಾಮಮಂದಿರ, ಸಂಜೆ 6 ರಿಂದ.

■ **ನಿನಾದ್ ಮ್ಯೂಸಿಕಲ್ ಟ್ರಸ್ಟ್:** ವಿದ್ಯಾರ್ಥಿಗಳಿಂದ ಕೀಬೋರ್ಡ್ ವಾದನ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣಮಾಸ ಪೂಜಾನುಷ್ಠಾನ, ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ. ವಸಂತ ಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ:** ಶ್ರೀ ರಾಘವೇಂದ್ರ ಸ್ವಾಮಿಗಳವರ 354ನೇ ಆರಾಧನಾ ಮಹೋತ್ಸವ, ಪೂರ್ವಾರಾಧನೆ, ಬೆಳಗ್ಗೆ 7ರಿಂದ ಉತ್ಸವ ರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಾತ್ರಿ 8ಕ್ಕೆ ವಿದುಷಿ ಶ್ರೀಮತಿ ಅನಸೂಯ ಸುದರ್ಶನ್ ಅವರಿಂದ ದಾಸವಾಣಿ ಕಾರ್ಯಕ್ರಮ, ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕರಾದ ಟಿ.ಎಸ್.ಶ್ರೀವತ್ಸ, ಹರೀಶ್‌ಗೌಡ, ಸನ್ಮಾನಿತರು: ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್, ಕೊಳಲು ವಾದಕ ವಿದ್ವಾನ್ ಎ.ಚಂದನ್ ಕುಮಾರ್, ಸುಧರ್ಮ ಸಂಸ್ಕೃತ ಪತ್ರಿಕೆಯ ಪದ್ಮಶ್ರೀ ಪುರಸ್ಕೃತರಾದ ಶ್ರೀಮತಿ ಕೆ.ಎಲ್. ಜಯಲಕ್ಷ್ಮೀ, ಡಾ. ಕೃಷ್ಣಾಚಾರ್ ಗಡಚಿಂತಿ, ಗುತ್ತಿಗೆದಾರ ಎಂ.ಮನೋಹರ್, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ, ಸಂಜೆ 6ಕ್ಕೆ.

■ **ರಂಗಾಯಣ :** ಕೇರಳದ ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್‌ನ ಕಲಾವಿದರಿಂದ ಕುಹೂ ನಾಟಕ ಪ್ರದರ್ಶನ, ನಿರ್ದೇಶನ : ಅರುಣ್‌ಲಾಲ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು : ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30 ರಿಂದ.

■ **ಬೆಂಗಳೂರಿನ ರಂಗ ಸಂಪದ ಕಲಾ ತಂಡ :** ರಂಗ ಸಂಪದ ಕಲಾವಿದರಿಂದ ಶರ್ಮಿಷ್ಠೆ ನಾಟಕ ಪ್ರದರ್ಶನ, ಸ್ಥಳ: ಕಿರುರಂಗಮಂದಿರ, ರಂಗಾಯಣ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಆಗಸ್ಟ್ 10 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 114 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಮುಂದಿನ ಚುನಾವಣೆಯಲ್ಲೂ ನನಗೆ ಶಕ್ತಿ ತುಂಬಿ

ವರುಣ ಕ್ಷೇತ್ರದ ಜನತೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ



■ ಮತ್ತೆ ಸದರಿ ಕ್ಷೇತ್ರದಲ್ಲೇ ಸ್ಪರ್ಧಿಸುವ ಸುಳಿವು ನೀಡಿದ ಸಿಎಂ ■ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಮಹಿಳೆಯರು, ರೈತರು ದುರ್ಬಲ ವರ್ಗದವರಿಗೆ ಶಕ್ತಿ ತುಂಬುವ ಕಾರ್ಯವಾಗಿದೆ ■ ವರುಣ ಕ್ಷೇತ್ರ ವ್ಯಾಪ್ತಿ 1107.72 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ; ಸವಲತ್ತು ವಿತರಣೆ

ಮೈಸೂರು,ಆ.9(ಜಿಎ)–ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಕಾರ್ಯಗಳ ಜೊತೆಗೆ ಬಡವರು, ರೈತರು, ಮಹಿಳೆಯರು, ಕಾರ್ಮಿಕರಿಗೆ ಸಾಮಾಜಿಕ, ಆರ್ಥಿಕವಾಗಿ ಶಕ್ತಿ ತುಂಬುವ ಕೆಲಸ ಮಾಡಲಾಗಿದೆ. ಮಾಡುವ ಕೆಲಸದಲ್ಲಿ ಗುಲಗಂಜಿಯಷ್ಟಾದರೂ ಹೆಚ್ಚಾಗಿ ವರುಣಾ ಕ್ಷೇತ್ರಕ್ಕೆ ಮಾಡುತ್ತೇನೆ. ಹೀಗಾಗಿ ಮುಂದಿನ ಚುನಾವಣೆಯಲ್ಲೂ ನನಗೆ ಶಕ್ತಿ ತುಂಬಿ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ವರುಣದಿಂದಲೇ ಮತ್ತೆ ತಾವು ಸ್ಪರ್ಧಿಸುವ ಸುಳಿವು ನೀಡಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1107.72 ಕೋಟಿ ರೂ. ವೆಚ್ಚದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಿಸಿ, ಅವರು ಮಾತನಾಡಿದರು.

ಸಮಾಜದಲ್ಲಿ ಬಡವ, ಶ್ರೀಮಂತ ಎಂಬ ವ್ಯವಸ್ಥೆ ಇರದೇ ಎಲ್ಲರಿಗೂ ಸಮಾನವಾದ ಅವಕಾಶ ಸಿಗಬೇಕು ಎಂಬ ಉದ್ದೇಶದಿಂದ ಅನೇಕ ಯೋಜನೆ ರೂಪಿಸಲಾಗಿದ್ದು, ನೀರಾವರಿ, ಲೋಕೋಪಯೋಗಿ ಸೇರಿದಂತೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುತ್ತದೆ ಎಂದರು.

2013ರ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್‌ನಿಂದ 163 ಭರವಸೆಗಳನ್ನು ನೀಡಿದ್ದೆವು. ಇದರಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ರೈತರ, ಬಡವರ, ಶೋಷಿತರ ಪರ ಕೆಲಸ ಮಾಡಿದ್ದೇವೆ. 5 ಗ್ಯಾರಂಟಿ ಯೋಜನೆಗಳನ್ನು ನೀಡುವುದಾಗಿ ಭರವಸೆ ನೀಡಿದ್ದೆವು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಅನ್ನ ಭಾಗ್ಯ, ಶಕ್ತಿ ಯೋಜನೆ, ಗೃಹಲಕ್ಷ್ಮಿ, ಗೃಹ ಜ್ಯೋತಿ ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಬಡವರ ಏಳಿಗೆಗೆ ಆರ್ಥಿಕ ಅಸಮಾನತೆ ಹೋಗಲಾಡಿಸಲು ಕ್ರಮ ವಹಿಸಿದ್ದೇವೆ. ಗ್ಯಾರಂಟಿಗಳಿಗೆ ವಾರ್ಷಿಕ 55 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದರು.

> “ವರುಣಾ ಕ್ಷೇತ್ರದಲ್ಲಿ ಗೆದ್ದ ಎರಡು ಬಾರಿಯೂ ಮುಖ್ಯಮಂತ್ರಿಯಾಗಿದ್ದೇನೆ. ಇದಕ್ಕೆ ನಾನು ಈ ಕ್ಷೇತ್ರದ ಜನತೆಗೆ ಚಿರಋಣಿಯಾಗಿದ್ದೇನೆ. ಅದಕ್ಕೂ ಮುನ್ನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 1983ರಲ್ಲಿ ಮೊದಲ ಬಾರಿ ನಾನು ಪಕ್ಷೇತರನಾಗಿ ಗೆದ್ದು ಶಾಸಕನಾಗಿ, ಅದೇ ವರ್ಷ ಸಚಿವನಾದೆ. ನಾನು ಸಚಿವನಾಗಿ 41 ವರ್ಷಗಳಾಗಿವೆ. 5 ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆದ್ದಿದ್ದೇನೆ. ಆ ಕ್ಷೇತ್ರದ ಜನರಿಗೂ ಧನ್ಯವಾದಗಳು.
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿಯವರು ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎಂದು ಸುಳ್ಳು ಹಬ್ಬಿಸುತ್ತಿದ್ದಾರೆ. 5 ಗ್ಯಾರಂಟಿ ಘೋಷಣೆ ಮಾಡಿದಾಗ, ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ಮುಖಂಡರು ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೆ ನೀಡಿದರು. ನಾವು ಅಧಿಕಾರಕ್ಕೆ ಬಂದು ಇಂದಿಗೆ 2.2 ವರ್ಷವಾಗಿದೆ. ನಾವು ನೀಡಿದ ಯೋಜನೆ ಜಾರಿಯಾಗಿದೆ. ಸರ್ಕಾರದಲ್ಲಿ ಬೊಕ್ಕಸ ಖಾಲಿಯಾಗಿದ್ದರೆ, 1107.72 ಕೋಟಿ ರೂ. ಮೌಲ್ಯದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ಮೇಲೆ ಕರ್ನಾಟಕದ ತಲಾ ಆದಾಯದಲ್ಲಿ ಮೊದಲ ಸ್ಥಾನದಲ್ಲಿ ಇದೆ. ಗ್ಯಾರಂಟಿ ಯೋಜನೆಗಳಿಂದ ಜನರ ಕೈಗೆ ಹಣ ಸಿಕ್ಕಿ ಆರ್ಥಿಕ ಚಟುವಟಿಕೆಗಳು ಹೆಚ್ಚಾದವು. ಜಿಎಸ್‌ಟಿ ತೆರಿಗೆ ಪಾವತಿಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ನಾವು 2023ರ ಚುನಾವಣೆಗೆ ಮೊದಲು 542 ಭರವಸೆಗಳನ್ನು ನೀಡಿದ್ದೆವು. ಅದರಲ್ಲಿ 242 ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದುಕೊಂಡಿದ್ದೇವೆ ಎಂದರು.

▶ 10ನೇ ಪುಟಕ್ಕೆ

ನಾಳೆಯಿಂದ ವಿಧಾನಮಂಡಲ ಅಧಿವೇಶನ


ಆಡಳಿತ–ವಿಪಕ್ಷಗಳ ನಡುವೆ ಜನಪರತೆಗಿಂತ ಪ್ರತಿಷ್ಠೆ ಮೇಳೈಸುವ ಸಾಧ್ಯತೆ!



ಬೆಂಗಳೂರು, ಆ. 9(ಕೆಎಂಶಿ)–ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲದ ಅಧಿವೇಶನ ಆಡಳಿತ ಮತ್ತು ಪ್ರತಿಪಕ್ಷದ ನಡುವೆ ತೀವ್ರ ಮಾತಿನ ಸಮರಕ್ಕೆ ಕಾರಣವಾಗಲಿದೆ.

ಹಣಕಾಸು ಇಲಾಖೆ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಫೆಬ್ರವರಿ–ಮಾರ್ಚ್‌ನಲ್ಲಿ ಮಂಡಿಸಿದ 2025–26ನೇ ಸಾಲಿನ ಮುಂಗಡಪತ್ರ ಅಧಿವೇಶನ ನಂತರದ ಅಧಿವೇಶನ ಇದಾಗಿದೆ.

ಕಳೆದ ನಾಲ್ಕು ತಿಂಗಳಲ್ಲಿ ರಾಜ್ಯದ ಜನತೆ ಎದುರಿಸಿರುವ ಸಮಸ್ಯೆಗಳ ಜೊತೆಗೆ ಮತಗಳ್ಳತನ ಆರೋಪ, ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತದಿಂದ ಉಂಟಾದ ಸಾವು–ನೋವು. ವಿಜಯೋತ್ಸವದಲ್ಲಿ ಸರ್ಕಾರದ್ದೇ ಲೋಪವಿದ್ದರೂ ಪೊಲೀಸರು ಮತ್ತು ಸಂಸ್ಥೆಗಳ ಮೇಲೆ ಆರೋಪ ಹೊರಿಸಿದ ವಿಷಯ ಚರ್ಚೆಗೆ ಗ್ರಾಸವಾಗಲಿದೆ. ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆಯಿಂದ ಆರಂಭಗೊಂಡ ಕೃಷಿ ಚಟುವಟಿಕೆಗೆ ಅಗತ್ಯ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಯಲ್ಲಿ ವೈಫಲ್ಯ ಸೇರಿದಂತೆ ಇನ್ನೂ ಹಲವು ವಿಚಾರಗಳ ಕುರಿತು ಪ್ರತಿಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಜ್ಜಾಗಿವೆ.





ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಪಕ್ಕದ ಮನೆಯವರು ನಮ್ಮನ್ನು ಊಟಕ್ಕೆ ಕರೆದಿದ್ದಾರೆ. ಹೋಗೋಣ ಬನ್ನಿ.
ಗುಂಡ : ಏನ್ ವಿಶೇಷ?
ಹೆಂಡತಿ : ಅವರ 3ನೇ ಹೆಂಡತಿ ತಿಥಿ. ಅದಕ್ಕೆ.
ಗುಂಡ : ನಾನು ಬರೋಲ್ಲ ನಾಚಿಕೆಯಾಗುತ್ತೆ.
ಹೆಂಡತಿ : ತಿಥಿಗೆ ಹೋಗೋಕೆ ಅದೆಂತಹ ನಾಚಿಕೆ.
ಗುಂಡ : ಏಕೆಂದರೆ ಅವರು ಮೂರು ಬಾರಿ ತಿಥಿಗೆ ಕರೆದಿದ್ದಾರೆ. ನಾನು ಅವರನ್ನು ಒಮ್ಮೆಯೂ ಕರೆದಿಲ್ಲ.

ಮೈಸೂರು ಮಿತ್ರ

ಭಾನುವಾರ, 10 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಉತ್ತಮ ನಿರ್ಧಾರಗಳು ಯಾವತ್ತೂ ಅನುಭವದಿಂದ ಬಂದಂಥವೇ ಆಗಿರುತ್ತವೆ. ಆದರೆ ಅಂತಹ ಬಹಳಷ್ಟು ಅನುಭವಗಳಿಗೆ ಮೂಲ ಕೆಟ್ಟ ನಿರ್ಧಾರಗಳೇ ಆಗಿರುತ್ತವೆ. – ವಿಲ್ ರೋಜರ್ಸ್, ಅಮೆರಿಕ ನಟ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ.

ನಿಮ್ಮ ಪತ್ರಗಳು

■ ಜಿಲ್ಲಾಡಳಿತದ ಬೇಜವಾಬ್ದಾರಿತನ!



ಮಾನ್ಯರೆ,

ದಸರೆ ಸಮೀಪಿಸುತ್ತಿದ್ದಂತೆಯೇ ಗಜ ಪಡೆ ಮೈಸೂರನ್ನು ಪ್ರವೇಶಿಸುತ್ತವೆ. ಮೈಸೂರಿಗೆ ಆಗಮಿಸುವ ಈ ಗಜಪಡೆಯನ್ನು ಲಾರಿಯಿಂದ ಇಳಿಸಿಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ. ದಸರೆಗಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುವ ಜಿಲ್ಲಾಡಳಿತ ಹಾಗೂ ಸರಕಾರದ ಬೇಜವಾಬ್ದಾರಿಗೆ ಇದೇ ಸಾಕ್ಷಿ!

ದಸರೆಯ ಪ್ರಮುಖ ಆಕರ್ಷಣೆಯೇ ಈ ಗಜಪಡೆ. ಇಂತಹ ಗಜಪಡೆಯನ್ನು ಲಾರಿಗಳಿಂದ ಕೆಳಗಿಳಿಸಲು ಹಾಗೂ ಲಾರಿಗೆ ಹತ್ತಿಸಲು ಅನುಕೂಲವಾಗುವಂತೆ ಅರಣ್ಯ ಭವನ ಹಾಗೂ ಅರಮನೆಯ ಬಳಿ ರ್‍ಯಾಂಪ್ ಅಥವಾ ಅಟ್ಟಣಿಗೆಯನ್ನು ಶಾಶ್ವತವಾಗಿ ನಿರ್ಮಿಸಲು ಏನು ಅಡ್ಡಿ? ಆನೆಗಳನ್ನು ನಿರ್ಜೀವ ಸರಕುಗಳಂತೆ ಲಾರಿಯಿಂದ ಇಳಿಸುವುದು ಹಾಗೂ ಲಾರಿಗೆ ಹತ್ತಿಸುವುದು ದೌರ್ಜನ್ಯವೇ ಸರಿ! ಈ ಕೂಡಲೇ ಜಿಲ್ಲಾಡಳಿತವು ಎಚ್ಚೆತ್ತು ಗಜಪಡೆಯು ಲಾರಿಯಿಂದ ಇಳಿಯಲು ಹಾಗೂ ಹತ್ತಲು ಅನುಕೂಲವಾಗುವಂತೆ ಎರಡೂ ಕಡೆ ಅಟ್ಟಣಿಗೆ ಅಥವಾ ರ್‍ಯಾಂಪ್ ನಿರ್ಮಿಸಿ ಜವಾಬ್ದಾರಿ ಮೆರೆಯಲಿ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಮತ ಕಳವು ಬಗ್ಗೆ ಎಫ್‌ಐಆರ್ ದಾಖಲಾಗಲಿ

ಮಾನ್ಯರೆ,

ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು 'ಮತ ಕದ್ದು ಮೋದಿ ಪ್ರಧಾನಿಯಾಗಿದ್ದಾರೆ' ಎಂಬ ಗಂಭೀರ ಆರೋಪ ಮಾಡಿದ್ದಾರೆ. ಚುನಾವಣಾ ಆಯೋಗ ನಿಮ್ಮ ಆರೋಪವನ್ನು ಪ್ರಮಾಣ ಪತ್ರದೊಂದಿಗೆ ಸಹಿ ಮಾಡಿ ಕಳುಹಿಸಿ ಎಂದಿದೆ. ರಾಹುಲ್ ಅವರು ಮಾಡಿರುವ ಆರೋಪಗಳು ಸುಳ್ಳು ಎಂದಾದರೆ ಅವರು ಪ್ರಮಾಣ ಪತ್ರ ಸಲ್ಲಿಸದೆ ಇದ್ದರೂ ಚುನಾವಣಾ ಆಯೋಗ ಅವರ ಮೇಲೆ ಸುಳ್ಳು ಸುದ್ದಿ ಹರಡಿರುವ ಆರೋಪದಡಿ ಎಫ್‌ಐಆರ್ ದಾಖಲಿಸಬೇಕು. ಇಲ್ಲದೇ ಹೋದಲ್ಲಿ ಸಾಮಾನ್ಯ ಜನರ ಮನದಲ್ಲಿ ಸಂಶಯಗಳು ಉಳಿದು ಬಿಡುತ್ತವೆ. ಚುನಾವಣಾ ಆಯೋಗದ ಮೇಲೆ ಗುರುತರ ಜವಾಬ್ದಾರಿ ಇದೆ.

–ಲಕ್ಷ್ಮಣ್ ಗೊರ್ಲಕಟ್ಟೆ, ಬೋಗಾದಿ, ಮೈಸೂರು

■ ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಹೆಚ್. ಡಿ. ಕೋಟೆ ತಾಲೂಕಿನಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಇದೆ. ಈ ಆಸ್ಪತ್ರೆಗೆ ದಿನನಿತ್ಯ ರೋಗಿಗಳು ಬರುತ್ತಾರೆ. ಆದರೆ ಈ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಿಷನ್ ಇದ್ದರೂ ರೋಗಿಗಳನ್ನು ಖಾಸಗಿ ಸೆಂಟರ್‌ಗಳಿಗೆ ಕಳುಹಿಸುತ್ತಾರೆ. ಬಡ ರೋಗಿಗಳು ಹಾಗೂ ಕೂಲಿ ಕಾರ್ಮಿಕರು ಖಾಸಗಿ ಸೆಂಟರ್‌ನಲ್ಲಿ ಸ್ಕ್ಯಾನಿಂಗ್ ಮಾಡಿಸಲು 1000 ದಿಂದ 2000 ರೂ. ಕೊಡಬೇಕಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಕಡು ಬಡತನದ ರೋಗಿಗಳಿಗೆ ಈ ವ್ಯವಸ್ಥೆ ಸರಿ ಹೋಗುತ್ತಿಲ್ಲ. ಆಸ್ಪತ್ರೆಯ ಡಾಕ್ಟರುಗಳು ಸರ್ಕಾರದಿಂದ ಬರುವ ಸೌಲಭ್ಯ ಪಡೆದು ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಹಾಗೂ ಇತರ ಚಿಕಿತ್ಸೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಹಾಗೆ ಒಬ್ಬ ರೋಗಿಗೆ ರಕ್ತ ಬೇಕು ಅಂದರೆ ಅವರನ್ನು ಮೈಸೂರು ಕೆ.ಆರ್. ಆಸ್ಪತ್ರೆಗೆ ಕಳುಹಿಸುತ್ತಾರೆ. ರೋಗಿಗಳು ಕೋಟೆಯಿಂದ ಮೈಸೂರು ಕಡೆಗೆ ಹೋಗಬೇಕಾದರೆ ತುಂಬಾ ಕಷ್ಟದ ಕೆಲಸವಾಗಿದೆ. ಆದುದರಿಂದ ಈ ಎಲ್ಲಾ ವ್ಯವಸ್ಥೆ ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ದೊರೆತರೆ ರೋಗಿಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ. ಆರೋಗ್ಯ ಮಂತ್ರಿಗಳು, ಶಾಸಕರು, ಸಂಸದರು ಇತ್ತ ಗಮನಹರಿಸಿ ಅನುಕೂಲ ಮಾಡಿಕೊಡಬೇಕಾಗಿ ವಿನಂತಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ. ಕೋಟೆ ತಾಲೂಕು

■ ನಂ.ಗೂಡು – ದೇಬೂರು ರಸ್ತೆ ಗುಂಡಿ ಮುಚ್ಚಿ



ಮಾನ್ಯರೆ,

ನಾನು ದೇಬೂರು ಸರ್ಕಾರಿ ಆದರ್ಶ ಶಾಲೆಯ 8 ತರಗತಿಯ ವಿದ್ಯಾರ್ಥಿಯಾಗಿದ್ದು, ನಂಜನಗೂಡು ಮತ್ತು ಹುಲ್ಲಹಳ್ಳಿ ಮುಖ್ಯ ರಸ್ತೆಯಲ್ಲಿ ಬರುವ ಬಸವನಗುಡಿ ದೇವಸ್ಥಾನದಿಂದ ದೇಬೂರಿನ ಮಧ್ಯೆ ನಮ್ಮ ಶಾಲೆಯ ನಡುವೆ ಇರುವ ರಸ್ತೆಯಲ್ಲಿ ತುಂಬಾ ಗುಂಡಿಗಳಿವೆ. ಇದರಿಂದ ಪ್ರಯಾಣ ಮಾಡುವುದು ದುಸ್ತರವಾಗಿದೆ. ಮಳೆಗಾಲದಲ್ಲಿ ಈ ಗುಂಡಿಗಳಲ್ಲಿ ನೀರು ತುಂಬುವುದರಿಂದ ಆಯಾ ತಪ್ಪಿ ಬಿದ್ದು ಅಪಘಾತಗಳು ಸಂಭವಿಸಿವೆ. ಜೀವಭಯದಿಂದ ವಾಹನವನ್ನು ಚಾಲನೆ ಮಾಡುವ ದುರ್ಗತಿ ಬಂದಿದೆ. ನಿತ್ಯವೂ ನರಕಯಾತನೆಯನ್ನ ವಾಹನ ಸವಾರರು ಅನುಭವಿಸುತ್ತಿದ್ದಾರೆ. ಪ್ರತಿ ದಿನ ಸಾವಿರಾರು ವಾಹನಗಳು ಈ ರಸ್ತೆಯಲ್ಲಿ ಸಂಚಾರ ಮಾಡುತ್ತವೆ. ವಿದ್ಯಾರ್ಥಿಗಳು, ಶಿಕ್ಷಕರು, ಅಧಿಕಾರಿಗಳು, ರೈತರು, ಸಾರ್ವಜನಿಕರು, ವ್ಯಾಪಾರಸ್ಥರು ತುಂಬಾ ಕಷ್ಟಪಟ್ಟು ಪ್ರಯಾಣಿಸುತ್ತಾರೆ. ಇದು ಸರಗೂರು ತಾಲೂಕನ್ನು ಸಂಪರ್ಕಿಸುವ ಮುಖ್ಯ ರಸ್ತೆಯಾಗಿದ್ದು, ನಂಜನಗೂಡು ನಗರ ಹಾಗೂ ಹುಲ್ಲಹಳ್ಳಿ ರಸ್ತೆಯನ್ನು ಸಂಪರ್ಕಿಸುತ್ತವೆ. ಈ ರಸ್ತೆಯಲ್ಲಿ ಕೆಎಸ್ಆರ್‌ಟಿಸಿ ಬಸ್‌ಗಳು, ಲಾರಿಗಳು ಸಹ ಓಡಾಡುತ್ತವೆ.

ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನಮ್ಮ ಶಾಲೆಯ ಹತ್ತಿರದ ಪೆಟ್ರೋಲ್ ಪಂಪ್‌ಹೌಸ್ ಉದ್ಘಾಟನೆಗೆ ಬಂದಾಗ ತರಾತುರಿಯಲ್ಲಿ ರಸ್ತೆಯನ್ನು ಪಿಡಬ್ಲ್ಯುಡಿ ಇಲಾಖೆಯು ಕಡಿಮೆ ಗುಣಮಟ್ಟದ ಡಾಂಬರು ಹಾಕಿ, ಮಾಡಿದೆ. ಆದರೆ ಕೆಲವೇ ದಿನಗಳಲ್ಲಿ ಅದು ಸಂಪೂರ್ಣವಾಗಿ ಹಾಳಾಗಿದ್ದು ಗುಂಡಿಮಯವಾಗಿದೆ. ಆದ್ದರಿಂದ ಈ ರಸ್ತೆಯನ್ನು ಉತ್ತಮ ಗುಣಮಟ್ಟದಲ್ಲಿ ಸರಿಪಡಿಸಿ ಶಾಶ್ವತ ಪರಿಹಾರ ಒದಗಿಸಬೇಕು.


–ದಿನಂತ್, ದೇಬೂರು, ನಂಜನಗೂಡು ತಾಲೂಕು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕಾರ್ಯ ನಿಯೋಜಿತ ಹೋರಾಟವೇ ನಮ್ಮ ಹೆಮ್ಮೆಯ ಸೈನಿಕರ ಧರ್ಮ!



"ಶಸ್ತ್ರಗಳಲ್ಲಿ, ಯುದ್ಧ ತಂತ್ರಗಳಲ್ಲಿ ಹಿಂದಿನ ಹಾಗೂ ಇಂದಿನ ಯುದ್ಧದ ರೀತಿಯಲ್ಲಿ ಬಹಳ ವ್ಯತ್ಯಾಸಗಳಿವೆ. ಇಂದು ಬಳಸಲಾಗುವ ಡ್ರೋನ್, ಅತ್ಯಾಧುನಿಕ ಕ್ಷಿಪಣಿಗಳು ಅಂದು ಎಲ್ಲಿದ್ದುವು? ಅಂದು ಶತ್ರು ಪಾಳಯಕ್ಕೇ ನುಗ್ಗಿ ಸದೆ ಬಡಿಯಬೇಕಾದ ಪರಿಸ್ಥಿತಿ. ಇಂದಿನ ಯುದ್ಧತಂತ್ರಕ್ಕೆ ಇತ್ತೀಚೆಗೆ ನಡೆದ ಆಪರೇಷನ್ ಸಿಂಧೂರವೇ ಸಾಕ್ಷಿ. ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಿಗುವ ಮೂಲಭೂತ ಹಕ್ಕುಗಳನ್ನು ಸೈನಿಕನಾದ ಕೂಡಲೇ ಕಳೆದುಕೊಳ್ಳುವ, 38–42 ವಯಸ್ಸಿಗೇ ನಿವೃತ್ತರಾಗುವ, ದೇಶಸೇವೆಗಾಗಿ ಸದಾ ಸಿದ್ಧರಿರುವ, ನಮ್ಮ ಜವಾನ್‌ಗಳಿಗೆ ಅತೀ ದೊಡ್ಡ ಗೌರವ ಸಲ್ಲಬೇಕು.

ಅದು ಜಗತ್ತಿನ ಪ್ರಥಮ ಮಹಾಯುದ್ಧದ ಸಮಯ. ಒಂದು ಪಾಯಿಂಟ್ ಮೂರು ಮಿಲಿಯನ್‌ಗೂ ಹೆಚ್ಚಿನ ಭಾರತೀಯ ಸೈನಿಕರು ಅದರಲ್ಲಿ ಭಾಗಿಯಾಗಿದ್ದರು. ಬ್ರಿಟನ್ನಿನ ಕರೆಗೆ ಓಗೊಟ್ಟು ಅವರು ಹಳ್ಳಿ ಹಳ್ಳಿಗಳಿಂದ ಕದನದ ಕಂದಕಕ್ಕೆ ಇಳಿದಿದ್ದರು. ಪಂಜಾಬಿನಿಂದ ಬಂಗಾಲದವರೆಗೆ, ಹಳ್ಳಿಗಳಿಂದ, ಬೆಟ್ಟಗುಡ್ಡಗಳಿಂದ, ಹೊಲಗದ್ದೆಗಳಿಂದ ಸಿಖ್, ಹಿಂದೂ, ಮುಸ್ಲಿಮ್, ಗೂರ್ಖಾಗಳು ತಮ್ಮ ಪ್ರಾರ್ಥನೆಗಳನ್ನು, ಕುದುರೆಗಳನ್ನು, ಪರಮ ನಿಷ್ಠೆಯನ್ನು ತಮ್ಮೊಡನೆ ಒಯ್ದಿದ್ದರು. ಕೆಲವರು ತಮಟೆಯನ್ನು, ಕೆಲವರು ತಮ್ಮ ಪವಿತ್ರ ಗ್ರಂಥಗಳನ್ನು ತಮ್ಮೊಡನೆ ತೆಗೆದುಕೊಂಡು ಹೋಗಿದ್ದರು. ಮತ್ತೂ ಕೆಲವರು ತಮ್ಮ ಆಶಾಭಾವನೆ ಮತ್ತು ಕರ್ತವ್ಯ ನಿಷ್ಠೆಯನ್ನಲ್ಲದೆ ಬೇರೇನನ್ನೂ ತೆಗೆದುಕೊಂಡು ಹೋಗಿರಲಿಲ್ಲ. 1915ರ ಮಾರ್ಚ್, ಭಾರತೀಯರ ಈ ಸೇನೆಯನ್ನೇ ನ್ಯೂ ಷೇಫೆಲ್‌ನ ಮೊದಲ ಆಕ್ರಮಣಕ್ಕೆ ಬಳಸಲಾಗಿತ್ತು. ಜರ್ಮನ್ನರ ಕಂದಕವನ್ನು ಛಿದ್ರಗೊಳಿಸಿ ಇಡೀ ಯೂರೋಪೇ ದಂಗುಬಡಿವಂತೆ ಮಾಡಿತು ಈ ಭಾರತೀಯ ಸೇನಾ ತುಕಡಿ. ಲೀ ಎನ್‌ಫೀಲ್ಡ್ ರೈಫಲ್, ಗ್ರನೇಡ್ ಮತ್ತು ವಿಕರ್ಸ್ ಗನ್‌ಗಳ ಮೂಲಕ ಬೆಂಕಿಯುಗುಳುತ್ತಾ ಭಾರತೀಯ ಸೇನೆಯು ವೈರಿಯ ಸೈನ್ಯದ ಮುಂಭಾಗವನ್ನು ಆಕ್ರಮಿಸಲು ಅರ್ಭಟಿಸುತ್ತಾ ಸಾಗಿತು. ನರ್ವ್ ಷೇಫೆಲ್ ಹಳ್ಳಿಯನ್ನು ವಶಪಡಿಸಿಕೊಂಡಿತು. ಇದರಿಂದ ಜರ್ಮನರು ಹಿಮ್ಮೆಟ್ಟಲೇಬೇಕಾಯಿತು. ಆದರೆ ಆಕ್ರಮಣವು ಸ್ಥಗಿತಗೊಂಡಿತು. ಆದರೂ ಈ ಕ್ಷಣವು ಸೈನಿಕರ ಶೌರ್ಯವನ್ನು ಸಾಬೀತು ಮಾಡಿತ್ತು. ಭಾರತೀಯ ಸೇನೆಯಲ್ಲಿ ಖುದಾದಾರ್ ಖಾನ್ ಎಂಬ 129ನೆಯ ಬಲೂಚಿಗೆ ಸೇರಿದ್ದ ಸಿಪಾಯಿಯೊಬ್ಬ ಹೊಲ್ಬೇಕಾ ಸಮೀಪದಲ್ಲಿ ಜರ್ಮನರನ್ನು ಏಕಾಂಗಿಯಾಗಿ 1914ರ ಅಕ್ಟೋಬರ್ 30ರಿಂದ 31ವರೆಗೆ ತಡೆಹಿಡಿದಿದ್ದ. ತನಗೆ ಉಂಟಾಗಿದ್ದ ತೀವ್ರ ಗಾಯಗಳನ್ನೂ ಲೆಕ್ಕಿಸದೇ ಮಾಡಿದ್ದ ಈ ಕಾರ್ಯದಿಂದಾಗಿ ನೂರಾರು ಜೀವಗಳು ಉಳಿದಿತ್ತು ಮತ್ತು ಸಂಧಾನಕ್ಕಾಗಿ ಸಮಯವೂ ದಕ್ಕಿತ್ತು. ಇವನು ತೋರಿದ ಧೈರ್ಯಕ್ಕಾಗಿ. ಯುದ್ಧದಲ್ಲಿ ತೋರುವ ಅಸಾಧಾರಣ ಶೌರ್ಯಕ್ಕಾಗಿ ನೀಡುವ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿಯನ್ನು ಅವನಿಗೆ ನೀಡಲಾಯಿತು. ಇದನ್ನು ಪಡೆದ ಪ್ರಥಮ ಭಾರತೀಯ ಎಂಬ ಹೆಗ್ಗಳಿಕೆಗೆ ಅವನು ಪಾತ್ರನಾದ.

ಜಗತ್ತಿನಾದ್ಯಂತ ನಡೆದ ಮಹಾಯುದ್ಧಗಳಲ್ಲಿ ಸಿಖ್ ಬೆಟಾಲಿಯನ್‌ಗಳು ಒಟ್ಟು 22 ವಿಕ್ಟೋರಿಯಾ ಕ್ರಾಸ್‌ಗಳನ್ನು ಪಡೆದಿವೆ. ಬರ್ಮಾದ ಯುದ್ಧದಲ್ಲಿ ಸೈನಿಕನಾಗಿದ್ದ ನಂದ್ ಸಿಂಗ್ ಗಾಯಗಳಿಂದ ನೋವು ಅನುಭವಿಸುತ್ತಿದ್ದರೂ ಲೆಕ್ಕಿಸದೆ ಶತ್ರು ಕಂದಕದಲ್ಲಿ ಬಿರುಗಾಳಿಯಂತೆ ನುಗ್ಗಿದ್ದ. ತಮ್ಮ ಅಸಾಧಾರಣ ಶೌರ್ಯಕ್ಕೆ ಖ್ಯಾತರಾದವರೆಂದರೆ ಗಡ್ವಾಲಿ ರೈಫಲ್ಸ್, ರಜಪೂತರು ಮತ್ತು ಡೋಗ್ರಾಗಳ ರೆಜಿಮೆಂಟಿನವರು. ಇಷ್ಟೆಲ್ಲಾ ಪರಾಕ್ರಮವನ್ನು ಮೆರೆದಿದ್ದರೂ ಈ ಭಾರತೀಯ ಕಲಿಗಳಿಗೆ ಸಿಕ್ಕ ಗುರುತಿಸುವಿಕೆ, ಗೌರವ ಮಾತ್ರ ತೀರಾ ಗೌಣ. ಆದರೆ ಸೈನ್ಯದ ಹೊರಗಿನ ಪ್ರಪಂಚ ಬೇರೆ. ಅದು ಇವರ ಪರಾಕ್ರಮವನ್ನು ಹಾಡುಕಟ್ಟಿ ಹೇಳಿತು. ಗುರುಮುಖಿ, ಉರ್ದು, ತಮಿಳು ಮುಂತಾದ ಭಾಷೆಗಳಲ್ಲಿ ಆ ವೀರರನ್ನು ಕುರಿತ ಹಾಡುಗಳು ಜನರ ನಾಲಿಗೆಯ ಮೇಲೆ ನಲಿಯಿತು. ಮುಂಗೈ ಮೇಲೆ ತಾಯಿತಗಳನ್ನು ಕಟ್ಟಿಕೊಂಡು ಅವರ ಕಲಿತನವನ್ನು ಕೊಂಡಾಡಲಾಯಿತು.

ಹೀಗೆ ಸೇನೆ ಸೇರಿದ ಬಹಳಷ್ಟು ಮಂದಿ ಎಂದೂ ಯುದ್ಧದ ಅನುಭವ ಪಡೆದಿರಲಿಲ್ಲ. ಆದರೂ ಅವರು ಈಗ ಫ್ರಾನ್ಸಿನ ಗಟ್ಟಿ ನೆಲದ ಮೇಲೆ ನಿಂತು ಯುದ್ಧ ಮಾಡುತ್ತಿದ್ದರು. ಕಡ್ಡಾಯವಾಗಿ ಸೈನ್ಯಕ್ಕೆ ಸೇರಿದ ವಸಾಹತುಶಾಹಿಯವರೂ ಅವರಾಗಿರಲಿಲ್ಲ. ತಮ್ಮದೇ ಸ್ವಂತ ಬೇರಿನ, ಸಂಪ್ರದಾಯದ, ಕೇಳದ–ಹೇಳದ ಕತೆಗಳನ್ನು ಒಡಲಲ್ಲಿ ತುಂಬಿಕೊಂಡಂತಹ ವ್ಯಕ್ತಿಗಳಾಗಿದ್ದರು. ಭಾರತಕ್ಕೆ ಮರಳಿ ಹೋದಾಗ ಅವರು ಎದೆಯುಬ್ಬಿಸಿ ಹೋಗುತ್ತಿರಲಿಲ್ಲ, ಬದಲಾಗಿ ಬಡತನ ಮತ್ತು ನಿರ್ಲಕ್ಷನದಿಂದ ಅವರು ಹಿಂದಿರುಗುತ್ತಿದ್ದರು.

ಯುದ್ಧ ಸ್ಮಾರಕಗಳಲ್ಲಿ ಅವರ ಹೆಸರುಗಳು ಕಾಣುತ್ತಿರಲಿಲ್ಲ. ಅವರು ಮಾಡಿದ ತ್ಯಾಗಗಳು ಚರಿತ್ರೆಯಲ್ಲಿ ಸಮಾಧಿ ಮಾಡಲಾಗುತ್ತಿದ್ದುವು. 1927ರಲ್ಲಿ ಫ್ರಾನ್ಸಿನಲ್ಲಿ ಷಫೇಲ್ ಭಾರತ ಯುದ್ಧ ಸ್ಮಾರಕವು ಅನಾವರಣಗೊಂಡಾಗ ಸುಮಾರು 4742 ಮಂದಿ ಸೈನಿಕರಿಗೆ ಅವರ ನೆನಪಿನ ಒಂದು ಸಮಾಧಿ ಸಹ ಇಲ್ಲವೆಂಬುದು ಬೆಳಕಿಗೆ ಬಂದುದು. ಆದರೆ ಆ ವೇಳೆಗಾಗಲೇ ಅನೇಕ ಯೋಧರು ತಮ್ಮ ಯುದ್ಧದ ಭಾಗ ವಹಿಸುವಿಕೆಯೊಂದಿಗೆ ಅಳಿದು ಹೋಗಿದ್ದರು. ಈ ಯೋಧರು ತಮ್ಮದಲ್ಲದ ಸಾಮ್ರಾಜ್ಯಕ್ಕಾಗಿ ಹೋರಾಡಲು ಯೂರೋಪಿಗೆ ತೆರಳಿದ್ದರು. ಆದರೂ ಸಂಪೂರ್ಣ ನಿಷ್ಠೆಯಿಂದ, ಧೈರ್ಯ, ಶಿಸ್ತು ಮತ್ತು ಹೆಮ್ಮೆಯಿಂದ ಕಾದಿದ್ದರು. ವಿದೇಶೀ ನೆಲದ ಮೇಲೆ ನಾಯಕರಾಗಿದ್ದ ಅವರು ತಮ್ಮ ನೆಲದಲ್ಲಿ ಕೇವಲ ಛಾಯೆಗಳಾಗಿದ್ದರು.

ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿ, ಈಗ ನಿವೃತ್ತರಾಗಿರುವ ಹಿರಿಯ ಮಿತ್ರರಾದ ಸುಧೀರ್ ಒಂಬತ್ಕೆರೆ ಅವರು ಈ ಮೇಲಿನ ವಿಷಯದ ಕುರಿತಾದ ವಿಡಿಯೋ ತುಣುಕನ್ನು ನನಗೆ ಕಳುಹಿಸಿದಾಗ, ಅದನ್ನು ನೋಡಿ, ಓದಿ ಭಾವುಕಳಾದೆ. ಎಷ್ಟು ಸಹಸ್ರ ಸಹಸ್ರ ಮಂದಿ ಭಾರತೀಯರು ಹೀಗೆ ವಿದೇಶೀಯರ ಸೇನೆಯಲ್ಲಿ ಹೋರಾಡಿ, ಸಿಗಬೇಕಾದ ಗೌರವಕ್ಕೂ ಚ್ಯುತರಾಗಿ ಬಂದರಲ್ಲಾ ಎಂಬುದನ್ನು ನೆನಸಿಕೊಂಡು ಮನಸು ತೀರಾ ದುಃಖತಪ್ತವಾಯಿತು. ಸೈನ್ಯದ ಬಗ್ಗೆ, ಸೈನಿಕರ ಬದುಕಿನ ಬಗ್ಗೆ ನಮಗೆ ತಿಳಿದಿರುವುದು ಏನೇನೂ ಅಲ್ಲ ಅಥವಾ ತೀರಾ ಅತ್ಯಲ್ಪ ಎಂಬುದು ಸತ್ಯ. ಸಾವಿಗೆ ಎದುರಾಗಿ ನಿಂತು, ಶತ್ರುಗಳನ್ನು ಸದೆ ಬಡಿಯುವ ಕೆಚ್ಚನ್ನು ಎದೆಯಲ್ಲಿ ತುಂಬಿಕೊಂಡು ಜೀವದ ಹಂಗು ತೊರೆದು, ಕೇವಲ, ದೇಶಕ್ಕಾಗಿ ಹೋರಾಡುವ ಆ ದಿಟ್ಟ, ಧೀರ ಮಹಾತ್ಮರೆಲ್ಲಿ, ಬೆಚ್ಚಗೆ ಮನೆಯಲ್ಲಿ ಕುಳಿತು, ಯುದ್ಧಗಳ ಬಗ್ಗೆ ಬರೀ ಮಾತನಾಡಿ, ತಮ್ಮ ಅಮೋಘ ವಾಕ್ಚಾತುರ್ಯ ಪ್ರದರ್ಶಿಸುತ್ತಾ ತಮ್ಮ ನಾಲಿಗೆ ಚಪಲ ತೀರಿಸಿಕೊಳ್ಳುವ ಹುಲುಮಾನವರೆಲ್ಲಿ? ಈ ಎರಡರ ಹೋಲಿಕೆಯೇ ಸಲ್ಲ.

ಯುದ್ಧದಲ್ಲಿ ಸೈನಿಕರ ಪಾತ್ರ ಅಷ್ಟೇ ಇರುವುದಿಲ್ಲ. ಮೆಕ್ಯಾನಿಕ್‌ಗಳು, ವೈದ್ಯರು, ಎಂಜಿನಿಯರ್‌ಗಳ ಪಾತ್ರವೂ ಹಿರಿದಾದುದೇ ಆಗಿರುತ್ತದೆ. ಸೈನ್ಯ ಎಂದಾಗ ಈ ಎಲ್ಲರೂ ಸೇರಿ ಆಗುವ ಒಂದು ಟೀಂ ವರ್ಕ್ ಎನ್ನಬಹುದು. ಈ ಕೋರ್ ಆಫ್ ಎಂಜಿನಿಯರ್‌ಗಳು ಯುದ್ಧಭೂಮಿಯಲ್ಲಿಯೂ ಇರಬೇಕಾಗುತ್ತದೆ. ಅಷ್ಟೇ ಏಕೆ, ಕೆಲವೊಮ್ಮೆ ಸೈನಿಕರಿಗಿಂತಲೂ ಮುಂದಾಗಿ ಯುದ್ಧಭೂಮಿಗೆ ಹೋಗಬೇಕಾಗಿರುತ್ತದೆ. ನಮ್ಮ ಸೇನೆಯು ಹೋಗುವ ಜಾಗದಲ್ಲಿ ಲ್ಯಾಂಡ್‌ಮೈನ್‌ಗಳನ್ನು ಏನಾದರೂ ಶತ್ರುಗಳು ಹೂತಿಟ್ಟಿದ್ದಾರೋ ಎಂಬುದನ್ನು ಮುಂಚಿತವಾಗಿಯೇ ಹೋಗಿ ಪರೀಕ್ಷಿಸಬೇಕಾಗುತ್ತದೆ. ಇದಕ್ಕಾಗಿ ಅವರಿಗೆ ವಿಶೇಷ ತರಬೇತಿ ನೀಡಲಾಗಿರುತ್ತದೆ. ಇದರಿಂದ ಉಂಟಾಗಬಹುದಾದ ಅನಾಹುತದ ತೀವ್ರತೆ ಕಡಿಮೆ ಆಗುತ್ತದೆ. ಮತ್ತೆ ಕೆಲವೊಮ್ಮೆ ಶತ್ರುಗಳು ನಿರ್ಮಿಸಿರುವ ಅಡೆತಡೆಗಳನ್ನು ಇವರು ಮುಂಚಿತವಾಗಿಯೇ ಛೇದಿಸಿ, ನಮ್ಮ ಸೇನಾ ತುಕಡಿಯು ಸಲೀಸಾಗಿ ಸಾಗಲು ಅನುವು ಮಾಡಿಕೊಡುತ್ತಾರೆ. ಮತ್ತೆ ಕೆಲವೊಮ್ಮೆ ನಮ್ಮ ಸೇನಾ ತುಕಡಿ, ಶಸ್ತ್ರಾಸ್ತ್ರಗಳ ಸಾಗಾಣಿಕೆಗಾಗಿ ಸೇತುವೆಯನ್ನು ನಿರ್ಮಾಣ ಮಾಡಬಹುದು ಅಥವಾ ಶತ್ರು ನಮ್ಮ ಕಡೆಗೆ ಬಾರದಂತೆ ಮಾಡಲು ಸೇತುವೆಯನ್ನು ಕೆಡವಲೂ ಬಹುದು. ಇವೆಲ್ಲವೂ ಮಿಂಚಿನ ವೇಗದಲ್ಲಿ ನಡೆಯುವ ಕಾರ್ಯಗಳು ಅಂದರೆ, ಈ ಎಂಜಿನಿಯರ್‌ಗಳ ಕಾರ್ಯಕ್ಷಮತೆ ಎಂತಹುದಿರಬೇಕು ಊಹಿಸಿ!

ಶಸ್ತ್ರಗಳಲ್ಲಿ, ಯುದ್ಧ ತಂತ್ರಗಳಲ್ಲಿ ಹಿಂದಿನ ಹಾಗೂ ಇಂದಿನ ಯುದ್ಧದ ರೀತಿಯಲ್ಲಿ ಬಹಳ ವ್ಯತ್ಯಾಸಗಳಿವೆ. ಇಂದು ಬಳಸಲಾಗುವ ಡ್ರೋನ್, ಅತ್ಯಾಧುನಿಕ ಕ್ಷಿಪಣಿಗಳು ಅಂದು ಎಲ್ಲಿದ್ದುವು? ಅಂದು ಶತ್ರು ಪಾಳಯಕ್ಕೇ ನುಗ್ಗಿ ಸದೆ ಬಡಿಯಬೇಕಾದ ಪರಿಸ್ಥಿತಿ. ಇಂದಿನ ಯುದ್ಧತಂತ್ರಕ್ಕೆ ಇತ್ತೀಚೆಗೆ ನಡೆದ ಆಪರೇಷನ್ ಸಿಂಧೂರವೇ ಸಾಕ್ಷಿ. ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಿಗುವ ಮೂಲ ಹಕ್ಕುಗಳನ್ನು ಸೈನಿಕನಾದ ಕೂಡಲೇ ಕಳೆದುಕೊಳ್ಳುವ, 38–42 ವಯಸ್ಸಿಗೇ ನಿವೃತ್ತರಾಗುವ, ದೇಶಸೇವೆಗಾಗಿ ಸದಾ ಸಿದ್ಧರಿರುವ, ನಮ್ಮ ಜವಾನ್‌ಗಳಿಗೆ ಅತೀ ದೊಡ್ಡ ಗೌರವ ಸಲ್ಲಬೇಕು.

ಕುಡಿಯುವ ನೀರಿನ ಪೈಪ್ ಒಡೆದು ಭಾರೀ ಪ್ರಮಾಣದಲ್ಲಿ ನೀರು ಪೋಲು

ಮೈಸೂರಿನ ಬಲ್ಲಾಳ್ ವೃತ್ತದ ಬಳಿಯ ಸಿಗ್ನಲ್‌ನಲ್ಲಿ ನೀರು ವ್ಯರ್ಥ

ಮೈಸೂರು, ಆ.9(ಬಿಎಲ್‌ಯು)– ಕುಡಿಯುವ ನೀರಿನ ಪೈಪ್ ಒಡೆದು ಲಕ್ಷಾಂತರ ಲೀಟರ್ ನೀರು ಚರಂಡಿ ಸೇರುತ್ತಿದ್ದರೂ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದವರು ಇತ್ತ ತಿರುಗಿಯೂ ನೋಡಿಲ್ಲ.

ಮೈಸೂರಿನ ಬಲ್ಲಾಳ್ ವೃತ್ತದ ಸಿಗ್ನಲ್ ಬಳಿ ಕಳೆದ ನಾಲ್ಕು ದಿನದ ಹಿಂದೆ ಕುಡಿಯುವ ನೀರಿನ ಪೈಪ್ ಒಡೆದು ಹೋಗಿದೆ. ಇದರಿಂದ ಲಕ್ಷಾಂತರ ಲೀಟರ್ ನೀರು ಚರಂಡಿ ಸೇರುತ್ತಿದೆ.

ಆದರೆ ನೀರು ಸರಬರಾಜು ಕಾರ್ಯಾಗಾರದವರು ಇದನ್ನು ರಿಪೇರಿ ಮಾಡುವ ಗೋಜಿಗೆ ಹೋಗಿಲ್ಲ. ಪ್ರತಿಯೊಂದು ಏರಿಯಾಗೂ ನಿರ್ವಹಣೆಗೆ ವಾಟರ್ ಇನ್ಸ್‌ಪೆಕ್ಟರ್ ಇರುತ್ತಾರೆ. ನೀರಿನ ಪೈಪ್ ಒಡೆದರೆ ಅದನ್ನು ಕೂಡಲೇ ರಿಪೇರಿ ಮಾಡುವುದು ಅವರ ಜವಾಬ್ದಾರಿ. ಆದರೆ ಇದು ಇನ್ನು ಅವರ ಅರಿವಿಗೆ ಬಂದಿಲ್ಲವೇ ಎಂಬ ಪ್ರಶ್ನೆ ಎದುರಾಗಿದೆ. ನೀರು ಅತ್ಯಮೂಲ್ಯ, ನೀರನ್ನು ವ್ಯರ್ಥ ಮಾಡಬೇಡಿ, ಪ್ರತಿ ಹನಿ ನೀರನ್ನು ಉಳಿಸಿ, ನೀರಿನ ಸಂರಕ್ಷಣೆ ಇಂದಿನ ಅಗತ್ಯ ಎಂದು ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಅಧಿಕಾರಿಗಳು ಜಾಗೃತಿ ಮೂಡಿಸುತ್ತಾರೆ. ಎನ್‌ಜಿಓಗಳ ಮೂಲಕ ಜಾಗೃತಿ ಮೂಡಿಸಲು ಹಣ ಖರ್ಚು ಮಾಡುತ್ತಾರೆ. ಆದರೆ ನೀರು ಉಳಿಸುವ ಜವಾಬ್ದಾರಿಯನ್ನು ಅವರೇ ಪಾಲಿಸದೆ ನಿರ್ಲಕ್ಷ್ಯ ತೋರಿದ್ದಾರೆ.



ಒಕ್ಕಲಿಗರ ವಿರುದ್ಧ ಅವಹೇಳನಕಾರಿ ಹೇಳಿಕೆ ಆಡಿಯೋ ವೈರಲ್

ಜಿಲ್ಲಾ ಕಾಂಗ್ರೆಸ್ ವಕ್ತಾರ ಜಿ.ವಿ.ಸೀತಾರಾಮ್ ಉಚ್ಚಾಟನೆ

ಮೈಸೂರು, ಆ.9(ಬಿಎಲ್‌ಯು)– ಒಕ್ಕಲಿಗ ಸಮುದಾಯದವರ ವಿರುದ್ಧ ಅವಹೇಳನವಾಗಿ ಮಾತಾನಾಡಿದ್ದರೆಂಬ ಆರೋಪದ ಮೇಲೆ ಮೈಸೂರು ಜಿಲ್ಲಾ ಕಾಂಗ್ರೆಸ್ ವಕ್ತಾರ ಜಿ.ವಿ. ಸೀತಾರಾಮ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ. ಕೆಪಿಸಿಸಿ ಸಂಚಾಲಕ ನಿವೇದಿತ್ ಆಳ್ವ ಅವರು ಈ ಸಂಬಂಧ ಆದೇಶ ಹೊರಡಿಸಿದ್ದಾರೆ.



ಸೀತಾರಾಮ್ ಅವರು ಒಕ್ಕಲಿಗ ಸಮುದಾಯದವರ ಬಗ್ಗೆ ಅವಹೇಳನವಾಗಿ ಮಾತನಾಡಿರುವ ಬಗ್ಗೆ ಆಡಿಯೋ ವೈರಲ್ ಆಗಿತ್ತು. ಹಾಗಾಗಿ ಆ ಸಮುದಾಯದ ಭಾವನೆಗೆ ಧಕ್ಕೆ ಉಂಟು ಮಾಡಿದ್ದಲ್ಲದೆ, ಪಕ್ಷಕ್ಕೆ ಮುಜುಗರ ಉಂಟು ಮಾಡುವಂತೆ ಮಾತನಾಡಿದ್ದರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ಈ ಹಿನ್ನೆಲೆಯಲ್ಲಿ ಸೀತಾರಾಮ್ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಸ್ಥಳೀಯ ಶಾಸಕರು, ಡಿಸಿಸಿ ಅಧ್ಯಕ್ಷರು ಹಾಗೂ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಪಕ್ಷದ ವರ್ಚಸ್ಸಿಗೆ ಹಾನಿ ಉಂಟು ಮಾಡುವ ಹೇಳಿಕೆ ನೀಡಿ, ಪಕ್ಷದ ಶಿಸ್ತು ಉಲ್ಲಂಘಿಸಿರುವ ಕಾರಣಕ್ಕೆ ಸೀತಾರಾಮ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ನಿವೇದಿತ್ ಆಳ್ವಾ ತಿಳಿಸಿದ್ದಾರೆ.

ಮೈಸೂರು, ತುಮಕೂರು ಮಾರ್ಗದಿಂದ ಅತೀ ಬೇಗ ಹೊಸೂರು ರಸ್ತೆ ತಲುಪುವ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಇಂದು ಪ್ರಧಾನಿ ಮೋದಿ ಚಾಲನೆ

ಬೆಂಗಳೂರು,ಆ.9(ಕೆಎಂಶಿ)–ಮೈಸೂರು, ತುಮಕೂರು ಭಾಗದಿಂದ ನಗರಕ್ಕೆ ಆಗಮಿಸುವ ಪ್ರಯಾಣಿಕರು ಅಲ್ಪಾವಧಿಯಲ್ಲೇ ಹೊಸೂರು ರಸ್ತೆ ತಲುಪುವ 3ನೇ ಹಂತದ ನಮ್ಮ ಮೆಟ್ರೋ ಹಳದಿ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆ ಮಾಡಲಿದ್ದಾರೆ.

ಕರ್ನಾಟಕಕ್ಕೆ ಒಂದು ದಿನದ ಪ್ರವಾಸಕ್ಕೆ ಆಗಮಿಸುತ್ತಿರುವ ಪ್ರಧಾನಿ ಮೋದಿ, ಹಳದಿ ಮಾರ್ಗ ಆರಂಭಕ್ಕೆ ಚಾಲನೆ ನೀಡಿ 4ನೇ ಹಂತದ ಮೆಟ್ರೊ ಮಾರ್ಗ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ನೇರವಾಗಿ ಬೆಂಗಳೂರು ಕೇಂದ್ರ ರೈಲು ನಿಲ್ದಾಣಕ್ಕೆ ತೆರಳಿ ಬೆಂಗಳೂರು–ಬೆಳಗಾವಿ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಿಗೆ ಸಂಚರಿಸುವ 3 ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ. ಶಂಕುಸ್ಥಾಪನೆ ಮತ್ತು ಮಾರ್ಗ ಉದ್ಘಾಟನೆ ನಂತರ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಮಂತ್ರಿ ಕಾರ್ಯಾಲಯ ಕಾರ್ಯಕ್ರಮಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವರಾದ ಮನೋಹರ್ ಲಾಲ್, ಹೆಚ್.ಡಿ.ಕುಮಾರಸ್ವಾಮಿ, ಅಶ್ವಿನ್ ವೈಷ್ಣವ್, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸ್ಥಳೀಯ ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಆಹ್ವಾನಿಸಿದೆ.



ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರನ್ನು ಕಡೆಗಣಿಸಿ ವಿಜಯೇಂದ್ರ ಅವರಿಗೆ ಪ್ರಧಾನಿ ಕಾರ್ಯಾಲಯ ಆಹ್ವಾನ ನೀಡಿದೆ. ಈ ಎಲ್ಲಾ ಕಾರ್ಯಕ್ರಮ ನಂತರ ಮಧ್ಯಾಹ್ನವೇ ದೆಹಲಿಗೆ ಪ್ರಧಾನಿ ಮೋದಿ ಹಿಂತಿರುಗಲಿದ್ದಾರೆ. ಉದ್ಯಾನ ನಗರಿಯ ಮಾಹಿತಿ ತಂತ್ರಜ್ಞಾನ, ಕೈಗಾರಿಕಾ ವಲಯ ಸೇರಿದಂತೆ ಹಲವು ವಲಯಗಳ ಜನತೆ ನಮ್ಮ ಮೆಟ್ರೋ ಮೂಲಕ ಅಲ್ಪ ಸಮಯದಲ್ಲೇ ತಮಿಳುನಾಡು ಗಡಿ ಸಮೀಪಕ್ಕೆ ತಲುಪಬಹುದಾಗಿದೆ. ನಗರದ ಒಂದು ತುದಿಯಿಂದ ಹೊಸೂರು ರಸ್ತೆ ತಲುಪಲು ಪ್ರಸ್ತುತ 4 ರಿಂದ 6 ತಾಸು ಹಿಡಿಯುತ್ತಿತ್ತು, ಇದೀಗ ನೇರಳೆ, ಹಸಿರು ಮಾರ್ಗದೊಂದಿಗೆ ಹಳದಿ ಮಾರ್ಗ ಸೇರ್ಪಡೆಯಿಂದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಿದೆ.

ನರಸಿಂಹರಾಜ ಠಾಣೆಯಲ್ಲಿ ರಕ್ಷಾಬಂಧನ



ಮೈಸೂರಿನ ನರಸಿಂಹರಾಜ ಠಾಣೆಯಲ್ಲಿ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ರಕ್ಷಾ ಬಂಧನ ಆಯೋಜಿಸಲಾಗಿತ್ತು. ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ ತಳವಾರ್, ಸಬ್‌ಇನ್‌ಸ್ಪೆಕ್ಟರ್ ಸುನಿಲ್, ಎಎಸ್‌ಐ ನಾಗರಾಜ್ ನಾಯಕ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜುನಾಥ್, ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶಾಂತಾ, ಮಹಿಳಾ ಮೋರ್ಚಾದ ಅಧ್ಯಕ್ಷೆ ಮಾಲಿನಿ ಫಾಲಾಕ್ಷ, ಪ್ರಧಾನ ಕಾರ್ಯದರ್ಶಿ ಕವಿತಾ ಸಿಂಗ್, ಉಮಾಶ್ರೀ, ಉಪಾಧ್ಯಕ್ಷರಾದ ಇಂದ್ರ, ವನಜಾಕ್ಷಿ, ಯೋಗಲಕ್ಷ್ಮಿ, ಮುಖಂಡರಾದ ನಾಗರಾಜ್, ಜಗದೀಶ್, ಮಹದೇವ್, ಕಾರ್ತಿಕ್ ಮರಿಯಪ್ಪ, ಕೃಷ್ಣಮೂರ್ತಿ ರಾವತ್, ಪುನೀತ್, ಶಿವಣ್ಣ, ನವೀನ್‌ರಾಜ್, ಹೇಮಂತ್, ಅರುಣ, ಕರ್ಣ, ಮಂಜುನಾಥ್, ಶಿವು, ನವೀನ್ ಶೆಟ್ಟಿ, ರಾಜು ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಜನಪ್ರಿಯ ಮಾಜಿ ಸಚಿವರಾದ
ಶ್ರೀ ಸಾ.ರಾ.ಮಹೇಶ್
ರವರಿಗೆ
ಜನ್ಮದಿನದ ಶುಭಾಶಯಗಳು
VISMAYA
ADVERTISERS
8050302424

ಚಾಂಪಿಯನ್ ಪಟ್ಟ ಉಳಿಸಿಕೊಳ್ಳುವ ಛಲದಲ್ಲಿ ಮೈಸೂರು ವಾರಿಯರ್ಸ್

ನಾಳೆಯಿಂದ ಮೈಸೂರಲ್ಲಿ ಮಹಾರಾಜ ಟ್ರೋಫಿ ಟ್ವೆಂಟಿ 20 ಕ್ರಿಕೆಟ್ ಪಂದ್ಯಾವಳಿ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಆಟಗಾರರ ಪರಿಚಯ ಕಾರ್ಯಕ್ರಮದಲ್ಲಿ ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗ ಅವರೊಂದಿಗೆ ತಂಡದ ಆಟಗಾರರನ್ನು ಕಾಣಬಹುದು.



ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗ ಅವರು ವಿಶೇಷಚೇತನ ಕ್ರಿಕೆಟ್‌ಪಟುಗಳಿಗೆ ನೆರವು ನೀಡಿದರು.

ಮೈಸೂರು,ಆ.9(ಎಂಟಿವೈ)– ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಆ.11ರಿಂದ 27ರವರೆಗೆ ನಡೆಯುವ ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿಗೆ ಮೈಸೂರು ವಾರಿಯರ್ಸ್ ತಂಡ ಸಜ್ಜಾಗಿದ್ದು, ಪ್ರಶಸ್ತಿ ಉಳಿಸಿಕೊಳ್ಳುವ ಉತ್ಸಾಹದೊಂದಿಗೆ ಕಣಕ್ಕಿಳಿಯಲು ತವಕಿಸುತ್ತಿದೆ.

ಅನುಭವಿ ಹಾಗೂ ಯುವ ಪ್ರತಿಭಾವಂತ ಆಟಗಾರರಿಂದ ಕೂಡಿರುವ ಎನ್.ಆರ್ ಗ್ರೂಪ್ ಮಾಲೀಕತ್ವದ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ತಂಡ, ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಹೊರಹೊಮ್ಮಿದ್ದು, ಈಗಾಗಲೇ ಕಠಿಣಾಭ್ಯಾಸದಲ್ಲಿ ನಿರತವಾಗಿದೆ.

ಮೈಸೂರಿನ ಖಾಸಗಿ ಹೋಟೆಲ್‌ನ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ತಂಡದ ಆಟಗಾರರನ್ನು ಅನಾವರಣಗೊಳಿಸಲಾಯಿತು. ಇಂಗ್ಲೆಂಡ್ ವಿರುದ್ಧದ 5ನೇ ಟೆಸ್ಟ್ ಪಂದ್ಯದಲ್ಲಿ ಕರುಣ್ ನಾಯರ್ ಕೈ ಬೆರಳಿಗೆ ಗಾಯವಾಗಿರುವುದರಿಂದ ಆರಂಭಿಕ ಪಂದ್ಯಗಳಲ್ಲಿ ಮನೀಶ್ ಪಾಂಡೆ ತಂಡವನ್ನು ಮುನ್ನಡೆಸಲಿದ್ದಾರೆ.

ಈ ವೇಳೆ ಮಾತನಾಡಿದ ತಂಡದ ಮಾಲೀಕರಾದ ಅರ್ಜುನ್ ರಂಗ, ಈ ಬಾರಿಯ ಮಹಾರಾಜ ಟ್ರೋಫಿಗೆ ನಮ್ಮ ತಂಡ ಸಂಪೂರ್ಣ ಸಜ್ಜಾಗಿದೆ. ಕಳೆದ ಬಾರಿಯ ಚಾಂಪಿಯನ್ ಆದ್ದರಿಂದ ಪ್ರಶಸ್ತಿ ಉಳಿಸಿಕೊಳ್ಳಲು ನಮ್ಮ ತಂಡ ರೋಚಕ ಪ್ರದರ್ಶನ ನೀಡಲಿದೆ. ಪಂದ್ಯಗಳು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತವಾಗಿರುವುದು ಖುಷಿ ತಂದಿದೆ. ಆದರೆ, ಪ್ರೇಕ್ಷಕರಿಲ್ಲದಿರುವುದು ಬೇಸರ ಮೂಡಿಸಿದೆ ಎಂದರು.



ತಂಡಕ್ಕೆ ಮನೀಶ್ ಪಾಂಡೆ, ಪ್ರಸಿದ್ಧ್ ಕೃಷ್ಣ, ಕೆ.ಗೌತಮ್ ಸೇರ್ಪಡೆಯಿಂದ ಮತ್ತಷ್ಟು ಬಲ ಬಂದಿದೆ. ಈ ಬಾರಿಯೂ ಪ್ರಶಸ್ತಿ ಗೆಲ್ಲುವುದೇ ನಮ್ಮ ಗುರಿಯಾಗಿದ್ದು, ಉತ್ತಮ ಪ್ರದರ್ಶನ ನೀಡುವ ವಿಶ್ವಾಸವಿದೆ.

- ಕರುಣ್ ನಾಯರ್,
ಮೈಸೂರು ವಾರಿಯರ್ಸ್ ತಂಡದ ನಾಯಕ

ತಂಡದ ಮುಖ್ಯ ಕೋಚ್ ಆರ್‌ಎಕ್ಸ್ ಮುರಳಿ ಮಾತನಾಡಿ, ನಮ್ಮ ತಂಡ ಅನುಭವಿ, ಯುವ ಪ್ರತಿಭಾವಂತ ಆಟಗಾರರಿಂದ ಕೂಡಿದ್ದು, ಪಂದ್ಯಾವಳಿಗೆ ಉತ್ತಮ ತಯಾರಿ ಮಾಡಿಕೊಂಡಿದ್ದೇವೆ. ಕಳೆದ ಬಾರಿಯಂತೆ ಈ ಬಾರಿಯೂ ಉತ್ತಮ ಪ್ರದರ್ಶನ ನೀಡುವ ವಿಶ್ವಾಸವಿದೆ ಎಂದರು.

ವಿಕಲಚೇತನ ಕ್ರೀಡಾಪಟುಗಳಿಗೆ ನೆರವು: ಎನ್‌ಆರ್ ಗ್ರೂಪ್ ಕ್ರಿಕೆಟ್ ಜತೆಗೆ ಸಾಮಾಜಿಕ ಸೇವಾ ಕಾರ್ಯಗಳನ್ನೂ ಮಾಡುತ್ತಿದ್ದು, ಈ ಬಾರಿ, ದಕ್ಷಿಣ ಏಷ್ಯಾದ ಮೊದಲ ವ್ಹೀಲ್‌ಚೇರ್ ಕ್ರಿಕೆಟ್ ಲೀಗ್ ಆಗಿರುವ ಎಬಿಲಿಟಿ ಸ್ಪೋರ್ಟ್ಸ್ ಲೀಗ್ (ಎಎಸ್‌ಎಲ್) ಟಿ20 ಜತೆಗೆ ಕಾಸ್ ಪಾರ್ಟನರ್‌ಶಿಪ್ ಮಾಡಿಕೊಂಡಿದೆ. ಈ ಮೂಲಕ ವಿಕಲಚೇತನ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ನೆರವಾಗಲಿದೆ. ಜತೆಗೆ ಕಳೆದ ವರ್ಷದಂತೆಯೇ ಈ ವರ್ಷವೂ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಆಟಗಾರರು ತೆಗೆಯುವ ಪ್ರತಿ ವಿಕೆಟ್‌ಗೆ 2 ಸಾವಿರ, ಪ್ರತಿ ಸಿಕ್ಸರ್‌ಗೆ 1 ಸಾವಿರ ಮತ್ತು ಪ್ರತಿ ಫೋರ್‌ಗೆ 500 ರೂ ದೇಣಿಗೆ ನೀಡಲಿದೆ. ವಿಕಲಚೇತನ ಕ್ರೀಡಾಪಟುಗಳ ಸಬಲೀಕರಣಕ್ಕೆ ಈ ದೇಣಿಗೆ ಬಳಕೆಯಾಗಲಿದೆ.

ಮೈಸೂರು ವಾರಿಯರ್ಸ್ ತಂಡ



ಗೌತಮ್ ಲಂಕೇಶ್ ಕುಮಾರ್ ಕಾರ್ತಿಕ್ ವೆಂಕಟೇಶ್ ಜಯಂತ್

ಕರುಣ್ ನಾಯರ್(ನಾಯಕ), ಮನೀಶ್ ಪಾಂಡೆ (ಹಂಗಾಮಿ ನಾಯಕ), ಪ್ರಸಿದ್ಧ್ ಕೃಷ್ಣ, ಕೃಷ್ಣಪ್ಪ ಗೌತಮ್, ಜಯಂತ್.ಎಂ.ಆರ್, ಗೌತಮ್ ಸಾಗರ್, ಸಮಂತ್.ಎಸ್.ಎಂ, ಲಂಕೇಶ್.ಕೆ.ಎಸ್, ಶಿಖರ್ ಶೆಟ್ಟಿ, ಕುಮಾರ್.ಎಲ್.ಆರ್, ಗೌತಮ್ ಮಿಶ್ರಾ, ಕಾರ್ತಿಕ್.ಎಸ್.ಯು, ಹರ್ಷಿಲ್ ಧರ್ಮಾನಿ, ಕುಶಾಲ್ ವಾದ್ವಾನಿ, ಧನುಷ್ ಗೌಡ, ಯಶೋವರ್ಧನ್ ಪರಂತಾಪ್, ವೆಂಕಟೇಶ್.ಎಂ, ಸಮಿತ್ ಕುಮಾರ್, ಶರತ್ ಶ್ರೀನಿವಾಸ್, ಕಾರ್ತಿಕ್.ಸಿ.ಎ.

6 ತಂಡಗಳ ಹಣಾಹಣಿ

ಮಹಾರಾಜ ಟ್ರೋಫಿಗಾಗಿ ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರ್ಯಾಗನ್ಸ್, ಗುಲ್ಬರ್ಗಾ ಮಿಸ್ಟಿಕ್ಸ್, ಶಿವಮೊಗ್ಗ ಲಯನ್ಸ್ ತಂಡಗಳು ಸೆಣಸಾಡಲಿವೆ. ಈ ಮೊದಲು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಿಗದಿಯಾಗಿದ್ದವು. ಆರ್‌ಸಿಬಿ ವಿಜಯೋತ್ಸವ ವೇಳೆ ಸಂಭವಿಸಿದ ಕಾಲ್ತುಳಿತ ದುರಂತದ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಅನುಮತಿ ನಿರಾಕರಿಸಿದ್ದರಿಂದ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಎಲ್ಲಾ ಪಂದ್ಯಗಳು ನಡೆಯಲಿವೆ. ಕೆಎಸ್‌ಸಿಎ ಹಾಗೂ ನಗರ ಪೊಲೀಸರಿಂದ ಅನುಮತಿ ದೊರೆಯದಿರುವುದರಿಂದ ಪ್ರೇಕ್ಷಕರಿಗೂ ಪಂದ್ಯ ವೀಕ್ಷಣೆಗೆ ಅವಕಾಶ ನೀಡುತ್ತಿಲ್ಲ. ಇದರಿಂದ ಪ್ರೇಕ್ಷಕರಿಲ್ಲದೆ ಪಂದ್ಯಗಳು ಜರುಗಲಿದ್ದು, ಕ್ರಿಕೆಟ್ ಪ್ರೇಮಿಗಳಿಗೆ ನಿರಾಸೆಯುಂಟಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ 90 ವರ್ಷಗಳ ಹಿಂದೆಯೇ ಶಿಕ್ಷಣ ಸಂಸ್ಥೆ ಸ್ಥಾಪನೆಯಾಗಿದ್ದು ಮಹತ್ವದ ಕಾರ್ಯ

ಮಾತೃಮಂಡಲಿ ಕುರಿತು ಹಿರಿಯ ನಟಿ, ಎಂಎಲ್‌ಸಿ ಉಮಾಶ್ರೀ ಶ್ಲಾಘನೆ



ಮೈಸೂರಿನ ಮಾತೃಮಂಡಲಿ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಸಂಸ್ಥೆಯ 90ನೇ ವಾರ್ಷಿಕೋತ್ಸವದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

ಮೈಸೂರು,ಆ.9(ಪಿಎಂ)–ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ ಅವರನ್ನು ಮುಖ್ಯವಾಹಿನಿಗೆ ತರಬೇಕೆಂಬ ನಿಟ್ಟಿನಲ್ಲಿ 90 ವರ್ಷಗಳ ಹಿಂದೆಯೇ ಮಾತೃ ಮಂಡಲಿ ವಿದ್ಯಾಸಂಸ್ಥೆ ಸ್ಥಾಪನೆ ಮಾಡಿರುವುದು ಅತ್ಯಂತ ಮಹತ್ತರವಾದುದು ಎಂದು ಚಲನಚಿತ್ರ ರಂಗದ ಹಿರಿಯ ನಟಿಯೂ ಆದ ವಿಧಾನ ಪರಿಷತ್ ಸದಸ್ಯೆ ಡಾ.ಉಮಾಶ್ರೀ ಅಭಿಪ್ರಾಯಪಟ್ಟರು.

ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಮಾತೃಮಂಡಲಿ ವಿದ್ಯಾಸಂಸ್ಥೆ ಆವರಣದಲ್ಲಿ '90ರ ಸಂಭ್ರಮ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಸಂಸ್ಥೆಯ 90ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, 9 ದಶಕಗಳ ಹಿಂದೆಯೇ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಚಿಂತನೆ ಮೂಡಿದ್ದು ಮಹತ್ವದ ಸಂಗತಿ. ಈಗ ದೇಶಾದ್ಯಂತ ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರೆತು ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಸಹ ಮಾಡುತ್ತಿದ್ದಾರೆ. ಆದರೆ ಅಂದಿನ ಪರಿಸ್ಥಿತಿಯಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕಾಗಿ ಸಂಸ್ಥೆ ಸ್ಥಾಪಿಸಿದ್ದು ಮಹತ್ತರವಾದ ಘಟ್ಟ ಎಂದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮಹಿಳೆಯರಿಂದಲೇ ಸ್ಥಾಪನೆಯಾದ ಸಂಸ್ಥೆ ಎಂಬುದು ಗಮನಾರ್ಹ. ಸಂಸ್ಥೆ ಕಟ್ಟಿ ಬೆಳೆಸುವಲ್ಲಿ ಬಹಳಷ್ಟು ಜನ ಶ್ರಮಿಸಿದ್ದಾರೆ. ನಿಜಕ್ಕೂ ಅವರೆಲ್ಲರೂ ಸ್ಮರಣೀಯರು. ಮೈಸೂರು ಮಲ್ಲಿಗೆ, ಮೈಸೂರು ವಿಳ್ಯದೆಲೆ, ಮೈಸೂರು ಪಾಕ್ ಎಷ್ಟು ಖ್ಯಾತಿ ಹೊಂದಿವೆಯೋ ಮಾತೃಮಂಡಳಿ ಮಕ್ಕಳು ಕೂಡ ಖ್ಯಾತಿ ಹೊಂದಬೇಕು ಎಂದು ಹಾರೈಸಿದರು.

ಸಂಸ್ಥೆ ಸಂಸ್ಥಾಪಕರಾದ ಸೌಂದರ್ಯಮ್ಮ ವೆಂಕಟೇಶ್, ಕೆ.ಎಸ್.ನಾಗರತ್ನಮ್ಮ, ಕಾಮೇಶ್ವರಮ್ಮ ಕುಪ್ಪಸ್ವಾಮಿ ಅವರ ಭಾವಚಿತ್ರ ಅನಾವರಣಗೊಳಿಸಿದ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಮಾತೃರೂಪದಲ್ಲಿ ಮಕ್ಕಳಿಗೆ ಶಿಕ್ಷಣ ಕೊಟ್ಟ ಸಂಸ್ಥೆ ಮಾತೃಮಂಡಲಿ. ಈ ಸಂಸ್ಥೆ ಸ್ಥಾಪಿಸುವ ಮೂಲಕ ಮಹಿಳಾ ಸಬಲೀಕರಣಕ್ಕಾಗಿ ಶ್ರಮಿಸಿದ ಮಹನೀಯರ ಭಾವಚಿತ್ರ ಅನಾವರಣಗೊಳಿಸಿದ್ದು ನನಗೆ ಸಾರ್ಥಕ ಭಾವನೆ ಮೂಡಿಸಿತು ಎಂದರು.

ನಗರದ ಮಹಾರಾಣಿ ಕಾಲೇಜಿನ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮೂರು ಸೇರಿದಂತೆ ಪ್ರತಿವರ್ಷ ಸುಮಾರು 15 ಸಾವಿರ ವಿದ್ಯಾರ್ಥಿನಿಯರು ಪ್ರವೇಶಾತಿ ಪಡೆಯುತ್ತಾರೆ. ಆದರೆ ಹಾಸ್ಟೆಲ್‌ಗೆ ಅವಕಾಶ ಇರುವುದು ಕೇವಲ 300 ವಿದ್ಯಾರ್ಥಿನಿಯರಿಗೆ ಮಾತ್ರ. ಮಹಾರಾಣಿ ಕಾಲೇಜಿಗೆ ಪ್ರವೇಶ ಶುಲ್ಕ ಕೈಗೆಟುಕುವಂತೆ ಇದ್ದರೂ ಮೈಸೂರಿನಲ್ಲಿ ಪಿಜಿಗೆ ಸೇರಿಸುವ ಚೈತನ್ಯ ಬಹುತೇಕ ಪೋಷಕರಿಗೆ ಇರುವುದಿಲ್ಲ ಎಂಬುದನ್ನು ಅರಿತ ನಾನು, ನೂತನ ಹಾಸ್ಟೆಲ್ ನಿರ್ಮಾಣಕ್ಕೆ ಅಗತ್ಯ ಅನುದಾನ ಕಲ್ಪಿಸುವಂತೆ ಮುಖ್ಯಮಂತ್ರಿಗಳಲ್ಲಿ ಬೇಡಿಕೆ ಇಟ್ಟಿದ್ದೆ. ನನ್ನ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿ ನಮ್ಮ ಸರ್ಕಾರದ ಮೊದಲ ಬಜೆಟ್‌ನಲ್ಲೇ 120 ಕೋಟಿ ಅನುದಾನ ಕಲ್ಪಿಸಿದರು. ಆ ಮೂಲಕ 3,900 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು ಅವಕಾಶವಾಗುವಂತೆ ಕಟ್ಟಡ ನಿರ್ಮಿಸಲಾಗುತ್ತಿದೆ. ಈಗಾಗಲೇ ಕಾಮಗಾರಿ ಪ್ರಾರಂಭವಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಇದರಿಂದ ಪ್ರಯೋಜನವಾಗಲಿದೆ. ಸೂರ್ಯ ಚಂದ್ರ ಇರುವವರೆಗೂ ಮಾತೃಮಂಡಲಿ ಸಂಸ್ಥೆ ಹೀಗೆಯೇ ಸೇವೆ ಸಲ್ಲಿಸುವಂತಾಗಲಿ. ನನ್ನಿಂದ ಸಾಧ್ಯವಿರುವ ಸಹಕಾರವನ್ನು ಸಂಸ್ಥೆಗೆ ನೀಡುತ್ತೇನೆ ಎಂದು ಹೇಳಿದರು.

'ಮಾತೃಮಂಡಲಿ–90 ; ಶತಮಾನದ ಹೊಸ್ತಿಲಲ್ಲಿ' ಶೀರ್ಷಿಕೆಯ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಕವಯಿತ್ರಿಯೂ ಆದ ಐಪಿಎಸ್ ಅಧಿಕಾರಿ ಡಾ.ಧರಣೀದೇವಿ ಮಾಲಗತ್ತಿ ಮಾತನಾಡಿ, ಮಾತೃಮಂಡಳಿ ತಾಯ್ತನದ ಸಂಸ್ಥೆ. ಹೆಣ್ಣು ಮಕ್ಕಳ ಮಾತೃತ್ವ, ಕರ್ತೃತ್ವ, ನೇತೃತ್ವ ಒಟ್ಟಿಗೆ ಸೇರಿದರೆ ಸಾಧನೆಯಾಗುತ್ತದೆ ಎಂಬುದಕ್ಕೆ ಮಾತೃಮಂಡಲಿಯೇ ಸಾಕ್ಷಿ. ಮಹಿಳಾ ಸಬಲೀಕರಣ ಎನ್ನುವ ಮಾತು 70ರ ದಶಕದಲ್ಲಿ ನಾವು ಕೇಳಿದ್ದಾಗಿದೆ. 1935ರಲ್ಲೇ ಮಹಿಳಾ ಸಬಲೀಕರಣದ ಆಶಯದಲ್ಲಿ ಧೀಮಂತ ನಾಯಕಿಯರು ಈ ಸಂಸ್ಥೆ ಸ್ಥಾಪಿಸಿದರು ಎಂದು ಸ್ಮರಿಸಿದರು.

ನಾವು ದಿನ ಬೆಳಗಾದರೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ನೆನಪಿಸಿಕೊಳ್ಳಲೇಬೇಕು. ಅವರು ನೀಡಿದ ಕೊಡುಗೆ ಅಪಾರ. ಅಂತಹ ರಾಜರ್ಷಿ ರೂಪಿಸಿದ ಕೀರ್ತಿ ವಾಣಿವಿಲಾಸ ಸನ್ನಿಧಾನ ಅವರಿಗೆ ಸಲ್ಲುತ್ತದೆ. ಭಾರತದ ಅತ್ಯಂತ ಶ್ರೇಷ್ಠ ಆಡಳಿತಗಾರ್ತಿಯರಲ್ಲಿ ವಾಣಿ ವಿಲಾಸ ಸನ್ನಿಧಾನ (ರಾಜಮಾತೆ ಕೆಂಪ ನಂಜಮ್ಮಣ್ಣಿ) ಸಹ ಒಬ್ಬರು. ಇವರ ಹೆಸರಿನ ಬಡಾವಣೆಯಲ್ಲಿ (ವಾಣಿವಿಲಾಸ ಮೊಹಲ್ಲಾ) ಈ ಸಂಸ್ಥೆ ಇರುವುದು ಒಂದು ವಿಶೇಷ ಎಂದು ನುಡಿದರು.

ಮಾತೃಮಂಡಳಿ ಸಂಸ್ಥೆ ಆಡಳಿತ ಮಂಡಳಿ ಕಾರ್ಯದರ್ಶಿ ವಾಣಿ ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾತಂತ್ರ್ಯ ಪೂರ್ವ 1935ರಲ್ಲೇ ನಮ್ಮ ಧೀಮಂತ ನಾಯಕಿಯರು ಈ ಸಂಸ್ಥೆ ಸ್ಥಾಪಿಸಿದರು. ಪ್ರಸ್ತುತ 600 ಮಕ್ಕಳು ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ತಿಳಿಸಿದರು. ಮಾತೃಮಂಡಳಿ ಸಂಸ್ಥೆ ಆಡಳಿತ ಮಂಡಳಿ ಅಧ್ಯಕ್ಷೆ ವಿಜಯಲಕ್ಷ್ಮೀ ಅರಸ್, ಉಪಾಧ್ಯಕ್ಷೆ ರಾಮೇಶ್ವರಿ ವರ್ಮ (ಹಿರಿಯ ರಂಗಕರ್ಮಿ), ಸಹ ಕಾರ್ಯದರ್ಶಿ ಹೇಮ ಬಾಲಚಂದ್ರನ್, ಕೋಶಾಧಿಕಾರಿ ವಿಜಯಲಕ್ಷ್ಮೀ ಮುರಳೀಧರ್ ಮತ್ತಿತರರು ಹಾಜರಿದ್ದರು.

ಸರ್ಕಾರಿ ನೌಕರರು ಒತ್ತಡದಿಂದ ಮುಕ್ತರಾಗಲು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಆಧ್ಯಾತ್ಮಿಕ ತರಬೇತಿಗೆ ಸಲಹೆ



ರಕ್ಷಾಬಂಧನ ಮಹೋತ್ಸವವನ್ನು ವಿಶ್ವ ಒಕ್ಕಲಿಗರ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ಆ.9(ಎಸ್‌ಪಿಎನ್)– ಸರ್ಕಾರಿ ನೌಕರರು ಸದಾ ಒತ್ತಡದಲ್ಲಿರುತ್ತಾರೆ. ನೌಕರರು ಒತ್ತಡದಿಂದ ಹೊರಬೇಕಾದರೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ರಾಜಯೋಗ ಆಧ್ಯಾತ್ಮಿಕ ತರಬೇತಿ ಪಡೆಯುವಂತೆ ಬೆಂಗಳೂರು ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಮೈಸೂರು ಯಾದವಗಿರಿಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೈಸೂರು ಶಾಖೆಯ ಜ್ಞಾನಪ್ರಕಾಶ ಭವನದಲ್ಲಿ ಏರ್ಪಡಿಸಿದ್ದ ರಕ್ಷಾಬಂಧನ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

ನಾನು, ಪೂರ್ವಾಶ್ರಮದಲ್ಲಿ ರಾಜ್ಯದ ವಿವಿಧೆಡೆ ಕೆಲಸ ಮಾಡುವಾಗ ಕೆಲಸದ ಒತ್ತಡವಿತ್ತು. ಆಗ ಆಯಾಯ ಸ್ಥಳದಲ್ಲಿದ್ದ ಪ್ರಜಾಪಿತ ಬ್ರಹ್ಮಕುಮಾರಿ ಕೇಂದ್ರಗಳಲ್ಲಿ 'ರಾಜಯೋಗ' ಆಧ್ಯಾತ್ಮ ತರಬೇತಿ ಪಡೆದು, ಒತ್ತಡ ಕಡಿಮೆ ಮಾಡಿಕೊಳ್ಳುತ್ತಿದ್ದೆ ಎಂದರು.

ಕಂದಾಯ ಇಲಾಖೆಯಲ್ಲಿನ ಕೆಳಹಂತದ ಸಿಬ್ಬಂದಿ ಪ್ರಲೋಭೆಗೆ ಒಳಗಾಗಿ ರೈತರ ಕೆಲಸಗಳಿಗೆ ವಿಳಂಬ ಧೋರಣೆ ಅನುಸರಿಸುತ್ತಿದ್ದರು. ಈ ವಿಷಯ ನನ್ನ ಗಮನಕ್ಕೆ ಬಂದಾಗ ತುಂಬಾ ನೋವಾಗುತ್ತಿತ್ತು ಆಗ, ಸಂಬಂಧಪಟ್ಟ ಸಿಬ್ಬಂದಿಗೆ ವಾರ್ನಿಂಗ್ ಮಾಡಿ, ಗ್ರಾಮೀಣ ಪ್ರದೇಶದಿಂದ ಬರುವ ಬಡವರು, ರೈತರ ಕೆಲಸಗಳನ್ನು ಬೇಗ ಮಾಡಿಕೊಡಿ ಎಂದು ತಾಕೀತು ಮಾಡುತಿದ್ದ ಪ್ರಸಂಗವನ್ನು ನೆನೆದು ಬಾವುಕರಾದರು.

ಸರ್ಕಾರಿ ನೌಕರರು, ಬಡವರ ಕೆಲಸಗಳಿಗೆ ಕಾಲಮಿತಿ ಹಾಕಿಕೊಳ್ಳದೇ ಬೇಗಬೇಗ ಕಡತಗಳನ್ನು ವಿಲೇವಾರಿ ಮಾಡಿದರೆ ರೈತರು, ತಮ್ಮ ದಿನನಿತ್ಯ ಕೆಲಸಗಳನ್ನು ಬಿಟ್ಟು ಜಿಲ್ಲಾ ಮತ್ತು ತಾಲೂಕು ಹಂತದ ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ. ಕಂದಾಯ ಇಲಾಖೆಯ ಒಬ್ಬ ಸಿಬ್ಬಂದಿ ಪ್ರಲೋಭೆಗೆ ಒಳಗಾದರೆ, ಆತ ಬಡವರು, ಕೂಲಿ ಕಾರ್ಮಿಕರು, ರೈತರ ಒಂದು ದಿನದ ಕೂಲಿಯನ್ನೇ ಪರೋಕ್ಷವಾಗಿ ಕಸಿಯುವ ಪ್ರಸಂಗವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.


ಇತ್ತೀಚೆಗೆ ಸಮಾಜದಲ್ಲಿ ನನ್ನ ಕುಟುಂಬದ ಮುಂದಿನ ಪೀಳಿಗೆ ಐದು ತಲೆಮಾರು ದುಡಿದು ತಿನ್ನದೇ, ಕುಳಿತೇ ತಿನ್ನಲಿ ಎಂದು ಆಸ್ತಿ ಮಾಡುವವರು ಹೆಚ್ಚಾಗುತ್ತಿದ್ದಾರೆ. ಅಂದರೆ, ಮುಂದಿನ ಐದು ತಲೆಮಾರು ಸೋಮಾರಿಗಳನ್ನು ಸೃಷ್ಟಿಸುವ ಕೆಲಸಕ್ಕೂ ಮನುಷ್ಯ ಮುಂದಾಗುತ್ತಿದ್ದಾನೆ. ಇದು ಅಪಾಯಕಾರಿ ಬೆಳವಣಿಗೆ. ಹಾಗಾಗಿ ಪ್ರತಿಯೊಬ್ಬರು ತಮ್ಮ ಮುಂದಿನ ಪೀಳಿಗೆಗೆ ಅಗತ್ಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು.

ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಅವರು, ಅತೀ ಚಿಕ್ಕವಯಸ್ಸಿನಿಂದಲೂ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಭಾರತೀಯ ಪರಂಪರೆ ಉಳಿವಿಗೆ ಶ್ರಮಿಸುತ್ತಿದ್ದಾರೆ. ನಾನು ಪೂರ್ವಾಶ್ರಮದಲ್ಲಿದ್ದಾಗ ಮೌಂಟ್ ಅಬುವಿಗೆ ತೆರಳಲು ಹಲವಾರು ಬಾರಿ ನನಗೆ ಸಹಾಯ ಮಾಡಿದ್ದಾರೆ. ಇದರಿಂದ ನನಗೆ ತುಂಬಾ ಅನುಕೂಲವಾಗಿದೆ ಎಂದರು.

ಶ್ರೀಗಳಿಗೆ ಅಭಿನಂದನೆ: ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಅವರು, ಸನ್ಯಾಸತ್ವ ಸ್ವೀಕರಿಸಿದ ನಂತರ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಹಿನ್ನಲೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೈಸೂರು ಉಪವಲಯದಿಂದ ಅಭಿನಂದಿಸಲಾಯಿತು. ನಂತರ ವಿವಿಧ ಸಂಘಟನೆಗಳ ಮುಖಂಡರು, ನಿವೃತ್ತ ನೌಕರರು ಶ್ರೀಗಳಿಗೆ ಹಾರ ಹಾಕಿ ಅಭಿನಂದಿಸಿದರು. ಈ ವೇಳೆ ಈಶ್ವರೀಯ ವಿವಿ ಮೈಸೂರು ಉಪವಲಯದ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಅವರು, ಶ್ರೀಗಳಿಗೆ ರಕ್ಷಾಬಂಧನ ಕಟ್ಟಿದರು. ಸಭೆಯಲ್ಲಿ ರಾಮಚಂದ್ರ, ಬಿ.ಕೆ.ರಂಗನಾಥ್, ವಸಂತ ಕುಮಾರ್ ಸೇರಿದಂತೆ ಇತರರಿದ್ದರು.

ಮತಪಟ್ಟಿ ಸಿದ್ಧವಾಗಿದ್ದು ಕಾಂಗ್ರೆಸ್ ಸರ್ಕಾರದಲ್ಲೇ; ಆಗ ಎಲ್ಲರೂ ಏನು ಕಣ್ಮುಚ್ಚಿ ಕುಳಿತಿದ್ದರೇ?

ಸಚಿವ ಕೆ.ಎನ್.ರಾಜಣ್ಣ ಗರಂ



ತುಮಕೂರು, ಆ.9–ಲೋಕಸಭೆ ಚುನಾವಣೆಯಲ್ಲಿ ಮತ ಕಳವು ನಡೆದಿದೆ. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಆಗ ಎಲ್ಲರೂ ಕಣ್ಣು ಮುಚ್ಚಿ ಕುಳಿತಿದ್ದರೇ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಕಿಡಿಕಾರಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತ ಕಳವಿನ ವಿಚಾರ ಮಾತನಾಡಲು ಹೋದರೆ ಮಾತನಾಡಬೇಕಾಗುತ್ತದೆ. ಅದು ಬೇರೆ ಬೇರೆ ಆಗುತ್ತದೆ. ಲೋಕಸಭೆ ಚುನಾವಣೆ ನಡೆದದ್ದು, ಮತಪಟ್ಟಿ ಸಿದ್ಧಪಡಿಸಿದ್ದು, ನಮ್ಮ ಸರ್ಕಾರದ ಅವಧಿಯಲ್ಲೇ. ಎಲ್ಲರೂ ಆಗ ಕಣ್ಣು ಮುಚ್ಚಿಕೊಂಡು ಕುಳಿತಿದ್ದರು ಎಂದರು.

ಇಷ್ಟೆಲ್ಲ ಅಕ್ರಮಗಳು ನಡೆಯುತ್ತಿದ್ದರೂ ನೋಡಿಕೊಂಡು ಸುಮ್ಮನೆ ಇದ್ದೇವಲ್ಲ ಎಂಬ ಬಗ್ಗೆ ನಾಚಿಕೆ ಆಗಬೇಕು. ನಮ್ಮ ಕಣ್ಣು ಮುಂದೆ ಅಕ್ರಮಗಳು ನಡೆದಿರುವುದನ್ನು ನೋಡಿದರೆ ನಮಗೆ ಅವಮಾನ ಆಗಬೇಕು. ಆಗ ಸುಮ್ಮನೆ ಇದ್ದು, ಈಗ ಹೇಳುತ್ತಿದ್ದೇವೆ. ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಮುಂದೆ ಎಚ್ಚರಿಕೆಯಿಂದ ಇರುತ್ತೇವೆ ಎಂದು ತಿಳಿಸಿದರು.

ಡಾ. ಅಮ್ರೀನ್ ತಾಜ್‌ಗೆ ಪಿಎಚ್.ಡಿ. ಪದವಿ



ಮೈಸೂರು, ಆ. 9– ಚಾಮರಾಜನಗರದ ಸಿ.ಎಸ್. ಜಿಯಾಉಲ್ಲಾ ಮತ್ತು ಜರೀನ್ ತಾಜ್ ಅವರ ಪುತ್ರಿ ಡಾ. ಅಮ್ರೀನ್ ತಾಜ್ ಅವರಿಗೆ ಗುಜರಾತ್ ಕೇಂದ್ರ ವಿಶ್ವವಿದ್ಯಾಲಯವು ಡಾಕ್ಟರ್ ಆಫ್ ಫಿಲಾಸಫಿ ಪದವಿ ಪ್ರದಾನ ಮಾಡಿದೆ. ಅವರು ನಡೆಸಿದ ಸಂಶೋಧನೆಗೆ, ಗುಜರಾತ್ ಕೇಂದ್ರ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಭಕ್ತಿ ಗಾಲಾ ಅವರು ಮಾರ್ಗದರ್ಶನ ನೀಡಿದರು.

ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ಕೆಆರ್ ಬ್ಯಾಂಕ್‌ನ ನವೀಕೃತ ಕಟ್ಟಡ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್‌ನ ನವೀಕೃತ ನೆಲ ಅಂತಸ್ತು ಕಟ್ಟಡ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿಕ ಬ್ಯಾಂಕ್ ಲೋಗೋ ಬಿಡುಗಡೆ ಮಾಡಿದರು.



ಷರೀಫ್ ಫರ್ನಿಚರ್ ಮಳಿಗೆಯಲ್ಲಿ ಕಾದು ಕುಳಿತಿದ್ದ ಸುತ್ತೂರು ಶ್ರೀಗಳ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ತೆರಳಿ ಅಲ್ಲಿಂದ ಇಬ್ಬರು ಕಾರ್ಯಕ್ರಮಕ್ಕೆ ಬಂದರು.

ಮೈಸೂರು, ಆ.9(ಎಸ್‌ಬಿಡಿ)– ಮೈಸೂರು ಅಗ್ರಹಾರದ ಎನ್.ಮಾಧವ ರಾವ್ ವೃತ್ತದಲ್ಲಿರುವ ಶತಮಾನದ ಶ್ರೀ ಕೃಷ್ಣರಾಜೇಂದ್ರ(ಕೆಆರ್) ಸಹಕಾರ ಬ್ಯಾಂಕ್ ನೆಲ ಅಂತಸ್ತಿನ ನವೀಕೃತ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸಂಜೆ ಉದ್ಘಾಟಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದ ಮುಖ್ಯಮಂತ್ರಿಗಳು, ಬ್ಯಾಂಕ್ ಆವರಣದಲ್ಲಿಡಲಾಗಿರುವ ಗಣಪತಿ ಮೂರ್ತಿಗೆ ನಮಿಸಿದರು. ಇದೇ ವೇಳೆ ನವೀಕೃತ ಕಟ್ಟಡದಲ್ಲಿನ ಲಾಕರ್, ಮ್ಯಾನೇಜರ್, ಅಸಿಸ್ಟೆಂಟ್ ಮ್ಯಾನೇಜರ್ ಕೊಠಡಿ, ಫೈರ್ ಸೇಫ್ಟಿ, ಕಂಪ್ಯೂಟರ್‌ಗಳು, ಲಾಕರ್ ಸೇರಿದಂತೆ ಎಲ್ಲಾ ಆಧುನಿಕ ವ್ಯವಸ್ಥೆಯನ್ನು ಪರಿಶೀಲಿಸಿದರು. ಬಳಿಕ ಕಂಪ್ಯೂಟರ್ ಬಳಿ ಕುಳಿತು ನೂತನವಾಗಿ ವಿನ್ಯಾಸಗೊಳಿಸಿರುವ ಬ್ಯಾಂಕ್‌ನ ಲೋಗೋ ಬಿಡುಗಡೆ ಮಾಡಿದರು.

ನಂತರ ಬ್ಯಾಂಕ್ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬ್ಯಾಂಕ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ವೃತ್ತದಲ್ಲಿ ನೆರೆದಿದ್ದ ನೂರಾರು ಮಂದಿಯತ್ತ ಕೈಬೀಸಿ ಅಲ್ಲಿಂದ ತೆರಳಿದರು. ಕಾರ್ಯಕ್ರಮ ಮುಗಿಯುವವರೆಗೆ ಪಾಠಶಾಲೆ ಸಿಗ್ನಲ್‌ನಿಂದ ನ್ಯೂ ಸಯ್ಯಾಜಿ ರಾವ್ ರಸ್ತೆ, ರಾಮಾನುಜ ರಸ್ತೆ ಜಂಕ್ಷನ್‌ನಿಂದ ಮಹಾತ್ಮಗಾಂಧಿ ರಸ್ತೆ, ಸಿದ್ದಪ್ಪ ವೃತ್ತದಿಂದ ವಾಣಿವಿಲಾಸ ರಸ್ತೆಯಲ್ಲಿ ಸಂಚಾರವನ್ನು ನಿರ್ಬಂಧಿಸಿದ್ದರಿಂದ ಬೇರೆ ರಸ್ತೆಗಳಲ್ಲಿ ಸುಮಾರು ಅರ್ಧ ಗಂಟೆ ಕಾಲ ದಟ್ಟಣೆ ಉಂಟಾಗಿತ್ತು.

ಗಂಟೆಗೂ ಹೆಚ್ಚು ಕಾಲ ಕಾದ ಶ್ರೀಗಳು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹದಿನಾರು ಗ್ರಾಮದಲ್ಲಿ ನಡೆದ ಕಾರ್ಯಕ್ರಮ ಮುಗಿಸಿ ಬರುವಷ್ಟರಲ್ಲಿ ವಿಳಂಬವಾಗಿತ್ತು. ಆದರೆ ನಿಗದಿತ ಸಮಯಕ್ಕೆ ಆಗಮಿಸಿದ್ದ ಸುತ್ತೂರು ಶ್ರೀಗಳು, ಕೆಆರ್ ಬ್ಯಾಂಕ್‌ನಿಂದ ಸುಮಾರು ನೂರು ಮೀಟರ್ ದೂರದಲ್ಲಿ ವಾಣಿವಿಲಾಸ ರಸ್ತೆಯಲ್ಲಿರುವ ಷರೀಫ್ ಫರ್ನಿಚರ್ ಮಳಿಗೆಯಲ್ಲೇ ಒಂದು ಗಂಟೆಗೂ ಹೆಚ್ಚು ಕಾಲ ಕುಳಿತಿದ್ದರು. ಈ ವೇಳೆ ಹಲವರು ಶ್ರೀಗಳ ಆಶೀರ್ವಾದ ಪಡೆದು, ಫೋಟೋ ತೆಗೆಸಿಕೊಂಡರು. ಸಂಜೆ 5.30ರ ಸುಮಾರಿಗೆ ಆಗಮಿಸಿದ ಮುಖ್ಯಮಂತ್ರಿಗಳೂ ಷರೀಫ್ ಮಳಿಗೆಗೆ ಆಗಮಿಸಿ ಶ್ರೀಗಳನ್ನು ಭೇಟಿ ಮಾಡಿದರು. ಅಲ್ಲಿಂದ ಇಬ್ಬರೂ ನಡಿಗೆಯಲ್ಲಿ ಬ್ಯಾಂಕ್ ಉದ್ಘಾಟನಾ ಕಾರ್ಯಕ್ರಮಕ್ಕೆ ತೆರಳಿದರು.

ಸಮಾರಂಭದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಡಿ.ಬಸವರಾಜು (ಬಸಪ್ಪ), ಉಪಾಧ್ಯಕ್ಷೆ ಹೆಚ್.ಎನ್. ಸರ್ವಮಂಗಳ, ನಿರ್ದೇಶಕರಾದ ಹೆಚ್.ವಾಸು, ನಂ.ಸಿದ್ದಪ್ಪ ಎಂ.ಡಿ.ಪಾರ್ಥಸಾರಥಿ, ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಪ್ರತಿಧ್ವನಿ ಪ್ರಸಾದ್, ತಾಯೂರು ಗಣೇಶಮೂರ್ತಿ, ಅರುಣ್ ಸಿದ್ದಪ್ಪ ಬಿ.ನಾಗಜ್ಯೋತಿ, ಎಂ.ಎನ್.ನವೀನ್ ಕುಮಾರ್, ಎಂ.ಶಿವಪ್ರಕಾಶ್, ಪ್ರಭಾರ ವ್ಯವಸ್ಥಾಪಕ ಡಿ.ಅನಂತ ವೀರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿ ಬ್ಯಾಂಕ್ ಮಾದರಿ ವ್ಯವಸ್ಥೆ

ಶೆಟ್ಟಪ್ಪ ಸಿದ್ದಪ್ಪನವರು 1919ರಲ್ಲಿ ಸ್ಥಾಪಿಸಿದ ಶ್ರೀ ಕೃಷ್ಣರಾಜೇಂದ್ರ ಬ್ಯಾಂಕ್‌ಗೆ 106 ವರ್ಷಗಳು ಸಂದಿವೆ. 25 ಪೈಸೆ ಆರಂಭಿಕ ಬಂಡವಾಳದೊಂದಿಗೆ ಪ್ರಾರಂಭವಾದ ಈ ಬ್ಯಾಂಕ್, 9 ಸಾವಿರಕ್ಕಿಂತ ಹೆಚ್ಚು ಸದಸ್ಯರನ್ನೊಳಗೊಂಡು ವಾರ್ಷಿಕ ನೂರಾರು ಕೋಟಿ ವಹಿವಾಟು ನಡೆಸುವ ಹಂತಕ್ಕೆ ಬೆಳೆದು 'ಎ' ದರ್ಜೆ ಸಾಧಿಸಿದೆ. ಅತ್ಯುತ್ತಮ ಸೇವೆ ಕಲ್ಪಿಸುವ ಉದ್ದೇಶದಿಂದ ಬ್ಯಾಂಕ್‌ನ ನೆಲ ಅಂತಸ್ತಿನ ಕಟ್ಟಡವನ್ನು ನವೀಕರಣಗೊಳಿಸಿ, ಮೊದಲ ಮಹಡಿಯಲ್ಲಿದ್ದ ಕಚೇರಿಯನ್ನು ಸ್ಥಳಾಂತರಿಸಲಾಗಿದೆ. ಖಾಸಗಿ ಬ್ಯಾಂಕ್ ಮಾದರಿಯಲ್ಲಿ ಎಲ್ಲಾ ವ್ಯವಸ್ಥೆ ಕಲ್ಪಿಸಲಾಗಿದೆ. ಉದ್ಯೋಗಿಗಳಿಗೆ ಸಮವಸ್ತ್ರ, ಬಯೋಮೆಟ್ರಿಕ್ ಹಾಜರಾತಿ, ಹಣಕಾಸು ವಹಿವಾಟು ಸಂಬಂಧಿತ ಸಂದೇಶ ಗ್ರಾಹಕರ ಮೊಬೈಲ್‌ಗೆ ತಲುಪುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಮುಸ್ಲಿಂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು ಮುಸ್ಲಿಂ ಸಂಘ ಸಂಸ್ಥೆಗಳಿಗೆ ಶಾಸಕ ತನ್ವೀರ್ ಸೇಠ್ ಸಲಹೆ

ಮೈಸೂರು, ಆ.9(ವಿವಿಹೆಚ್)– ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಣವೇ ದೊಡ್ಡ ಸಮಸ್ಯೆಯಾಗಿದೆ. ಈ ಆರ್ಥಿಕ ಸಮಸ್ಯೆಯನ್ನು ನಿವಾರಿಸಿ ವ್ಯವಸ್ಥೆಯಲ್ಲಿ ಸಮಾನವಾದ ಶಿಕ್ಷಣವನ್ನು ನಮ್ಮ ಸಮುದಾಯದ ಯುವ ಪೀಳಿಗೆ ಪಡೆಯಲು ಮುಸ್ಲಿಂ ಸಂಘ ಸಂಸ್ಥೆಗಳು ನೆರವಾಗಬೇಕು ಎಂದು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕ ಪದವಿಯ ಪ್ರತಿಭಾವಂತ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸರ್ಕಾರಿ ಸೇವೆಯಿಂದ ವಯೋನಿವೃತ್ತಿಯಾಗಿರುವ ಮುಸ್ಲಿಂ ನೌಕರರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಆರ್ಥಿಕ ಸೌಲಭ್ಯದಿಂದ ವಂಚಿತರಾದ ಅಲ್ಪಸಂಖ್ಯಾತ ಸಮುದಾಯ ಇಂದು ಶೈಕ್ಷಣಿಕವಾಗಿ ಹಿಂದುಳಿಯಲು ಮೂಲ ಕಾರಣವಾಗಿದೆ. ನಮ್ಮ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಿ, ಶೈಕ್ಷಣಿಕ ಪ್ರಗತಿ ಸಾಧಿಸುವುದು, ಬಹಳ ಮುಖ್ಯವಾಗಿ ನಮ್ಮ ಜನಾಂಗದ ಸರ್ವತೋಮುಖ ಏಳಿಗೆಗಾಗಿ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಸಂಘ ಇಂತಹ ಕಾರ್ಯಕ್ರಮ ರೂಪಿಸಿರುವುದು ಅಭಿನಂದನಾರ್ಹ ಎಂದರು.



ಜೆ.ಕೆ ಮೈದಾನದಲ್ಲಿ ನಡೆದ ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.

ಸಮಾಜದಲ್ಲಿ ಸರ್ವರಿಗೂ ಸಮಾನವಾದ ಅವಕಾಶವಿದ್ದರೂ ಮಹಿಳೆಯನ್ನು ಮನೆ ಕೆಲಸಕ್ಕೆ ಮಾತ್ರ ಸೀಮಿತ ಎಂದು ನೋಡುವ ಮನಸ್ಥಿತಿಗಳು ಇಂದಿಗೂ ಜೀವಂತವಾಗಿರುವುದು ವಿಷಾಧನೀಯ. ಮಕ್ಕಳ ಪ್ರತಿಭೆಯನ್ನು ನೋಡದೇ ಲಿಂಗ ತಾರತಮ್ಯ ಮಾಡುವುದು ಸರಿಯಲ್ಲ. ಇಂತಹ ಸಾವಿರಾರು ಸಮಸ್ಯೆಗಳನ್ನು ಮೆಟ್ಟಿ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದಿರುವುದು ಶ್ಲಾಘನೀಯ. ಸಾಮಾಜಿಕ ಪಿಡುಗುಗಳನ್ನು ಮೆಟ್ಟಿನಿಂತು ಶೈಕ್ಷಣಿಕವಾಗಿ ಸಮುದಾಯ ಮುಂದುವರಿಯಲು ಸರ್ವರು ಶ್ರಮಿಸಬೇಕು ಎಂದು ಕರೆ ಕೊಟ್ಟರು.

ಇನ್ನು ಕೇಂದ್ರದ ತ್ರಿಭಾಷಾ ಸೂತ್ರ ಮತ್ತು ರಾಜ್ಯ ಸರ್ಕಾರ ಒಪ್ಪಲಿಚ್ಚಿಸಿರುವ ದ್ವಿ ಭಾಷಾ ಸೂತ್ರ ಸಂಬಂಧ ಮಾತನಾಡಿ, ನಮಗೆ ಕನ್ನಡ ನಮ್ಮ ನಾಡು, ನುಡಿಯ ಭಾಷೆಯಾಗಿದ್ದು, ಅದರೊಂದಿಗೆ ಬೇರೆ ಭಾಷೆಗಳನ್ನು ಕಲಿಯಲು ಅವಕಾಶವಿದೆ. ಅದು ಅನಿವಾರ್ಯವಿದೆ. ಆದರೆ ನಮ್ಮ ಮೂಲ ಭಾಷೆಯ ಉಳಿವಿನ ಬಗ್ಗೆ ನಮ್ಮಲ್ಲಿ ಸ್ಪಷ್ಟ ನಿಲುವು ಬೇಕಿದೆ. ಭಾಷೆ ಉಳಿವಿಗೆ ಉರ್ದು ಶಾಲೆಗಳ ಅಭಿವೃದ್ಧಿ ಆಗಬೇಕಿದ್ದು, ಮಸೀದಿಗಳು ಸರ್ಕಾರಿ ಉರ್ದು ಶಾಲೆಗಳನ್ನು ದತ್ತು ಪಡೆಯುವ ಮೂಲಕ ಉತ್ತೇಜನ ನೀಡುವ ಕೆಲಸ ಮಾಡಬೇಕು ಎಂದರು.

ಮೈಸೂರು ಸರ್ಖಾಜಿ ಮೌಲಾನ ಮೊಹಮ್ಮದ್ ಉಸ್ಮಾನ್ ಷರೀಫ್ ಇದೇ ವೇಳೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಎಂಟಿಸಿ ಭದ್ರತಾ ಮತ್ತು ಜಾಗೃತ ಶಾಖೆ ನಿರ್ದೇಶಕ ಅಬ್ದುಲ್ ಅಹದ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಮಹಮ್ಮದ್ ಶಿರಾಜ್ ಅಹಮದ್, ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಹಮ್ಮದ್ ಸಲೀಮ್ ಹಂಚಿನಮನಿ, ಪ್ರಧಾನ ಕಾರ್ಯದರ್ಶಿ ಡಾ.ಸೈಯದ್ ಇಸ್ಮಾಯಿಲ್ ಪಾಷಾ, ರಾಜ್ಯ ಸಂಘಟನಾ ಕಾರ್ಯದರ್ಶಿ ಅಫ್ಸರ್ ಪಾಷಾ, ಮೈಸೂರು ಜಿಲ್ಲಾ ಘಟಕದ ಗೌರವಾಧ್ಯಕ್ಷ ಡಾ.ಎಂ.ಐ.ನಯಾಜ್ ಪಾಷಾ, ಅಧ್ಯಕ್ಷ ಸೈಯದ್ ಮುದಾಸ್ಸಿರ್, ಕಾರ್ಯಾಧ್ಯಕ್ಷ ಸೈಯದ್ ನಾಸೀರ್ ಅಹ್ಮದ್, ಕಾರ್ಯದರ್ಶಿ ಅಜೀಜ್ ಖಾನ್, ಪ್ರೊ.ನಜಿಜಾನ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಮಾಲೆಗೌಡ, ಕೆ.ಆರ್.ನಗರ ತಾಲೂಕು ಕ.ರಾ.ಸ.ಮು.ನೌ ಸಂಘದ ಅಧ್ಯಕ್ಷ ಸೈಯದ್ ಖದೀರ್, ನಂಜನಗೂಡು ತಾಲೂಕು ಅಧ್ಯಕ್ಷ ಶಕೀಲ್ ಭಾಷಾ, ಟಿ.ನರಸೀಪುರ ತಾಲೂಕು ಅಧ್ಯಕ್ಷ ಸಯೀದ ಸುಲ್ತಾನ, ಅಜೀಜ್ ಸೇಠ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ಉಪಸ್ಥಿತರಿದ್ದರು.

ಉತ್ತರಕಾಶಿ ಪ್ರಕೃತಿ ವಿಕೋಪಕ್ಕೆ ಸಿಲುಕಿರುವವರನ್ನು ಸ್ಥಳಾಂತರಿಸಲು 4 ಹೆಲಿಕಾಪ್ಟರ್ ನಿಯೋಜನೆ


ಉತ್ತರಕಾಶಿ: ಈ ವಾರದ ಆರಂಭದಲ್ಲಿ ಉತ್ತರಾಖಂಡ ರಾಜ್ಯದ ಉತ್ತರಕಾಶಿಯಲ್ಲಿ ಸಂಭವಿಸಿದ ಹಠಾತ್ ಪ್ರವಾಹ ಮತ್ತು ಭೂಕುಸಿತಗಳಲ್ಲಿ ಹಲವಾರು ಜೀವಗಳು ಬಲಿಯಾಗಿ, ಅಪಾರ ಹಾನಿ ಸಂಭವಿಸಿದ ನಂತರ ಅಲ್ಲಿ ಸಿಲುಕಿಕೊಂಡಿರುವ ಜನರನ್ನು ವಿಮಾನದ ಮೂಲಕ ಸಾಗಿಸಲು ನಾಲ್ಕು ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ.

ಅಧಿಕೃತ ಮಾಹಿತಿಯ ಪ್ರಕಾರ ಮಂಗಳವಾರ ಸಂಭವಿಸಿದ ಭೂ ಕುಸಿತ ಮತ್ತು ಹಠಾತ್ ಪ್ರವಾಹದ ನಂತರ ಸಂಪರ್ಕ ಕಡಿತಗೊಂಡಿರುವ ವಿಪತ್ತು ಪೀಡಿತ ಧರಾಲಿ ಪ್ರದೇಶದ ಕೆಲವು ಭಾಗಗಳಿಂದ 729 ಜನರನ್ನು ಸ್ಥಳಾಂತರಿಸಲಾಗಿದೆ.

ವಿಪತ್ತಿನಲ್ಲಿ ಐವರು ಮೃತಪಟ್ಟಿದ್ದು 49 ಜನರು ಕಾಣೆಯಾಗಿದ್ದಾರೆ ಎಂದು ಜಿಲ್ಲಾಡಳಿತ ದೃಢಪಡಿಸಿದೆ. ಆಶ್ರಯ ಪಡೆದಿರುವ ಜನರನ್ನು ರಕ್ಷಿಸಲು ಉತ್ತರಾಖಂಡ ನಾಗರಿಕ ವಿಮಾನಯಾನ ಪ್ರಾಧಿಕಾರದ 4 ಹೆಲಿಕಾಪ್ಟರ್‌ಗಳು ಇಂದು ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿವೆ.

ಮುಂಬೈ ಪೊಲೀಸರೆಂದು ಬೆದರಿಸಿ ವೃದ್ಧರೊಬ್ಬರಿಂದ ಒಂದೂವರೆ ಕೋಟಿ ಲಪಟಾಯಿಸಿದ ವಂಚಕರು

ಮೈಸೂರು, ಆ.9– ನಿಮ್ಮ ಖಾತೆ ಮನಿ ಲ್ಯಾಂಡ್ರಿಂಗ್‌ಗೆ ಬಳಕೆಯಾಗಿರುವುದಾಗಿ ವೃದ್ಧರೊಬ್ಬರನ್ನು ಬೆದರಿಸಿ, ಪರಿಶೀಲನೆ ನೆಪದಲ್ಲಿ ಒಂದೂವರೆ ಕೋಟಿ ರೂ. ಲಪಟಾಯಿಸಿರುವ ಬಗ್ಗೆ



ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರ 2ನೇ ಹಂತದ 81 ವರ್ಷದ ನಿವೃತ್ತರೊಬ್ಬರಿಗೆ ಜು.7ರಂದು ಅಪರಿಚಿತ ವ್ಯಕ್ತಿ ವಾಟ್ಸಾಪ್ ಕರೆ ಮಾಡಿ, ನಾವು ಟಿಆರ್‌ಎಐ(ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ)ನಿಂದ ಮಾತನಾಡುತ್ತಿರುವುದಾಗಿ ಹೇಳಿದ್ದಾನೆ. ವಿಷಯ ಕೇಳಿದಾಗ ನಿಮ್ಮ ಮೊಬೈಲ್ ಮನಿ ಲ್ಯಾಂಡ್ರಿಂಗ್‌ನಲ್ಲಿ ಬಳಕೆಯಾಗುತ್ತಿರುವುದಾಗಿ ಮಾಹಿತಿ ಬಂದಿದೆ, ಮುಂಬೈ ಪೊಲೀಸ್‌ಗೆ ಕಾಲ್ ಕನೆಕ್ಟ್ ಮಾಡುವುದಾಗಿ ತಿಳಿಸಿದ್ದಾನೆ. ಅದೇ ವೇಳೆ ಬೇರೊಬ್ಬ ಮಾತನಾಡಿ, ಹಾಗೆಯೇ ಹೇಳಿದ್ದಾನೆ.

ನಂತರ ಮುಂಬೈನ ಕೊಲಾಬೋ ಪೊಲೀಸ್ ಠಾಣೆ ಡಿಸಿಪಿ ಸಂದೀಪ್ ಯಾದವ್ ಎಂದು ಕರೆ ಮಾಡಿದ್ದ ಮತ್ತೋರ್ವ, ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ನಿಮ್ಮ ಹೆಸರಿನಲ್ಲಿ ಖಾತೆ ತೆರೆದಿದ್ದು, ಅದರ ಮೂಲಕ ಮನಿ ಲ್ಯಾಂಡ್ರಿಂಗ್ ನಡೆಸಲಾಗುತ್ತಿದೆ. ಹಾಗಾಗಿ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡುತ್ತಿರುವುದಾಗಿ ಬೆದರಿಸಿ, ಫಂಡ್ ವೆರಿಫೈ ಆಗಬೇಕೆಂದು ತಿಳಿಸಿದ್ದಾನೆ. ವಂಚಕರ ಮಾತನ್ನು ನಂಬಿದ ವೃದ್ಧರು, ತಮ್ಮ ಎರಡು ಖಾತೆಗಳಿಂದ 1.55 ಕೋಟಿ ಹಣವನ್ನು ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ.

ಟ್ರೇಡಿಂಗ್ ನೆಪದಲ್ಲಿ 70 ಲಕ್ಷ ವಂಚನೆ

ಶ್ರೀರಾಂಪುರ 2ನೇ ಹಂತದ 69 ವರ್ಷದ ವ್ಯಕ್ತಿ, ಫೇಸ್‌ಬುಕ್‌ನಲ್ಲಿ ಕಾಣಿಸಿದ ಟ್ರೇಡಿಂಗ್ ಅಂಡ್ ಇನ್ವೆಸ್ಟ್‌ಮೆಂಟ್ ಜಾಹೀರಾತು ಮೇಲೆ ಕ್ಲಿಕ್ ಮಾಡಿ, ನಕಲಿ ಕಂಪನಿ ಜಾಲಕ್ಕೆ ಸಿಲುಕಿ ಮೋಸ ಹೋಗಿದ್ದಾರೆ. ವಿವಿಧ ಹಂತಗಳಲ್ಲಿ 69,67,331 ರೂ. ಹಣ ಹೂಡಿಕೆ ಮಾಡಿ, ಲಾಭಾಂಶವನ್ನು ವಿತ್‌ಡ್ರಾ ಮಾಡಲು ಹೋದಾಗ ಟ್ಯಾಕ್ಸ್, ಐಟಿ ಅಂಡ್ ಮಾರ್ಜಿನ್ ಅಮೌಂಟ್ ಪಾವತಿಸಬೇಕೆಂಬ ಸೂಚನೆ ಬಂದಿದೆ. ಇದರಿಂದ ಅನುಮಾನಗೊಂಡು ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮೈಸೂರು ಮಿತ್ರ ಭಾನುವಾರ 10 ಆಗಸ್ಟ್ 2025

ಹಿಂದು ಜಾಗರಣ ವೇದಿಕೆಯಿಂದ
ಬೃಹತ್ ಪಂಜಿನ ಮೆರವಣಿಗೆ

ಮಡಿಕೇರಿ,ಆ.9–ಜಿಲ್ಲಾ ಹಿಂದು ಜಾಗರಣ ವೇದಿಕೆಯ ಆಶ್ರಯದಲ್ಲಿ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮ ನಗರದಲ್ಲಿ ನಡೆಯಿತು. ಸಂಕಲ್ಪ ದಿನ ಕಾರ್ಯಕ್ರಮದ ಅಂಗವಾಗಿ ನಗರದಲ್ಲಿ ಬೃಹತ್ ಪಂಜಿನ ಮೆರವಣಿಗೆ ನಡೆಸಿದ ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ಅಖಂಡ ಭಾರತದ ಸಂಕಲ್ಪ ತೊಟ್ಟರು.

ನಗರದ ಮಹದೇವಪೇಟೆಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಪಂಜಿನ ಮೆರವಣಿಗೆ ಆರಂಭಗೊಂಡಿತು. ಇಂದಿರಾ ಗಾಂಧಿ ವೃತ್ತ, ಅಂಚೆ ಕಚೇರಿ, ಜನರಲ್ ತಿಮ್ಮಯ್ಯ ವೃತ್ತದ ಮೂಲಕ ಕೊಡವ ಸಮಾಜದ ವರೆಗೆ ಮೆರವಣಿಗೆ ಸಾಗಿತು. ಮೆರವಣಿಗೆ ಉದ್ದಕ್ಕೂ ದೇಶ ಭಕ್ತಿಯ ಘೋಷಣೆಗಳನ್ನು ಮೊಳಗಿಸಲಾಯಿತು. ಕೊಡವ ಸಮಾಜ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಪ್ರಸ್ತುತ ಭಾರತ ಎದುರಿಸುತ್ತಿರುವ ಸವಾಲುಗಳ ಕುರಿತು ಪ್ರಮುಖರು ವಿವರಿಸಿದರು.



ಸಂಕಲ್ಪ ದಿನದ ಪ್ರಯುಕ್ತ ಹಿಂದು ಜಾಗರಣ ವೇದಿಕೆ ಪಂಜಿನ ಮೆರವಣಿಗೆ ನಡೆಸಿತು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಜಿಲ್ಲೆಯ 7 ಕಡೆಗಳಲ್ಲಿ ಅಖಂಡ ಭಾರತದ ಸಂಕಲ್ಪ ದಿನ ಕಾರ್ಯಕ್ರಮ, ಪಂಜಿನ ಮೆರವಣಿಗೆ ಹಾಗೂ ವಾಹನ ಜಾಥಾ ನಡೆಯಲಿದೆ ಎಂದು ಹಿಂದು ಜಾಗರಣ ವೇದಿಕೆಯ ಜಿಲ್ಲಾ ಸಂಯೋಜಕ ರಂಜನ್ ಗೌಡ (ಭೋಜೇಗೌಡ) ತಿಳಿಸಿದರು. ವೇದಿಕೆಯ ಪ್ರಮುಖರಾದ ಸುನಿಲ್, ಚೇತನ್ ಶಾಂತಿ ನಿಕೇತನ, ಅಲ್ಲಮಾಡ ಶರತ್, ತಿಮ್ಮಯ್ಯ, ಅಪ್ಪು ರೈ ಸೇರಿದಂತೆ ವಿವಿಧ ಹಿಂದೂಪರ ಸಂಘಟನೆಗಳ ಪ್ರಮುಖರು ಪಂಜಿನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಸಿಎನ್‌ಸಿಯಿಂದ ಶಾಂತಿಯುತ ಧರಣಿ ಸತ್ಯಾಗ್ರಹ



ಸಿಎನ್‌ಸಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿತು.

ಮಡಿಕೇರಿ: ಜಾಗತಿಕ ಹಕ್ಕುಗಳ ದಿನಾಚರಣೆಯ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿತು.

ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಮಾತನಾಡಿ ಸಾಂವಿಧಾನಿಕ ಹಕ್ಕುಗಳಿಂದ ವಂಚಿತವಾಗಿರುವ ಕೊಡವ ಬುಡಕಟ್ಟು ಜನರ ಬೇಡಿಕೆಗಳ ಬಗ್ಗೆ ದೇಶದ ಆಡಳಿತ ವ್ಯವಸ್ಥೆ ಮತ್ತು ವಿಶ್ವದ ಗಮನ ಸೆಳೆಯವ ಸಲುವಾಗಿ ನಿರಂತರವಾಗಿ ಶಾಂತಿಯುತ ಧರಣಿ ಸತ್ಯಾಗ್ರಹಗಳನ್ನು ನಡೆಸಲಾಗುತ್ತಿದೆ. ಕೊಡವರ ಆವಾಸಸ್ಥಾನ, ಕೊಡವಲ್ಯಾಂಡ್, ಪಾರಂಪರಿಕ ಪ್ರಾಚೀನ ಭೂಮಿಗಳು, ರಾಜಕೀಯ–ಸಾಂಸ್ಕೃತಿಕ ಹಕ್ಕುಗಳು, ಜಾನಪದ ಗುರುತು, ದೈವಿಕ ವನಗಳು, ಮಂದ್‌ಗಳು, ದೇವಟ್ ಪರಂಬು ಕೊಡವ ನರಮೇಧದ ಸ್ಮಾರಕ ಸ್ಥಳ ಮತ್ತು ಕೊಡವರ ಪವಿತ್ರ ತೀರ್ಥ ಕ್ಷೇತ್ರ ತಲಕಾವೇರಿಯನ್ನು ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ವಿಶ್ವ ರಾಷ್ಟ್ರ ಸಂಸ್ಥೆ ಹಕ್ಕುಗಳಡಿಯಲ್ಲಿ ಸಾಂವಿಧಾನಿಕವಾಗಿ ರಕ್ಷಿಸಬೇಕು. ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕುಗಳನ್ನು ಒಳಗೊಂಡಂತೆ ಕೊಡವ ಲ್ಯಾಂಡ್‌ನ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಮತ್ತು ಸ್ವ–ಆಡಳಿತವನ್ನು ನೀಡಬೇಕೆಂದು ಒತ್ತಾಯಿಸಿದರು.

ಮನವಿಯನ್ನು ಜಿಲ್ಲಾಡಳಿತದ ಮೂಲಕ ವಿಶ್ವರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಯುನೆಸ್ಕೋ ಮಹಾನಿರ್ದೇಶಕರು, ಯುಎನ್‌ಎಚ್‌ಆರ್‌ಸಿಯ ಹೈಕಮೀಷನರ್, ಅಂತರರಾಷ್ಟ್ರೀಯ ನ್ಯಾಯಾಲಯದ ಅಧ್ಯಕ್ಷರು, ರಾಷ್ಟ್ರಪತಿ, ಪ್ರಧಾನಮಂತ್ರಿ, ಗೃಹ ಸಚಿವರು, ಮುಖ್ಯಮಂತ್ರಿಗಳು ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ, ಹಾರ್ವರ್ಡ್ ವಿದ್ವಾಂಸ ಡಾ.ಸುಬ್ರಮಣಿಯನ್ ಸ್ವಾಮಿ ಅವರುಗಳಿಗೆ ಕಳಿಸಿದರು.

ಚೋಳಪಂಡ ಜ್ಯೋತಿ, ಪಟ್ಟಮಾಡ ಲಲಿತ, ನಂದಿನೆರವಂಡ ರೇಖಾ ನಾಚಪ್ಪ, ಕಲಿಯಂಡ ಪ್ರಕಾಶ್, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶೆರಿನ್, ಅರೆಯಡ ಗಿರೀಶ್, ಮಂದಪಂಡ ಮನೋಜ್, ಪುದಿಯೊಕ್ಕಡ ಪೃಥ್ವಿ, ಮಣವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ದೇವಯ್ಯ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಮಾಲ್ದಾರೆ ಸುತ್ತಮುತ್ತ ಬೀದಿ ನಾಯಿಗಳ ಕಾಟ

ಸಿದ್ದಾಪುರ,ಆ.9–ಕಾಡು ಪ್ರಾಣಿಗಳ ಭಯದ ನಡುವೆ ಜೀವನ ನಡೆಸುತ್ತಿರುವ ಮಾಲ್ದಾರೆ ಸುತ್ತಮುತ್ತಲ ನಿವಾಸಿಗಳಿಗೆ ಇದೀಗ ಬೀದಿ ನಾಯಿಗಳ ಕಾಟ ನೀಡಲಾರಂಭಿಸಿವೆ. ದಿನದಿಂದ ದಿನಕ್ಕೆ ಬೀದಿ ನಾಯಿಗಳ ಸಂಖ್ಯೆ ಅಧಿಕವಾಗುತ್ತಿದ್ದು ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ನೆಮ್ಮದಿಯಾಗಿ ನಡೆದಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದಲ್ಲಿ ಏಕಾಏಕಿ 50ಕ್ಕೂ ಅಧಿಕ ಬೀದಿ ನಾಯಿಗಳು ಕಾಣಿಸಿಕೊಂಡಿದ್ದು ಆಹಾರಕ್ಕಾಗಿ ಮನೆ, ಹೋಟೆಲ್, ಮಾಂಸದ ಅಂಗಡಿಗಳ ಮುಂದೆ ಜಮಾಯಿಸಿವೆ. ಹೆಚ್ಚಾಗಿರುವ ಬೀದಿ ನಾಯಿಗಳ ಸಂಖ್ಯೆಯಿಂದ ಗ್ರಾಮಸ್ಥರು ಭಯಭೀತರಾಗಿದ್ದು ವಸ್ತುಗಳ ಖರೀದಿಗೂ ಪಟ್ಟಣಕ್ಕೆ ಬರಲು ಹೆದರುವ ಸ್ಥಿತಿ ತಲೆದೋರಿದೆ. ಸಮೀಪದ ಗ್ರಾಮವೊಂದರಲ್ಲಿ ಸೆರೆ ಹಿಡಿಯಲಾಗಿದ್ದ ನಾಯಿಗಳನ್ನು ಮಾಲ್ದಾರೆ ಗ್ರಾಮ ಸಮೀಪದ ಅರಣ್ಯದಂಚಿನಲ್ಲಿ ಬಿಟ್ಟು ಹೋಗಿದ್ದು ಸುಮಾರು 50ಕ್ಕೂ ಹೆಚ್ಚು ಬೀದಿ ನಾಯಿಗಳು ಆಹಾರಕ್ಕಾಗಿ ಗ್ರಾಮದಲ್ಲಿ ಅಲೆದಾಡುತ್ತಿವೆ. ಬೇರೆ ಗ್ರಾಮದಲ್ಲಿ ಸೆರೆ ಹಿಡಿದ ನಾಯಿಗಳನ್ನು ತಂದು ಬಿಟ್ಟಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅರಣ್ಯ ಇಲಾಖೆ ಹಾಗೂ ಪೊಲೀಸರನ್ನು ಒತ್ತಾಯಿಸಿದ್ದಾರೆ. ಗ್ರಾಮಸ್ಥರಾದ ಕುಂಞಣ್ಣ, ಹನೀಫ, ಇಸ್ಮಾಯಿಲ್, ಪದ್ಮೇಶ್, ಅರುಣ್ ಮತ್ತಿತರರು ಹಾಜರಿದ್ದರು.

ಕಾಡಾನೆ ದಾಳಿಯಿಂದ ಓರ್ವನಿಗೆ ಗಾಯ

ಸಿದ್ದಾಪುರ: ರಸ್ತೆಯಲ್ಲಿ ಹೋಗುತ್ತಿದ್ದ ಆಟೋ ರಿಕ್ಷಾದ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಆಟೋ ಚಾಲಕನ ಸಮಯ ಪ್ರಜ್ಞೆಯಿಂದ ಓರ್ವ ಪ್ರಯಾಣಿಕನಿಗೆ ಗಾಯಗಳಾಗಿ ಮೂವರು ಪ್ರಾಣಾಪಾಯದಿಂದ ಪಾರಾದ ಘಟನೆ ವಿರಾಜಪೇಟೆ ತಾಲೂಕಿನ ಅಮ್ಮತಿ ಸಮೀಪದ ಇಂಜಿಲ ಗೆರೆ ಬಳಿ ನಡೆದಿದೆ.

ಗ್ರಾಮದ ನಿವಾಸಿ ಆಟೋ ಚಾಲಕ ಫಿರೋಜ್ ಕೆಲಸಕ್ಕೆ ತೆರಳುತ್ತಿದ್ದ ಮೂವರು ಕಾರ್ಮಿಕರನ್ನು ಆಟೋದಲ್ಲಿ ಕರೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಇಂಜಿಲಗೆರೆ ಮುಖ್ಯ ರಸ್ತೆ ತಿರುವಿನಲ್ಲಿ ಕಾಫಿ ತೋಟದಿಂದ ಏಕಾಏಕಿ ಪ್ರತ್ಯಕ್ಷವಾದ ಕಾಡಾನೆ ರಸ್ತೆಗೆ ಅಡ್ಡಲಾಗಿ ನಿಂತು ಆಟೋರಿಕ್ಷಾ ಮೇಲೆ ದಾಳಿಗೆ ಯತ್ನಿಸಿ ದಂತದಿಂದ ತಿವಿದಿದೆ. ಈ ವೇಳೆ ಪ್ರಯಾಣಿಕರು ಕಿರುಚಿಕೊಂಡಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಮೂವರು ಪ್ರಯಾಣಿಕರ ಪೈಕಿ ಪ್ರದೀಪ್ ಎಂಬವರಿಗೆ ಆನೆ ತಿವಿತದಿಂದ ಸಣ್ಣ ಗಾಯವಾಗಿದೆ. ಕಾಡಾನೆ ಮತ್ತೆ ದಾಳಿಗೆ ಯತ್ನಿಸಿದಾಗ ಚಾಲಕ ಫಿರೋಜ್ ಧೈರ್ಯದಿಂದ ತನ್ನ ಆಟೋವನ್ನು ತಿರುಗಿಸಿ ಅನತಿ ದೂರದವರೆಗೆ ಅತಿ ವೇಗದಲ್ಲಿ ಚಲಾಯಿಸಿದ್ದಾರೆ. ಆಟೋವನ್ನು ಹಿಂಬಾಲಿಸಿಕೊಂಡು ಬಂದ ಕಾಡಾನೆ ಬೇರೊಂದು ವಾಹನ ಕಂಡು ತೋಟದೊಳಗೆ ನುಸುಳಿ ಮರೆಯಾಗಿದೆ. ಚಾಲಕ ಫಿರೋಜ್‌ನ ಸಮಯ ಪ್ರಜ್ಞೆಯಿಂದ ಮೂವರು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಕಾಡಾನೆ ದಾಳಿಯಿಂದ ಗಾಯಗೊಂಡಿರುವ ಪ್ರದೀಪ್ ಆಸ್ಪತ್ರೆಯಲ್ಲಿ ದಾಖಲಾಗಿರುವುದು

ವಿಷಯ ತಿಳಿದ ತಕ್ಷಣ ವಲಯ ಅರಣ್ಯಾಧಿಕಾರಿ ಶಿವರಾಂ ನಿರ್ದೇಶನದ ಮೇರೆಗೆ ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ ಮತ್ತು ಸಿಬ್ಬಂದಿ ಗಾಯಾಳುವನ್ನು ಸಿದ್ದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದಂಡಿನ ಮಾರಿಯಮ್ಮ ದೇವಾಲಯದ ಟ್ರಸ್ಟಿ ಅಯ್ಯಣ್ಣ ನಿಧನ



ಮಡಿಕೇರಿ,ಆ.9–ಉದ್ಯಮಿ ಅಜ್ಜಿನಂಡ ಗಣೇಶ್ ಅಯ್ಯಣ್ಣ(68) ಅವರು ಶನಿವಾರ ನಿಧನರಾಗಿದ್ದಾರೆ. ನಗರದ ಶ್ರೀ ದಂಡಿನ ಮಾರಿಯಮ್ಮ ದೇವಾಲಯದ ಟ್ರಸ್ಟಿ ಹಾಗೂ ಹಲವು ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದ ಗಣೇಶ್ ನಗರದ ಕಾಲೇಜ್ ರಸ್ತೆಯ ಮಳಿಗೆಯಲ್ಲಿ ಧ್ವನಿಮುದ್ರಿತ ಹಾಡುಗಳ ಕ್ಯಾಸೆಟ್‌ಗಳನ್ನು ಮಾರಾಟ ಮಾಡುತ್ತಾ ಪ್ರೋತ್ಸಾಹಿಸುತ್ತಿದ್ದರು.

ಮೃತರು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಪ್ರಧಾನ ಕಾರ್ಯದರ್ಶಿ ಪತ್ನಿ ಮೊಂತಿ ಗಣೇಶ್ ಹಾಗೂ ಭಾರತೀಯ ಸೇನೆಯಲ್ಲಿ ಅಧಿಕಾರಿಯಾಗಿರುವ ಐಶ್ವರ್ಯ ಸಹಿತ ಮೂವರು ಮಕ್ಕಳನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಭಾನುವಾರ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಹಳೆಯ ದ್ವೇಷಕ್ಕೆ ಮಾರಕಾಸ್ತ್ರಗಳಿಂದ ಕೊಚ್ಚಿ ವ್ಯಕ್ತಿಯ ಭೀಕರ ಹತ್ಯೆ



ಮದ್ದೂರು: ಮಾರಕಾಸ್ತ್ರಗಳಿಂದ ಕೊಚ್ಚಿ ವ್ಯಕ್ತಿಯೋರ್ವನನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಮದ್ದೂರು ತಾಲೂಕಿನ ಸೋಮನಹಳ್ಳಿ ಸಮೀಪ ಶುಕ್ರವಾರ ತಡರಾತ್ರಿ ಜರುಗಿದೆ.

ಅರುಣ್ (30) ಹತ್ಯೆಗೀಡಾದ ವ್ಯಕ್ತಿ. ಶುಕ್ರವಾರ ರಾತ್ರಿ 9.30 ವೇಳೆ ಸುಮಾರಿಗೆ ಅರುಣ್ ಮತ್ತು ಆತನ ಸ್ನೇಹಿತರು ಎಂಟಿಆರ್ ಬಾರ್‌ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ವೇಳೆ ಹಳೇ ವಿಚಾರವೊಂದಕ್ಕೆ ಪರಸ್ಪರ ಜಗಳ ಉಂಟಾಗಿದೆ. ಬಳಿಕ ಬಾರ್‌ನಿಂದ ಸಿಬ್ಬಂದಿಗಳು ಎಲ್ಲರನ್ನು ಹೊರಗಡೆ ಕಳುಹಿಸಿದ್ದಾರೆ. ಬಳಿಕ ಅರುಣ್ ಸ್ವಗ್ರಾಮ ವಡ್ಡರದೊಡ್ಡಿಗೆ ತೆರಳುವ ವೇಳೆ ಸೋಮನಹಳ್ಳಿ ಬಳಿಯ ಸ್ಕಂದ ಲೇಔಟ್ ಬಳಿ ಎಂಟತ್ತು ಮಂದಿ ಅರುಣ್ ಮೇಲೆ ಮಾರಕಾಸ್ತ್ರಗಳಿಂದ ಏಕಾಏಕಿ ದಾಳಿ ಮಾಡಿದ ಪರಿಣಾಮ ತೀವ್ರ ರಕ್ತಸ್ರಾವದಿಂದ ನರಳಿ ಅರುಣ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಕೆಸ್ತೂರು ಪೊಲೀಸರು ಶವವನ್ನು ಮಂಡ್ಯ ಮಿಮ್ಸ್‌ಗೆ ರವಾನಿಸಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಂದಿನಿಂದ ರಾಘವೇಂದ್ರ ಮಠದಲ್ಲಿ ಆರಾಧನೆ

ಮಂಡ್ಯ: ಶ್ರೀ ರಾಮರಾಘವೇಂದ್ರ ಸಜ್ಜನ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಕಾವೇರಿ ನಗರ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಗುರು ರಾಘವೇಂದ್ರಸ್ವಾಮಿಗಳ 354ನೇ ಆರಾಧನಾ ಮಹೋತ್ಸವವನ್ನು ಆ.10ರಿಂದ 14ರವರೆಗೆ ಆಯೋಜಿಸಲಾಗಿದೆ ಎಂದು ಮಠದ ವ್ಯವಸ್ಥಾಪಕ ಬ್ರಾಮ್ಹಣ್ಯತೀರ್ಥ ತಿಳಿಸಿದರು. ಆ.10ರ ಬೆಳಿಗ್ಗೆ 11ರಿಂದ 12.30ರವರೆಗೆ ವಿದುಷಿ ಸಹನಾ ಶ್ರೀವಸ್ಸ ತಂಡದವರಿಂದ ದೇವರ ನಾಮ ಸಂಗೀತ ಕಚೇರಿ, ಮಧ್ಯಾಹ್ನ 12.40, ರಾತ್ರಿ 8.40ಕ್ಕೆ ಮಹಾಮಂಗಳಾರತಿ ಸಾರ್ವಜನಿಕ ಅನ್ನ ಸಂತರ್ಪಣೆ, ಆ.11 ಮತ್ತು 12 ರಂದು ನಗರದ ಪ್ರಮುಖ ಬೀದಿಗಳಲ್ಲಿ ಗುರುರಾಯರ ಉತ್ಸವ ಮೆರವಣಿಗೆ ನಡೆಯಲಿದೆ.

ವಿದ್ಯಾರ್ಥಿ ಜೀವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಮಹತ್ತರ ಘಟ್ಟ

ಮಂಡ್ಯ: ವಿದ್ಯಾರ್ಥಿ ಜೀವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಒಂದು ಮಹತ್ತರವಾದ ಘಟ್ಟವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಶನಿವಾರದಂದು ತಾಲೂಕಿನ ಚಿಕ್ಕಬಳ್ಳಿ–ಆನಸೋಸಲು ಗ್ರಾಮದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ ರಾಷ್ಟ್ರೀಯ ಸೇವಾ ಯೋಜನೆ ಘಟಕ, ಕೃಷಿ ಮಹಾವಿದ್ಯಾಲಯ ವಿ.ಸಿ. ಫಾರಂ ವತಿಯಿಂದ ನಡೆದ ದ್ವಿತೀಯ ವರ್ಷದ ಬಿಎಸ್ಸಿ ಕೃಷಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಕಾರ್ಯ ಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ತಮ್ಮ ಇಚ್ಚಾನುಸಾರ ಎನ್‌ಎಸ್‌ಎಸ್, ಎನ್‌ಸಿಸಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ನಂತಹ ಶಿಬಿರಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆ ಎನ್ನುವುದು ಶಿಕ್ಷಣದ ಜೊತೆ ನಮ್ಮನ್ನು ನಾವು ಸಮುದಾಯದಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಸಮಾಜದ ನಿಜವಾದ ಸಮಸ್ಯೆಗಳನ್ನು ಅರಿತುಕೊಂಡು ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಮುಖ್ಯವಾಗಿರುತ್ತದೆ ಎಂದು ತಿಳಿಸಿದರು.



ಕೃಷಿ ವಿದ್ಯಾರ್ಥಿಗಳಿಗೆ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ವಿಶೇಷ ಉಪನ್ಯಾಸ ನೀಡಿದರು.

ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ಕೃಷಿ ವಿದ್ಯಾರ್ಥಿಗಳ ಪಾತ್ರ ದೊಡ್ಡದಾಗಿರುತ್ತದೆ, ಕೃಷಿ ವಿದ್ಯಾರ್ಥಿಗಳು ತಮ್ಮ ಆರ್ಥಿಕತೆಯನ್ನು ವೃದ್ಧಿಸಿಕೊಳ್ಳುವ ಬದಲು ಸಮಾಜದ ಕುರಿತು ಯೋಚಿಸಿ ಸಮಾಜವನ್ನು ಮತ್ತು ದೇಶವನ್ನು ಅಭಿವೃದ್ಧಿ ಮಾಡುವತ್ತ ಹೆಜ್ಜೆ ಇಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಎಂ.ಕೃಷ್ಣ ನಿವೃತ್ತ ಎಸಿಎಫ್ ಎ.ಎಂ.ಅಣ್ಣಯ್ಯ, ಜಿಲ್ಲಾ ಕೆಡಿಪಿ ಸದಸ್ಯ ಸಿ.ಎಂ.ದ್ಯಾವಪ್ಪ, ಗ್ರಾಪಂ ಮಾಜಿ ಅಧ್ಯಕ್ಷೆ, ಸುಮಲೋಕೇಶ್, ಸದಸ್ಯ ಕೃಷ್ಣ, ಮುಖಂಡರಾದ ವೆಂಕಟೇಶ್, ಮರಿಗೌಡ, ಶಂಕರೇಗೌಡ, ಶಿಬಿರಾಧಿಕಾರಿ ಪ್ರವೀಣ್ ಕುಮಾರ್ ಸೇರಿದಂತೆ ಇತರರಿದ್ದರು.

ಮಳೆಯಿಂದ ಗೋಡೆ ಕುಸಿದ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ ಶಾಸಕರು



ಕೆ.ಆರ್.ಪೇಟೆ,ಆ.9– ತಾಲೂಕಿನ ಬೇಲದಕೆರೆ ಗ್ರಾಮದಲ್ಲಿ ಮೊನ್ನೆ ಸುರಿದ ಭಾರೀ ಮಳೆಗೆ ಮನೆಯೊಂದರ ಗೋಡೆ ಸಮೇತ ನೆಲಸಮಗೊಂಡಿದ್ದು ಘಟನಾ ಸ್ಥಳಕ್ಕೆ ಶಾಸಕ ಹೆಚ್.ಟಿ.ಮಂಜು ಭೇಟಿ ನೀಡಿ ಪರಿಶೀಲನೆ ನಡೆಸಿ, ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಶೀಳನೆರೆ ಹೋಬಳಿಯ ಬೇಲದಕೆರೆ ಗ್ರಾಮದ ಲೇಟ್ ಬೆಟ್ಟಯ್ಯನವರ ಮಗ ಶ್ರೀಧರ್ ರವರ ಮನೆಯು ಭಾರೀ ಮಳೆಗೆ ಗೋಡೆ ಸಮೇತ ಕುಸಿದು ಬಿದ್ದಿತ್ತು ಇದರಿಂದ ಸುಮಾರು 5 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ. ಮನೆ ಕುಸಿದು ಬಿದ್ದಿರುವ ವಿಚಾರ ತಿಳಿದ ತಕ್ಷಣ ಶಾಸಕ ಹೆಚ್.ಟಿ. ಮಂಜು ಅಧಿಕಾರಿಗಳ ತಂಡದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಮನೆಯವರಿಂದ ಹಾಗೂ ಗ್ರಾಮಸ್ಥರಿಂದ ಮಾಹಿತಿ ಪಡೆದುಕೊಂಡರು. ಸೂಕ್ತ ಪರಿಹಾರ ದೊರಕಿಸಿಕೊಡುವ ಸಂಬಂಧ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಶೀಳನೆರೆ ಹೋಬಳಿ ರಾಜಸ್ವ ನಿರೀಕ್ಷಕ ರಾಜಮೂರ್ತಿ, ಗ್ರಾಮ ಲೆಕ್ಕಾಧಿಕಾರಿ ಮಧು ಕುಮಾರ್, ಗ್ರಾ.ಪಂ. ಅಧ್ಯಕ್ಷ ಅಶೋಕ್, ತಾ.ಪಂ. ಮಾಜಿ ಸದಸ್ಯರಾದ ವಿಜಯಲಕ್ಷ್ಮೀ ಮಂಜೇಗೌಡ, ಗ್ರಾಪಂ. ಮಾಜಿ ಅಧ್ಯಕ್ಷ ಪಾಪೇಗೌಡ, ಮುಖಂಡರಾದ ನಂಜಪ್ಪ, ಕೃಷ್ಣೇಗೌಡ, ಮರೀಗೌಡ ಮತ್ತಿತರರು ಉಪಸ್ಥಿತರಿದ್ದರು.

ಆ.13ರಂದು ಕಾರ್ಪೋರೇಟ್ ಕಂಪನಿಗಳ ವಿರುದ್ಧ ಪ್ರತಿಭಟನೆ

ಮಂಡ್ಯ: ಬಹುರಾಷ್ಟ್ರೀಯ ಮತ್ತು ಕಾರ್ಪೋರೇಟ್ ಕಂಪನಿಗಳು ಕೃಷಿಯೆಡೆಗೆ ಮುಂದಾಗಿದ್ದು, ಕೃಷಿ ಮತ್ತು ರೈತ, ಕಾರ್ಮಿಕ, ದಲಿತ, ಮಹಿಳೆ, ವಿದ್ಯಾರ್ಥಿ, ಯುವಜನರ ಬದುಕಿಗೆ ಮಾರಕವಾಗಿದ್ದು, ಬಹುರಾಷ್ಟ್ರೀಯ ಮತ್ತು ಕಾರ್ಪೋರೇಟ್ ಕಂಪನಿಗಳನ್ನು ದೇಶ ದಿಂದ ಹೊರದೂಡಲು ಆಗ್ರಹಿಸಿ ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ಆ.13ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಯಚಾಮರಾಜೇಂದ್ರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರನ್ನು ದೇಶದಿಂದ ತೊಲಗಿಸಲು ಆಗಸ್ಟ್ 9ರಂದು ಭಾರತ ಬಿಟ್ಟು ತೊಲಗಿ ಹೋರಾಟದಂತೆ ದೇಶಾದ್ಯಂತ ಬಹುರಾಷ್ಟ್ರೀಯ ಮತ್ತು ಕಾರ್ಪೋರೇಟ್ ಕಂಪನಿಗಳನ್ನು ದೇಶದಿಂದ ಹೊರಗೆ ದೂಡಲು ದೇಶಾದ್ಯಂತ ಬೃಹತ್ ಪ್ರತಿಭಟನೆ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಕರೆ ನೀಡಿದೆ ಎಂದರು.

ಬಹುರಾಷ್ಟ್ರೀಯ ಮತ್ತು ಕಾರ್ಪೋರೇಟ್ ಕಂಪನಿಗಳು ದೇಶದ ಆರ್ಥಿಕತೆಯನ್ನು ಖಾಸಗೀಕರಣಗೊಳಿಸಿ ಎಲ್ಲಾ ಕೇತ್ರಗಳಲ್ಲಿಯೂ ಲಗ್ಗೆ ಹಿಡುವ ಮೂಲಕ ದೇಶದ ಸ್ವಾವಲಂಬಿ ಹಾಗೂ ಸಾರ್ವಭೌಮಕ್ಕತೆ ತೊಂದರೆಯುಂಟಾಗಲಿದ್ದು, ರೈತ, ಕಾರ್ಮಿಕ, ದಲಿತ, ಮಹಿಳೆ, ವಿದ್ಯಾರ್ಥಿ, ಯುವಜನ ಸಂಘಟನೆಗಳು ಒಟ್ಟಾಗಿ ಕೇಂದ್ರ ಸರ್ಕಾರದ ಕಾರ್ಪೋರೇಟ್ ನೀತಿಯ ವಿರುದ್ಧ ಹೋರಾಟ ಮಾಡಲಾಗುವುದು ಎಂದರು.

ಕೇಂದ್ರ ಸರ್ಕಾರ ಅಮೆರಿಕಾದೊಂದಿಗೆ ಆರ್ಥಿಕ, ವಾಣಿಜ್ಯ, ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಬಾರದು, ವಿದೇಶಿ ನೇರ ಹೂಡಿಕೆಗೆ ಕಡಿವಾಣ ಹಾಕಬೇಕು, ಎನ್‌ಪಿಎಫ್‌ಎಂ ಹಾಗೂ ಎನ್‌ಸಿಪಿ ರದ್ದುಪಡಿಸಬೇಕು, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮೂಲಕ ಖಾಸಗಿ ಬಂಡವಾಳ ಉತ್ತೇಜಿಸುವ ನೀತಿ ಕೈಬಿಡಬೇಕು. ರೈತರ ಎಲ್ಲಾ ಬೆಳೆಗಳಿಗೂ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಬೇಕು, ಸಮಗ್ರ ಸಾಲಮನ್ನ ರೀತಿ ಜಾರಿ, ಮೈಕ್ರೋ ಫೈನಾನ್ಸ್ ಕಿರುಕುಳ ತಡೆ ಸೇರಿದಂತೆ ವಿವಿದ ಬೇಡಿಕೆಗಳ ಈಡೇರಿಗೆ ಆಗ್ರಹಿಸಲಾಗುವುದು ಎಂದು ಹೇಳಿದರು.

ಕಾಳಮ್ಮ ನಿಧನ



ಹೊಳೆನರಸೀಪುರ: ಎರೇಗೌಡನಹಳ್ಳಿ ಗ್ರಾಮದ ಯಜಮಾನ್ ದಿವಂಗತ ಕಾಫಿ ತೋಟದ ಈರಯ್ಯನವರ ಧರ್ಮಪತ್ನಿ ಕಾಳಮ್ಮ (85) ನಿಧನ ಹೊಂದಿದ್ದಾರೆ. ದಿವಂಗತರು ಪುತ್ರ ರಾಜು, ಸೊಸೆ ದೊಡ್ಡಹಳ್ಳಿ ಗ್ರಾಪಂ. ಮಾಜಿ ಉಪಾಧ್ಯಕ್ಷೆ ಪಾರ್ವತಿ ರಾಜು, ಅಂಗನವಾಡಿ ಶಿಕ್ಷಕಿ ಶಿವಮ್ಮ ಸೇರಿದಂತೆ ಐವರು ಪುತ್ರಿಯರು, ಮೊಮ್ಮಗ ಪತ್ರಕರ್ತ ಸಾಯಿಕುಮಾರ್ ಹಾಗೂ ಹೊಳೆ ನರ ಸೀಪುರ ತಾಲೂಕು ಘಟಕದ ಗೃಹ ರಕ್ಷಕದಳ ಸಿಬ್ಬಂದಿ ಮಹೇಶ್ (ಮಂಜು) ಸೇರಿದಂತೆ ಹದಿಮೂರು ಮಂದಿ ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರವು ಇಂದು ಎರೇಗೌಡನಹಳ್ಳಿ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನಡೆಯಿತು.

ಪತ್ರಕರ್ತರು ಕಳಕಳಿಯಿಂದ ಕಾರ್ಯ ನಿರ್ವಹಿಸಲಿ

ಗುಂಡ್ಲುಪೇಟೆ, ಆ.9 (ಸೋಮ್.ಜಿ)– ಪತ್ರಕರ್ತರು ಸಾಮಾಜಿಕ ಕಳಕಳಿಯಿಟ್ಟುಕೊಂಡು ಕೆಲಸ ಮಾಡಬೇಕು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ಇಲ್ಲಿನ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಪಟ್ಟಣದ ಜ್ಞಾನ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತೀಚಿನ ದಿನಗಳಲ್ಲಿ ಯುವಜನತೆ ಸಾಮಾಜಿಕ ಜಾಲತಾಣಗಳ ಮೊರೆಹೋಗುತ್ತಿದ್ದು ಪತ್ರಿಕೆಗಳನ್ನು ಕೊಂಡು ಓದುವ ಅಭ್ಯಾಸ ಕಡಿಮೆಯಾಗುತ್ತಿದೆ. ಪತ್ರಿಕೆಗಳು ಯಾವಾಗಲೂ ನಿಖರವಾದ ಮಾಹಿತಿ ನೀಡುವುದರಿಂದ ಅವುಗಳನ್ನು ಕೊಂಡು ಓದುವ ಪ್ರವೃತ್ತಿ ಹೆಚ್ಚಿಸಿಕೊಂಡು ಅವುಗಳ ಬೆಳವಣಿಗೆಗೆ ನೆರವಾಗಬೇಕು ಎಂದು ಹೇಳಿದರು.

ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಮಾತನಾಡಿ, ಸ್ವತಂತ್ರಪೂರ್ವದ ಪತ್ರಿಕೆಗಳು ಸುದ್ದಿಗೆ ಹೆಚ್ಚಿನ ಆದ್ಯತೆ ನೀಡಿದ್ದರೆ ಈಗ ಕಾರ್ಪೋರೇಟ್ ಸಂಸ್ಥೆಗಳ ಕಪಿಮುಷ್ಟಿಯಲ್ಲಿ ಸಿಲುಕಿದ್ದರಿಂದ ಗುಣಮಟ್ಟದ ಸುದ್ದಿಗಳಿಗಿಂತ ಹೆಚ್ಚಾಗಿ ಜಾಹೀರಾತುಗಳಿಗೆ ತಲೆಕೆಡಿಸಿಕೊಳ್ಳುವಂತಾಗಿದೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಉತ್ತಮ ಅವಕಾಶವಿದ್ದು ಇದರ ಬಗ್ಗೆ ಹೆಚ್ಚಿನ ಸುದ್ದಿಮಾಡುವ ಮೂಲಕ ಅಭಿವೃದ್ಧಿಗೆ ನೆರವಾಗಬೇಕು. ಮಠಾಧಿಪತಿಗಳು ಹಾಗೂ ರಾಜಕಾರಣಿಗಳು ಪತ್ರಕರ್ತರಿಗೆ ಉಡುಗೊರೆ ನೀಡುವುದನ್ನು ನಿಲ್ಲಿಸಬೇಕು ಎಂದರು. ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವ ರಾಜು ಕಪ್ಪಸೋಗೆ ಮಾತನಾಡಿ, ಶಾಸಕರು ಪತ್ರಕರ್ತರ ಭವನ ನಿರ್ಮಾಣಕ್ಕೆ ಅಗತ್ಯ ನೆರವು ಹಾಗೂ ಪತ್ರಕರ್ತರಿಗೆ ನಿವೇಶನ ನೀಡಲು ಕ್ರಮವಹಿಸಬೇಕೆಂದು ಮನವಿ ಮಾಡಿದರು.



ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ಡಾ.ಕೆ.ಬಿ.ಗಣಪತಿ ಅವರ ಭಾವಚಿತ್ರಕ್ಕೆ ಶಾಸಕ ಗಣೇಶ್ ಪ್ರಸಾದ್ ಪುಷ್ಪಾರ್ಚನೆ ಮಾಡಿದರು.

ಶ್ರದ್ಧಾಂಜಲಿ: ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ಡಾ.ಕೆ.ಬಿ.ಗಣಪತಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಸಭೆ ಎರಡು ನಿಮಿಷ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸನ್ಮಾನ: ಪಟ್ಟಣದ ಹಿರಿಯ ಪತ್ರಿಕಾ ಮಾರಾಟಗಾರರಾದ ಗೋಪಾಲ್, ಬಸವಣ್ಣ ಮತ್ತು ಮಟ್ಟಶೆಟ್ಟಿ ಅವರನ್ನು ಗಣ್ಯರು ಸನ್ಮಾನಿಸಿದರು. ನಂತರ ಮನೆಗಳಿಗೆ ಪತ್ರಿಕೆ ಹಂಚುವ ಹುಡುಗರಿಗೆ ಶಾಲಾ ಬ್ಯಾಗ್ ವಿತರಣೆ ಮಾಡಲಾಯಿತು.

ಮುಖಂಡರಾದ ಹೆಚ್.ಎಸ್.ನಂಜಪ್ಪ, ಹೆಚ್.ಎಸ್.ನಂಜುಂಡಪ್ರಸಾದ್, ಬಿ. ಕುಮಾರ ಸ್ವಾಮಿ, ಅಂಗಡಿ ಶಿವಕುಮಾರ್, ಪಿ.ಸುರೇಂದ್ರ, ಪುಟ್ಟಸ್ವಾಮಾಚಾರ್, ಡಾ. ನವೀನ್‌ಮೌರ್ಯ, ಪ್ರಣಯ್, ಶೈಲೇಶ್, ಎಲ್‌ಐಸಿ ವೆಂಕಟರಾಜು, ಕರವೇ ಆರ್. ಮೋಹನ್, ನಾಗೇಶ್, ಸುರೇಶ್, ಬೈಜು, ಬ್ರಹ್ಮಾನಂದ್, ಸೇರಿ ದಂತೆ ವಿವಿಧ ಪಕ್ಷದ ಮುಖಂಡರು, ಕನ್ನಡಪರ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಜಿ.ಎಸ್.ಮಧುಸೂದನ್, ರಾಜ್ಯ ಕಾರ್ಯಕಾರಿಣಿ ಸದಸ್ಯ ನಂದೀಶ್, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಸೋಮಶೇಖರ್, ಪ್ರಧಾನಕಾರ್ಯದರ್ಶಿ ಮಹೇಶ್, ಕಾರ್ಯದರ್ಶಿ ರಾಜೇಶಭಟ್, ಖಜಾಂಚಿ ಎಂ. ಮಲ್ಲೇಶ್, ನಿರ್ದೇಶಕರಾದ ಬಸವರಾಜು, ರಾಜ್‌ಗೋಪಾಲ್, ಬೇಗೂರು ನಾಗೇಶ್ ಮಣಿಕಂಠ, ಶೇಖರ್, ಹಂಗಳ ನಂಜಪ್ಪ, ಕೃಷ್ಣಗೋಪಾಲ್, ಮನು ಶ್ಯಾನುಭೋಗ್, ಸದಸ್ಯರಾದ ಮಂಜುನಾಥ್. ಚಂದ್ರು, ಮಹೇಂದ್ರ ಹಸಗೂಲಿ, ಹರೀಶ್, ವಿಶ್ವನಾಥ್, ಕೊಡಗಾಪುರ ಪುಟ್ಟಸ್ವಾಮಿ, ವೆಂಕಟೇಶ, ಜನಾ ರ್ಧನ್, ಶಿವಕುಮಾರ್ ದೇವರಹಳ್ಳಿ, ವೀರನಪುರ ಮಲ್ಲೇಶ್, ಶಿಂಡನಪುರ ನಿಂಗಪ್ಪ ಇದ್ದರು.

ಅಕ್ಟೋಬರ್ ಒಳಗೆ ಕಾಮಗಾರಿ ಪೂರ್ಣಗೊಳಿಸಿ

ಕೊಳ್ಳೇಗಾಲ, ಆ.9–ಪಟ್ಟಣದಲ್ಲಿ 2 ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿಯನ್ನು ಅಕ್ಟೋಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ

ಅಂಬೇಡ್ಕರ್ ಭವನಕ್ಕೆ ಶನಿವಾರ ಶಾಸಕ ಎ.ಆರ್.ಕೃಷ್ಣಮೂರ್ತಿ ಮತ್ತು ಅಧಿಕಾರಿಗಳ ಜೊತೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸಭೆಯಲ್ಲಿ ಮಾತನಾಡಿ, ನವೆಂಬರ್ ತಿಂಗಳಲ್ಲಿ ಉದ್ಘಾಟನೆಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಅಂಬೇಡ್ಕರ್ ಭವನ ನಿರ್ಮಾಣ ಮಾಡಲು 2023ರಲ್ಲಿ ಮೊದಲು 5 ಲಕ್ಷ ಅನುದಾನದಡಿ ಭೂಮಿ ಪೂಜೆ ಆಗಿದೆ. ಆ ನಂತರದಲ್ಲಿ ಲಭ್ಯವಾದ ಶಾಸಕ, ಸಂಸದರ ಕ್ಷೇತ್ರಾಭಿವೃದ್ಧಿ ಅನುದಾನ ಸೇರಿ, ಸ್ಥಳಿಯ ನಗರಸಭೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನಗಳನ್ನು ಬಳಸಿಕೊಂಡು ಇದುವರೆ 4 ಕೋಟಿಗೂ ಹೆಚ್ಚುವೆಚ್ಚವಾಗಿದ್ದರೂ ಇನ್ನೂ ಭವನ ಉದ್ಘಾಟನೆ ಆಗದಿರುವುದು ವಿಪರ್ಯಾಸದ ಸಂಗತಿ ಅ.30ರೊಳಗೆ ಕಾಮಗಾರಿಯನ್ನು ಮುಗಿಸಿ ನ.26 ರಂದು ಸಂವಿಧಾನ ದಿನಾಚರಣೆ ವೇಳೆಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರ ಇಚ್ಛೆಯಂತೆ ಭವನ ಉದ್ಘಾಟನೆ ಆಗಲೇಬೇಕು ಎಂದರು.



ನೆನೆಗುದಿಗೆ ಬಿದ್ದಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಡಿಸಿ ಶಿಲ್ಪಾನಾಗ್ ಅವರಿಗೆ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಅಂಬೇಡ್ಕರ್ ಭವನ ಪೂರ್ಣಗೊಳ್ಳುವ ಸಂಬಂಧ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ನವೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆತಂದು ಶಾದಿ ಮಹಲ್, ಅಂಬೇಡ್ಕರ್ ಭವನ ಉದ್ಘಾಟನೆ ಅದೇ ರೀತಿಯಲ್ಲಿ 250 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಿಸುವ ಇಂಗಿತವನ್ನು ವ್ಯಕ್ತಪಡಿಸಿದರು

ನಗರಸಭಾಧ್ಯಕ್ಷೆ ಸಿ.ಎನ್.ರೇಖಾ ರಮೇಶ್, ಪೌರಾಯುಕ್ತ ರಮೇಶ್, ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ತಹಸೀಲ್ದಾರ್ ಬಸವರಾಜು, ತಾ.ಪಂ. ಇಒ ಗುರುಶಾಂತಪ್ಪ ಬೆಳ್ಳುಂಡಗಿ, ಡಿವೈಎಸ್ಪಿ ಎಂ.ಧರ್ಮೇಂದ್ರ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಪ್ರಭಾರ ಉಪ ನಿರ್ದೇಶಕಿ ಬಿಂದು, ಸಹಾಯಕ ನಿರ್ದೇಶಕ ಕೇಶವಮೂರ್ತಿ, ಕೆ.ಆರ್.ಐ.ಡಿ.ಎಲ್ ಇಇ ಚಿಕ್ಕಲಿಂಗಯ್ಯ, ಸಂಘದ ಉಪಾಧ್ಯಕ್ಷ ಕಿರಣ್, ಕಾರ್ಯದರ್ಶಿ ಪಾಪಣ್ಣ, ಕಾನೂನು ಸಲಹೆಗಾರ ವಕೀಲ ಎಚ್.ಮೋಹನ್ ಕುಮಾರ್, ನಿರ್ದೇಶಕರಾದ ಬಿ.ಮೂರ್ತಿ, ಚಿಕ್ಕಮಾಳಿಗೆ, ಬ್ಯಾಂಕ್ ರಾಚಪ್ಪಾಜಿ, ಎಲ್.ಲಿಂಗರಾಜು, ದಿಲೀಪ್, ಸಿದ್ದಪ್ಪಾಜಿ, ನಗರಸಭಾ ಮಾಜಿ ಅಧ್ಯಕ್ಷ ಎಸ್.ರಮೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಸದಸ್ಯರಾದ ಮಂಜುನಾಥ್, ರಾಘವೇಂದ್ರ, ಶಾಂತರಾಜು, ಸುಮಾ ಸುಬ್ಬಣ್ಣ, ಸ್ವಾಮಿ ನಂಜಪ್ಪ ದೇವಾನಂದ್, ಭೀಮನಗರದ ಯಜಮಾನರು, ಮುಖಂಡರು ಇದ್ದರು



ತೊಂಡವಾಡಿಯಲ್ಲಿ ಶ್ರಾವಣ ಮಾಸದ ವಿಶೇಷ ಪೂಜೆ

ತೊಂಡವಾಡಿ: ಐದನೇ ವರ್ಷದ ಶ್ರಾವಣ ಮಾಸದ ವಿಶೇಷ ಪೂಜೆ ಗ್ರಾಮದಲ್ಲಿ ಯಶಸ್ವಿಯಾಗಿ ನೆರವೇರಿತು.

ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಆಂಜನೇಯ ಸ್ವಾಮಿಗೆ ಅಭಿಷೇಕವನ್ನು ಮಾಡಲಾಯಿತು. ಇದೇ ಸಂದರ್ಭದಲ್ಲಿ ದೇವಾಲಯಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮದ ಯುವ ಕರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಯಳಂದೂರು, ಆ.9 (ವಿ.ನಾಗರಾಜು)–ತಾಲೂಕಿನ ವೈ.ಕೆ.ಮೋಳೆ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಗಿ ಡಿ.ದೊಡ್ಡರಾಜು, ಉಪಾಧ್ಯಕ್ಷರಾಗಿ ನಿರ್ಮಲ ವಿ.ರಾಜು ಆಯ್ಕೆಯಾಗಿದ್ದಾರೆ. ಶಾಲೆಯಲ್ಲಿ ನಡೆದ ನೂತನ ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಸಭೆಯಲ್ಲಿ ಎಲ್ಲ 18 ಸದಸ್ಯರ ಸರ್ವಾನುಮತದಿಂದ ದೊಡ್ಡರಾಜು, ನಿರ್ಮಲ ವಿ.ರಾಜು ಅವರನ್ನು ಆಯ್ಕೆ ಮಾಡಲಾಯಿತು.

ಎಸ್‌ಡಿಎಂಸಿ ನೂತನ ಅಧ್ಯಕ್ಷ ಡಿ.ದೊಡ್ಡರಾಜು ಮಾತನಾಡಿದರು. ಗ್ರಾಮದ ಯಜಮಾನರಾದ ವೆಂಕಟೇಶ್, ಶಾಲೆಯ ಮುಖ್ಯ ಶಿಕ್ಷಕ ಸುರೇಶ್, ಶಿಕ್ಷಕ ಶಿವಣ್ಣ, ಮುಖಂಡರಾದ ವಿ.ರಾಜಶೇಖರ್, ಮಾದೇಶ್, ಕೆ.ವೆಂಕಟೇಶ್, ಜಯಪ್ರಕಾಶ್, ರಾಜು, ಕೆಂಪರಾಜು, ದೊಡ್ಡಪುಟ್ಟ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು ಹಾಜರಿದ್ದರು.

ಮೈಸೂರು ಮಿತ್ರ
ಭಾನುವಾರ 10-08-2025

ವಾರದ ಮಿತ್ರ
ಸಾಪ್ತಾಹಿಕ ಪುರವಣಿ



ಇಂದಿನಿಂದ ಮೂರು ದಿನ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ವರ್ಷದ ಆರಾಧನಾ ಮಹೋತ್ಸವದ ಅಂಗವಾಗಿ ವಿಶೇಷ ಲೇಖನ

ವೈಶಿಷ್ಟ್ಯದ ಮೃತ್ತಿಕಾ ಬೃಂದಾವನ





ಕ್ರಿ.ಶ. 1671ರಲ್ಲಿ ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರು ಸಶರೀರವಾಗಿ ಬೃಂದಾವನಸ್ಥರಾಗಿ ಕಳೆದ 354 ವರ್ಷಗಳಿಂದ ಆಸ್ತಿಕರನ್ನು ಅನುಗ್ರಹಿಸುತ್ತಿರುವುದು, ಅವರ ಮಹಾ ಪುಣ್ಯವೇ ಆಗಿದೆ. ಶ್ರೀ ಗುರುರಾಯರು ಬೃಂದಾವನಸ್ಥರಾದ ನಂತರ ವಿವಿಧೆಡೆಗಳಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಮೃತ್ತಿಕಾ ಬೃಂದಾವನಗಳನ್ನು ಭಕ್ತರು ಸ್ಥಾಪಿಸಿ ಪುನೀತರಾಗಿರುವರು.

ಅಲ್ಲದೇ ಮಂತ್ರಾಲಯದಲ್ಲಿನ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾಗಿದ್ದ ಹಲವಾರು ಯತಿಶ್ರೇಷ್ಠರು ಕಾಲಕಾಲಕ್ಕೆ ವಿವಿಧ ಸ್ಥಳಗಳಲ್ಲಿ ನಿರ್ಮಿಸಿದ ಶ್ರೀ ಮಠದ ಬೃಂದಾವನಕ್ಕೆ ವಿಶೇಷವಾದ ಮೃತ್ತಿಕೆಯನ್ನು ನೀಡಿ ಆಶೀರ್ವದಿಸುತ್ತಾ ಬಂದಿದ್ದಾರೆ. ಅಂದರೆ ಆಷಾಢ ಶುಕ್ಲ ಗುರುಪೂರ್ಣಿಮೆ ದಿನದಂದು ಪರಂಪರೆಯ ಸಂಪ್ರದಾಯದಂತೆ ತುಂಗಾಭದ್ರಾ ತೀರದಲ್ಲಿರುವ ಶ್ರೀ ರಾಘವೇಂದ್ರ ಯತಿಶ್ರೇಷ್ಠರು ಕುಳಿತು ಅನುಷ್ಠಾನ ಮಾಡಿದ ಪವಿತ್ರ ಸ್ಮಾರಕವಾದ ಶ್ರೀಕ್ಷೇತ್ರ ಮಂತ್ರಾಲಯದ ಪುಣ್ಯಭೂಮಿಯ ತುಳಸೀವನದಲ್ಲಿ ಕಳಸ ಸ್ಥಾಪನೆ, ಗಣಪತಿ ಪ್ರಾರ್ಥನೆ, ವಿಶ್ವಂಭರ ಪೂಜೆ, ವಿಶೇಷ ಧಾರ್ಮಿಕ ಪೂಜೆ ಮಾಡಿ ಭೂ ಶುದ್ಧಗೊಳಿಸಿ ಸ್ಥಳದಲ್ಲೇ ಮೃತ್ತಿಕೆ ಸಂಗ್ರಹಿಸಿ ಬಳಿಕ ಸುವರ್ಣಪಲ್ಲಕ್ಕಿಯಲ್ಲಿ ಮೃತ್ತಿಕೆಯನ್ನಿರಿಸಿ ಶೋಭಾ ಯಾತ್ರೆಯ ಮೂಲಕ ಶ್ರೀಮಠಕ್ಕೆ ತೆರಳಿ ಶ್ರೀರಾಘವೇಂದ್ರಸ್ವಾಮೀಜಿಯವರ ಮೂಲ ಬೃಂದಾವನದ ಮೇಲ್ಭಾಗದಲ್ಲಿರಿಸಿ ಪೂಜೆ ಸಲ್ಲಿಸಲಾಗುವುದು. ಹೀಗೆ ಪೂಜಿಸಿದ ಮೃತ್ತಿಕೆಯನ್ನು ವಿವಿಧೆಡೆಯಲ್ಲಿ ಸ್ಥಾಪಿಸಲಾಗುವ ಶ್ರೀಗುರುರಾಯರ ಬೃಂದಾವನದಲ್ಲಿ ಶಾಶ್ವತವಾಗಿರಿಸಿ ಆರಾಧಿಸುವುದು ಮೃತ್ತಿಕಾ ಬೃಂದಾ ವನದ ವಿಶೇಷತೆಯಾಗಿದೆ. ಹೀಗೆ ಸ್ಥಾಪಿತ ಮೃತ್ತಿಕಾ ಬೃಂದಾವನದ ಮಹಿಮೆಯನ್ನು ಹಲವೆಡೆ ಕಾಣಬಹುದಾಗಿದೆ. ಅಲ್ಲದೇ ಪವಿತ್ರ ಮೃತ್ತಿಕೆಯನ್ನು ಸ್ವೀಕರಿಸಿದ ಆಸ್ತಿಕರ ರೋಗರುಜಿನಗಳಿಗೆ ಪರಿಹಾರವೂ ಸಹ ಉಂಟಾಗಿದೆ ಎನ್ನಲಾಗಿದೆ. ಶ್ರೀಗುರುರಾಯರ ಜನ್ಮಸ್ಥಳವಾದ ಕುಂಭಕೋಣಂ, ಶ್ರೀಗುರುರಾಯರು ಸನ್ಯಾಸತ್ವ ಸ್ವೀಕರಿಸಿದ ತಂಜಾವೂರು, ಬಿಚ್ಚಾಲೆ, ನಂಜನಗೂಡು, ಚಿತ್ರದುರ್ಗ, ಬಾಳಗಾರು, ಉಡುಗಣಿ ಮುಂತಾದ ಸ್ಥಳಗಳು ಪ್ರಮುಖ ಪುಣ್ಯಕ್ಷೇತ್ರಗಳಾಗಿವೆ.

ಶ್ರೀಕ್ಷೇತ್ರ ನಂಜನಗೂಡು: ಪ್ರಾಚೀನ ಕಾಲದಿಂದಲೂ ವಿದ್ಯಾಕೇಂದ್ರವೆನಿಸಿರುವ ನಂಜನಗೂಡಿನಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರ ಮಠವು ಭಕ್ತರಿಗೆ ಮಾರ್ಗದರ್ಶನ ಮಾಡುತ್ತಿದೆ. ದ್ವೈತ ಪರಂಪರೆಯ 10ನೇ ಪೀಠಾಧಿಪತಿಗಳಾಗಿದ್ದ ಶ್ರೀ ವಿಬುಧೇಂದ್ರತೀರ್ಥರು ಸಂಚಾರ ಕ್ರಮದಲ್ಲಿ ನಂಜನಗೂಡಿಗೆ ಆಗಮಿಸಿದಾಗ ಶ್ರೀ ಕ್ಷೇತ್ರದಲ್ಲಿನ ಕೆಲವು ಭಾಗಗಳನ್ನು ಅಂದಿನ ಮೈಸೂರು ಸಂಸ್ಥಾನದ ಮಹಾರಾಜರು ನೀಡಲಾಗಿ ಶ್ರೀಗಳವರು ಇಲ್ಲಿಯೇ ಕೆಲಕಾಲ ನೆಲೆಸಿದ್ದರು. ಮುಂದೆ ಮೈಸೂರು ಸಂಸ್ಥಾನದ ಮಹಾರಾಜರಾದ ಮುಮ್ಮಡಿ ಕೃಷ್ಣದೇವರಾಜ ಒಡೆಯರ್ (1799–1868)ರವರು ಶ್ರೀಗುರುರಾಯರ ಪರಂಪರೆಯ 11ನೇಯ ಪೀಠಾಧಿಪತಿಗಳಾಗಿದ್ದ ಶ್ರೀಸುಜನೇಂದ್ರತೀರ್ಥರ ಪಾಂಡಿತ್ಯಕ್ಕೆ ಮನಸೋತು ತಮ್ಮ ರಾಜ್ಯದಲ್ಲಿಯೇ ಇರಲು ಅರಿಕೆ ಮಾಡಿಕೊಂಡರಂತೆ. ಪ್ರತಿತಿಂಗಳು ಶ್ರೀಮಠಕ್ಕೆ ತಗಲುವ ವೆಚ್ಚವನ್ನು ಭಂಡಾರದಿಂದ ಕಂಠೀವರಹಗಳನ್ನು ಕೊಡುವಂತೆ ವ್ಯವಸ್ಥೆ ಮಾಡಿ, ಹಲವಾರು ಗ್ರಾಮಗಳನ್ನು ಸಹ ದಾನವಾಗಿ ನೀಡಿದರು ಎನ್ನಲಾಗಿದೆ ಅಲ್ಲದೇ ನಂಜನಗೂಡಿನಲ್ಲಿ ಪೂರ್ಣಯ್ಯ ಛತ್ರವೆಂದು ಕರೆಯಲ್ಪಡುತ್ತಿದ್ದ ಈಗಿನ ಶ್ರೀಮಠದ ಕಟ್ಟಡವನ್ನು ದಾನವಾಗಿ ಕೊಟ್ಟರು. ಅದೂವರೆಗೆ ಆನೆಗುಂದಿ, ಕುಂಭಕೋಣ ಹಾಗೂ ತಂಜಾವೂರು ಅರಸರ ಆಶ್ರಯದಲ್ಲಿದ್ದ ಶ್ರೀಮಠವು ತದನಂತರ ಮೈಸೂರು ಸಂಸ್ಥಾನದ ರಾಜರ ಕೋರಿಕೆಯಂತೆ ನಂಜನಗೂಡಿನಲ್ಲಿ ನೆಲೆಸಿ ತತ್ವಪ್ರಸಾರ ಹಾಗೂ ವಿದ್ಯಾಪ್ರಸಾರವನ್ನು ಮುಂದುವರೆಸಲಾಗಿ ಶ್ರೀಮಠವು ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳವರ ಮಠವೆಂದೇ ಪ್ರಖ್ಯಾತವಾಗಿದೆ.

ಮೈಸೂರು ಸಂಸ್ಥಾನದ ಮಹಾರಾಜರು ಶ್ರೀಮಠಕ್ಕೆ ಸ್ಥಳಾವಕಾಶ ಕಲ್ಪಿಸುವ ಮುನ್ನವೇ ಅಲ್ಲಿ ಶ್ರೀಪ್ರಾಣದೇವರು ಸ್ಥಾಪಿಸಲ್ಪಟ್ಟಿತ್ತು. ವಿಶೇಷತೆ ಎಂದರೆ ಈ ಮೂರ್ತಿಯು ಹನುಮ, ಭೀಮ ಮತ್ತು ಮಧ್ವರ ಮೂರು ಅವತಾರಗಳನ್ನು ಒಳಗೊಂಡಿದ್ದು ಆಕರ್ಷಣೀಯವಾಗಿದೆ. ಇಲ್ಲಿ ವಿಶ್ವದಲ್ಲಿನ ಶ್ರೀ ರಾಘವೇಂದ್ರಸ್ವಾಮಿಗಳವರ ಏಕೈಕ ಸ್ವಯಂವ್ಯಕ್ತ ಶಿಲಾಪ್ರತಿಮೆಯನ್ನು ಸಹ ದರ್ಶನ ಪಡೆಯಬಹುದು. ಒಮ್ಮೆ ಶ್ರೀಸುಜ್ಞಾನೇಂದ್ರ ತೀರ್ಥರಿಗೆ ಶ್ರೀಗುರುರಾಯರು ಕನಸಿನಲ್ಲಿ ಬಂದು ನಾನು ಶ್ರೀರಂಗಪಟ್ಟಣದ ಕಾವೇರಿನದಿಯ ದಂಡೆಯಲ್ಲಿ ಒಂದು ಶಿಲೆಯಾಗಿ ವ್ಯಕ್ತವಾಗಿದ್ದೇನೆ. ನಾಳೆ ಬರುತ್ತೇನೆ ಸಿದ್ಧಮಾಡಿಕೋ ಎಂದು ತಿಳಿಸಿದರಂತೆ. ಅದೇ ದಿನ ಮೈಸೂರು ಸಂಸ್ಥಾನದ ಮಹಾರಾಜರಿಗೂ ಅಂತದೇ ಸೂಚನೆ ಹಾಗೂ ನಂಜನಗೂಡಿನಲ್ಲಿ ಪ್ರತಿಷ್ಠಾಪನೆಗೆ ಎಲ್ಲಾ ವ್ಯವಸ್ಥೆ ಮಾಡುವುದು ಎಂದು ಶ್ರೀಗುರುರಾಯರು ಸೂಚಿಸಿದರಂತೆ. ಅಂತೆಯೇ ಶ್ರೀ ಗುರುರಾಯರನ್ನು ಪೂಜಿಸುತ್ತಿದ್ದ ಓರ್ವ ಭಕ್ತನಿಗೆ ಕನಸಿನಲ್ಲಿ ಶ್ರೀಗುರುರಾಯರು ಕಾಣಿಸಿಕೊಂಡು ಕಾವೇರಿ ತೀರದಲ್ಲಿನ ಮಡಿವಾಳನ ಬಳಿ ಇರುವ ನನ್ನ ರೂಪದ ಶಿಲೆಯನ್ನು ಮೈಸೂರಿನ ಅರಸರು ಮತ್ತು ಶ್ರೀಸುಜ್ಞಾನೇಂದ್ರ ತಪಸ್ವಿಗಳಿಗೆ ಒಪ್ಪಿಸು ಎಂದು ಆದೇಶವಿತ್ತರಂತೆ. ಯತಿಸಾರ್ವಭೌಮ ಶ್ರೀಗುರುರಾಯರ ಪ್ರತೀಕವನ್ನು ಬರಮಾಡಿಕೊಂಡು ವೈಭವದಿಂದ ನಂಜನಗೂಡಿನ ಶ್ರೀಮಠದಲ್ಲಿ ಪ್ರತಿಷ್ಠಾಪಿಸಿರುವುದು ಶ್ರೀಮಠದ ವಿಶೇಷವಾಗಿದೆ.

ಚಿತ್ರದುರ್ಗ ಶ್ರೀಮಠ: ಕೋಟೆನಾಡು ಚಿತ್ರದುರ್ಗ ಐತಿಹಾಸಿಕ, ಪೌರಾಣಿಕ ಹಿನ್ನಲೆಯಲ್ಲಿ ಪ್ರಸಿದ್ಧವಾದ ಸ್ಥಳ. ಚಾಲುಕ್ಯರು, ಹೊಯ್ಸಳರು, ಯಾದವರು ಇಲ್ಲಿ ರಾಜ್ಯಭಾರ ಮಾಡಿರುವುದಾಗಿ ತಿಳಿದುಬರುತ್ತದೆ. ಅಲ್ಲದೇ ವಿಜಯನಗರ ಸಂಸ್ಥಾನ, ನಂತರ ಹೈದರಾಲಿ, ಟಿಪ್ಪು ಸುಲ್ತಾನ್ ಬಳಿಕ ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟು ಬ್ರಿಟಿಷರ ಕೈವಶವಾಗಿ

> ಶ್ರೀಸುಜಯೀಂದ್ರತೀರ್ಥರ ಆದೇಶದಂತೆ ಹಿರಿಯ ವಿದ್ವಾಂಸರಾದ ಶ್ರೀಗಿರಿಯಾಚಾರ್ಯರು ತಮ್ಮ ಸುಪುತ್ರರಾದ ಶ್ರೀಪವಮಾನಾ ಚಾರ್ಯರಿಗೆ ಬಾಲ್ಯದಲ್ಲಿಯೇ ಹನ್ನೆರಡು ವರ್ಷಗಳಕಾಲ ಸ್ತೋತ್ರ, ಕಾವ್ಯಾದಿ ಪಾಠಗಳನ್ನು ಸಂಸ್ಕೃತ, ದ್ವೈತ ವೇದಾಂತವನ್ನು ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿಸಿದರು. ನಂತರ ಶ್ರೀಮಠದ ದಿವಾನರಾಗಿ ಸೇವೆ ಸಲ್ಲಿಸಿದ ಇವರ ವಿದ್ವತ್ ಪ್ರತಿಭೆಯನ್ನು ಗಮನಿಸಿದ ಮಠಾಧೀಶರಾದ ಶ್ರೀಸುಯತೀಂದ್ರ ತೀರ್ಥರು ವೈಶಾಖ ಶುಕ್ಲ ಪೂರ್ಣಿಮೆ (25–05–2013) ಶುಭದಿವಸ ಸನ್ಯಾಸಾಶ್ರಮವನ್ನು ನೀಡಿ ಶ್ರೀಸುಬುಧೇಂದ್ರ ತೀರ್ಥರೆಂದು ಹೆಸರಿಸಿದರು.



ನಂ. ಶ್ರೀಕಂಠ ಕುಮಾರ್
ಮೊ: 9481067333

ಮತ್ತೆ ಸ್ವತಂತ್ರವಾಗಿ ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತು. ಪೌರಾಣಿಕವಾಗಿ ಹಿಡಂಬಾ ಸುರನ ವನವಾಗಿದ್ದು ಪಾಂಡವರು ಲಾಕ್ಷಾಗೃಹ ದಹನಾ ನಂತರ ಇಲ್ಲಿಗೆ ಬಂದರೆಂದೂ, ನಂತರ ಭೀಮಸೇನರು ಹಿಡಂಬಾಸುರನನ್ನು ಸಂಹಾರ ಮಾಡಿದರೆಂದೂ ಪುರಾಣ ಹೇಳುತ್ತದೆ. ಇಲ್ಲಿ ಶ್ರೀವೇದವ್ಯಾಸ ದೇವರು ಪಾಂಡವರಿಗೆ ದರ್ಶನವಿತ್ತರು ಎಂಬ ಐಹಿತ್ಯವಿದೆ.

ಇಲ್ಲಿನ ಶ್ರೀಗೋಪಾಲಸ್ವಾಮಿಬೆಟ್ಟದ ಈಶಾನ್ಯ ದಿಕ್ಕಿಗೆ ಬಸವನಬುರುಜು ಎಂಬ ಬತೇರಿಯಿದ್ದು ಇದಕ್ಕೆ ಹೊಂದಿಕೊಂಡಂತೆ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಶ್ರೀಮಠವಿದೆ. ಇಲ್ಲಿ ಪಾಂಡವರು ಪೂಜೆ ಮಾಡಿದ್ದ ಶ್ರೀರಾಮಚಂದ್ರದೇವರ ಮತ್ತು ಶ್ರೀಹನುಮಂತದೇವರ ವಿಗ್ರಹಗಳು ಇದ್ದು ಇಂದಿಗೂ ಶ್ರೀರಾಯರ ಬೃಂದಾ ವನ ಸನ್ನಿಧಿಯಲ್ಲಿ ಪೂಜಾರಾಧನೆಗಳು ನೆರವೇರುತ್ತವೆ. ಶ್ರೀರಾಘವೇಂದ್ರತೀರ್ಥರು ತಮ್ಮ ಜೀವಿತಾವಧಿಯಲ್ಲಿ ಇಲ್ಲಿಗೆ ಎರಡು ಬಾರಿ ಭೇಟಿ ನೀಡಿದ್ದು ಭಕ್ತ ವೆಂಕಣ್ಣನಿಗೆ ಮೋಕ್ಷ ನೀಡಿದರು ಎಂಬುದು ಇಲ್ಲಿನ ವಿಶೇಷ ಪುಣ್ಯವಾಗಿದೆ. ಅಲ್ಲದೇ ಶ್ರೀಮಠದಲ್ಲಿ ಶ್ರೀಗುರುರಾಯರೇ ಮಂತ್ರಾಲಯದಲ್ಲಿ ನಿರ್ಮಾಣ ಮಾಡಿದಂತಹ ಬೃಂದಾವನದ ಮಾದರಿಯ ಚಲಬೃಂದಾವನವೂ ಸಹ ಪೂಜಿಸಲ್ಪಡುತ್ತಿದೆ. ಇಲ್ಲಿನ ಶ್ರೀಹನುಮಂತದೇವರ ಬಾಲದಲ್ಲಿ ಐದು ಘಂಟೆ ಇರುವುದು ಮತ್ತೊಂದು ವಿಶೇಷ. ಇಲ್ಲಿನ ಚಲಬೃಂದಾವನವನ್ನು ಶ್ರೀರಾಯರ ನಂತರ ದಲ್ಲಿನ ಮೂರನೇ ಪೀಠಾಧಿಪತಿಗಳಾದ ಶ್ರೀಸುಮ ತೀಂದ್ರತೀರ್ಥರು (1692–1725) ಚಿತ್ರದುರ್ಗಕ್ಕೆ ಆಗಮಿಸಿದ ವೇಳೆ ಅವರಿಗೆ ಸ್ವಪ್ನಸೂಚಕವಾಗಿ ಚಲಬೃಂದಾವನವನ್ನು ಇಲ್ಲಿಯೇ ಕೊಟ್ಟು ಶ್ರೀರಾಯರ ಪೂಜಾರಾಧನೆಯನ್ನು ಯಥಾವತ್ತಾಗಿ ನೆರವೇರಿಸಿಕೊಂಡು ಹೋಗುವಂತೆ ಅಪ್ಪಣೆ ಮಾಡಿದರೆನ್ನಲಾಗಿದೆ. ಈ ಚಲ ಬೃಂದಾವನವನ್ನು ಹಿಂದೆ ಶ್ರೀಗುರುರಾಯರಿಗಾಗಿ ದಿವಾನ್ ವೆಂಕಣ್ಣನು ಪ್ರಸ್ತುತ ಮಂತ್ರಾಲಯದಲ್ಲಿ ನಿರ್ಮಿಸಿದ ದಿವ್ಯಬೃಂದಾವನದ ಶಿಲೆಯಲ್ಲಿನ ಉಳಿದ ಶಿಲೆಯಿಂದ ಮಾಡಿಸಿದ್ದು ಎಂದು ಶ್ರೀಮಠದ ಇತಿಹಾಸದಲ್ಲಿ ತಿಳಿದುಬರುತ್ತದೆ.

ನಂತರ 1962ರಲ್ಲಿ ಶ್ರೀಮಠದ ಹತ್ತೊಂಬತ್ತನೇ ಪೀಠಾಧಿಪತಿಗಳಾಗಿದ್ದ ಶ್ರೀ ಸುಯಮೀಂದ್ರ ತೀರ್ಥರು ಸ್ಥಿರ ಬೃಂದಾವನ್ನು ಪ್ರತಿಷ್ಠಾಪಿಸಿದರು. ಕಾಲಾನಂತರ ಸ್ಥಿರ ಬೃಂದಾವನವು ಭಿನ್ನವಾದ ಕಾರಣ 1985ರಲ್ಲಿ ಶ್ರೀಮಠದ ಭಕ್ತರ ಮನವಿ ಮೇರೆಗೆ ನವಮಂತ್ರಾಲಯದ ಶಿಲ್ಪಿಗಳೆಂದೇ ಪ್ರಖ್ಯಾತಿ ಹೊಂದಿದ ಶ್ರೀಸುಜಯೀಂದ್ರತೀರ್ಥರು ತಮ್ಮ ಪ್ರಿಯ ಶಿಷ್ಯರಾದ ನಡೆದಾಡುವ ರಾಯರೆಂದೇ ಖ್ಯಾತಿಯನ್ನು ಪಡೆದಿದ್ದ ಶ್ರೀಸುಶಮೀಂದ್ರತೀರ್ಥರೊಡಗೂಡಿ ಹಿಂದೆ ಪ್ರತಿಷ್ಠಾಪಿಸಿದ್ದ ಸ್ಥಿರ ಬೃಂದಾವನವು ಇರುವ ಜಾಗದಲ್ಲಿಯೇ ಭೂಗತ ಮಾಡಿ ಹೊಸ ಬೃಂದಾವನವನ್ನು, ಅದರ ಮೇಲೆ ಶ್ರೀಸುಶಮೀಂದ್ರ ತೀರ್ಥರು ಕೊಟ್ಟಿದ್ದ ಶ್ರೀಗುರುರಾಯರು ಚಲಬೃಂದಾವನವನ್ನು ವೈಭವವಾಗಿ ಪ್ರತಿಷ್ಠಾಪನೆ ಮಾಡಿದರು. ಚಿತ್ರದುರ್ಗದ ಶ್ರೀಮಠದಲ್ಲಿ ಈ ಮೂರು ಬೃಂದಾವನಗಳು ಒಂದೇ ಸ್ಥಳದಲ್ಲಿ ಇರುವುದು ವಿಶೇಷವಾಗಿದೆ.

ಬಾಳಗಾರು ಶ್ರೀಮಠ: ತ್ರೇತಾಯುಗದಲ್ಲಿ ಭರತ ಖಂಡದಲ್ಲಿ ಶ್ರೀರಾಮದೇವರು ಸಂಚರಿಸಿದ ಪ್ರಾಚೀನವಾದ ಸ್ಥಳ ಬಾಣಾಕಾರ. ಕಾಲಾನಂತರದಲ್ಲಿ ಬಾಳಗಾರು ಎಂದು ಪರಿವರ್ತನೆಯಾಗಿ ಅನೇಕ ದೇವಸ್ಥಾನಗಳು, ಎರಡು ಅಗ್ರಹಾರದಿಂದ ಕೂಡಿದ ವಿಶೇಷ ಸ್ಥಳ. ಅಲ್ಲದೇ ಶ್ರೀರಾಯರ ನಂತರದ ಪರಂಪರೆಯಲ್ಲಿ ಬಂದಂತಹ ಯತಿಶ್ರೇಷ್ಠರ ಸ್ಮರಣೆಯಲ್ಲಿ ಶ್ರೀಸುಮತೀಂದ್ರಪುರ ಅಗ್ರಹಾರವೆಂದು ಹೆಸರಿಸಲಾಗಿದೆ. ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳವರು 1671ರಲ್ಲಿ ಸಶರೀರವಾಗಿ ಬೃಂದಾವನಸ್ಥರಾದ ಬಳಿಕ ಒಂಬತ್ತನೇ ವರ್ಷದಲ್ಲಿ ಅಂದರೆ 1680ರಲ್ಲಿ ಮಾರೀಚಿ ಮನೆತನದವರಿಂದ ತುಂಗಾನದಿ ಪಕ್ಕದಲ್ಲೇ ಶ್ರೀರಾಘವೇಂದ್ರಸ್ವಾಮಿಗಳವರ ಮೃತ್ತಿಕಾ ಬೃಂದಾವನವು ಪುಟ್ಟಗುಡಿಯಲ್ಲಿ ಪ್ರತಿಷ್ಠಾಪಿತವಾಯಿತು. ಆಗ ಮಂತ್ರಾಲಯದ ಶ್ರೀಮಠದಲ್ಲಿ ಶ್ರೀರಾಯರ ನೇರಶಿಷ್ಯರಾದ ಶ್ರೀಯೋಗೀಂದ್ರತೀರ್ಥರು ಪೀಠಾಧಿಪತಿಗಳಾಗಿದ್ದು ಮೃತ್ತಿಕೆ ನೀಡಿ ಆಶೀರ್ವದಿಸಿದರು. ಇದು ಮಂತ್ರಾಲಯದ ಶ್ರೀಮಠದ ಪರಂಪರೆಯ ಮೂರನೇ ಮೃತ್ತಿಕಾ ಬೃಂದಾವನವಾಗಿದೆ. ಶ್ರೀಮಠದ ಎದುರು ಗುಡಿಯಲ್ಲಿ ಶ್ರೀಹನುಮಂತನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಸುಮಾರು 1950ರಲ್ಲಿ ಸ್ಥಳೀಯ ಭಕ್ತಾದಿಗಳು ಶ್ರೀಗುರುರಾಜ ಸೇವಾಟ್ರಸ್ಟ್ ರಚಿಸಿ ಶ್ರೀಮಠದ ಕಟ್ಟಡವನ್ನು ವಿಸ್ತಾರಗೊಳಿಸಿ ಸುಸಜ್ಜಿತವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ. ಪ್ರಕೃತಿಯ ಮಡಿಲಿನಲ್ಲಿ ಶಾಂತಿಯಿಂದ ಶ್ರೀರಾಯರ ಸ್ಮರಣೆ ಮಾಡುವವರಿಗೆ ಬಾಳಗಾರು ಶ್ರೀಕ್ಷೇತ್ರವು ಅತ್ಯಂತ ಪ್ರಶಸ್ತವಾದ ಸ್ಥಳವಾಗಿದೆ.

ಉಡುಗಣಿ ಶ್ರೀಕ್ಷೇತ್ರ: ಮಂತ್ರಾಲಯದಲ್ಲಿ ಶ್ರೀಗುರುಸಾರ್ವಭೌಮರು ಸಶರೀರವಾಗಿ ಬೃಂದಾವನಸ್ಥರಾದ 93 ವರ್ಷಗಳ ನಂತರ 1764ರಲ್ಲಿ ಇಲ್ಲಿ ಮೃತ್ತಿಕಾ ಬೃಂದಾವನವು ಪ್ರತಿಷ್ಠಿತವಾಯಿತು. ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಶ್ರೀವರದೇಂದ್ರತೀರ್ಥರು (1761–1785) ಏಳನೇ ಪೀಠಾಧಿಪತಿಗಳಾಗಿ ವಿರಾಜಮಾನರಾಗಿದ್ದರು. ಉಡುಗಣಿಯಲ್ಲಿ ಶ್ರೀರಾಯರ ಮಠವು ಸ್ಥಾಪನೆಯಾಗಿದ್ದೇ ಪವಾಡವೆನ್ನಲಾಗಿದೆ. ಇಂದಿನ ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಶ್ರೀಗುರುರಾಯರ ಬೃಂದಾವನ ಸ್ಥಾಪನೆಗೆ ಭಕ್ತರು ಸಂಕಲ್ಪಿಸಿ ಮಂತ್ರಾಲಯ ಶ್ರೀಮಠದ ಆಶೀರ್ವಾದದ ಮೃತ್ತಿಕೆಯನ್ನು ತರಲು ಹೋಗುತ್ತಾರೆ. ಆದರೆ ಅಲ್ಲಿಂದ ಮೃತ್ತಿಕೆ ಪಡೆದು ನಡೆದು ಬರುವಾಗ ಉಂಟಾದ ಅಡಚಣೆಯಿಂದಾಗಿ ನಿಗದಿತ ಮಹೂರ್ತಕ್ಕೆ ಹೊನ್ನಾಳಿಗೆ ಬರಲು ಸಾಧ್ಯವಾಗುವುದಿಲ್ಲ. ಅಲ್ಲಿಗೆ ಆಗಮಿಸಿದ ವೃದ್ಧಜ್ಞಾನಿಗಳೊಬ್ಬರು ಮಹೂರ್ತವು ಮೀರಿಹೋಗುತ್ತದೆಯೆಂದು ಅವರು ಕೊಟ್ಟ ಬೆಳ್ಳಿಚರ ಬೃಂದಾವನವನ್ನಿಟ್ಟು ಹೊನ್ನಾಳಿಯಲ್ಲಿ ಶ್ರೀಮಠವನ್ನು ಉದ್ಘಾಟನೆ ಮಾಡಲಾಯಿತಂತೆ.

ನಂತರ ಹೊನ್ನಾಳಿಯಿಂದ ಮೃತ್ತಿಕೆ ತರಲು ಮಂತ್ರಾಲಯಕ್ಕೆ ಹೋಗಿದ್ದವರು ಹಿಂದಿರುಗುತ್ತಾರೆ. ಅವರು ತಂದ ಪವಿತ್ರ ಮೃತ್ತಿಕೆಯನ್ನು ಏನು ಮಾಡಬೇಕೆಂದು ಭಕ್ತರಲ್ಲಿ ಜಿಜ್ಞಾಸೆ ಉಂಟಾಗಿ ಹಿರಿಯರು ಕೊಟ್ಟ ಸಲಹೆಯಂತೆ ಉಡುಗಣಿಗೆ ತಂದು ವಿಧ್ಯುಕ್ತವಾಗಿ ಬೃಂದಾವನ ನಿರ್ಮಿಸಿ ಮೃತ್ತಿಕೆಯನ್ನಿಟ್ಟು ಪ್ರತಿಷ್ಠಾಪನೆ ಮಾಡಿದರು ಎಂಬುದಾಗಿದೆ. ಹೀಗಾಗಿ ಶಿಕಾರಿಪುರ ತಾಲೂಕಿನ ಶಿವಮೊಗ್ಗ ಜಿಲ್ಲೆಯ ಉಡುಗಣಿಯ ಶ್ರೀಮಠವು ಎರಡನೇ ಪವಿತ್ರ ಮೃತ್ತಿಕಾ ಬೃಂದಾವನದ ಶ್ರೀಕ್ಷೇತ್ರ ಎಂಬುದಾಗಿದೆ.

ಶ್ರೀಸುಜಯೀಂದ್ರತೀರ್ಥರ ಆದೇಶದಂತೆ ಹಿರಿಯ ವಿದ್ವಾಂಸರಾದ ಶ್ರೀಗಿರಿಯಾಚಾರ್ಯರು ತಮ್ಮ ಸುಪುತ್ರರಾದ ಶ್ರೀಪವಮಾನಾ ಚಾರ್ಯರಿಗೆ ಬಾಲ್ಯದಲ್ಲಿಯೇ ಹನ್ನೆರಡು ವರ್ಷಗಳಕಾಲ ಸ್ತೋತ್ರ, ಕಾವ್ಯಾದಿ ಪಾಠಗಳನ್ನು ಸಂಸ್ಕೃತ, ದ್ವೈತ ವೇದಾಂತವನ್ನು ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿಸಿದರು. ನಂತರ ಶ್ರೀಮಠದ ದಿವಾನರಾಗಿ ಸೇವೆ ಸಲ್ಲಿಸಿದ ಇವರ ವಿದ್ವತ್ ಪ್ರತಿಭೆಯನ್ನು ಗಮನಿಸಿದ ಮಠಾಧೀಶರಾದ ಶ್ರೀಸುಯತೀಂದ್ರತೀರ್ಥರು ವೈಶಾಖ ಶುಕ್ಲ ಪೂರ್ಣಿಮೆ (25–05–2013) ಶುಭದಿವಸ ಸನ್ಯಾಸಾಶ್ರಮವನ್ನು ನೀಡಿ ಶ್ರೀಸುಬುಧೇಂದ್ರತೀರ್ಥರೆಂದು ಹೆಸರಿಸಿದರು. ಪ್ರಸ್ತುತ ಮಂತ್ರಾಲಯದಲ್ಲಿನ ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳ ಶ್ರೀಮಠದ ಯತಿಪರಂಪರೆಯಲ್ಲಿನ 23ನೇ ಪೀಠಾಧಿಪತಿಗಳಾಗಿರುವ ಪರಮಪೂಜ್ಯ ಸುಬುಧೇಂದ್ರತೀರ್ಥರವರು ಶ್ರೀಮಠದಲ್ಲಿ ಸಂಸ್ಥಾನ ಪೂಜೆ, ಶ್ರೀಪ್ರಾಣ ದೇವರು, ಶ್ರೀಮೂಲ ರಾಮಚಂದ್ರದೇವರು, ಶ್ರೀಗುರು ರಾಯರ ಬೃಂದಾವನ ಹಾಗೂ ಪರಂಪರೆಯ ಹಿಂದಿನ ಯತಿಶ್ರೇಷ್ಠರ ಬೃಂದಾವನದ ನಿತ್ಯಪೂಜಾ, ಆರಾಧನಾ ಕೈಂಕರ್ಯವನ್ನು ನೆರವೇರಿಸಿ ಎಂದಿನಂತೆ ಶುದ್ಧ ಪೂರ್ಣಿಮೆಯಂದು ಮಂತ್ರಾಲಯ ಪುಣ್ಯಭೂಮಿಯ ತುಳಸೀವನದಲ್ಲಿ ಸಂಪ್ರದಾಯದಂತೆ ಮೃತ್ತಿಕೆಯನ್ನು ಸಂಗ್ರಹಿಸಿ ಪೂಜಾದಿಗಳನ್ನು ನೆರವೇರಿಸುತ್ತಾ ಮಂತ್ರಾಲಯ ಶ್ರೀಕ್ಷೇತ್ರವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸುತ್ತಾ ಆಸ್ತಿಕರಿಗೆ ಮಾರ್ಗದರ್ಶನ ಮಾಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ.

ಮಕ್ಕಳ ಚಿತ್ರಕಥೆ: 'ದೇಶಭಕ್ತ ಸನ್ಯಾಸಿ ನೀಡಿದ ಉತ್ತರ ಹೀಗಿತ್ತು...!'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಸ್ವಾಮಿ ವಿವೇಕಾನಂದರ ನುಡಿಗಳು ನಮ್ಮ ದೇಶದ ಜನತೆಯ ಆತ್ಮ ಗೌರವ, ಆತ್ಮ ವಿಶ್ವಾಸವನ್ನು ಇಮ್ಮಡಿಗೊಳಿಸಿವೆ. ಅವರು ಬದುಕಿದ್ದ 39 ವರ್ಷಗಳ ಆಯುಷ್ಯದಲ್ಲಿ ನಡೆದ ಘಟನೆಗಳು ಅದ್ಭುತವಾದವು.




ಒಮ್ಮೆ ಸ್ವಾಮಿ ವಿವೇಕಾನಂದರು ಯೂರೋಪ್ ಪ್ರವಾಸ ಕೈಗೊಂಡಿದ್ದರು. ಆ ಸಮಯದಲ್ಲಿ ಊರಿಂದ ಊರಿಗೆ ಪ್ರಯಾಣಿಸುತ್ತಿದಾಗ ಒಬ್ಬ ಇಂಗ್ಲಿಷ್‌ನವ ಪರಿಚಯವಾದ.




ಹಾಗೆಯೇ ಪರಸ್ಪರರು ಮಾತನಾಡುತ್ತಾ ಮುಂದೆ ಸಾಗುತ್ತಿದ್ದಾಗ ಆ ಇಂಗ್ಲಿಷ್‌ನವ "ನಿಮ್ಮ ದೇಶದಲ್ಲಿ ಹೆಣ್ಣುಮಕ್ಕಳೇಕೆ ಕೈ ಕುಲುಕು (ಹ್ಯಾಂಡ್ ಶೇಕ್)ವುದಿಲ್ಲಾ...?" ಎಂದು ಪ್ರಶ್ನಿಸಿದ.



ಅದಕ್ಕೆ ವಿವೇಕಾನಂದರು "ನಿಮ್ಮ ದೇಶದಲ್ಲಿ ಜನ ಸಾಮಾನ್ಯರು ನಿಮ್ಮ ರಾಣಿಯ ಕೈ ಕುಲುಕುವುದು ಸಾಧ್ಯವೇ..?"ಎಂದು ಆತನಿಗೇ ಮರು ಪ್ರಶ್ನಿಸಿದರು.



ಆಗ ಇಂಗ್ಲಿಷ್‌ನವ ಗತ್ತಿನಲ್ಲಿ "ಅಯ್ಯೋ.... ಅದು ಸಾಧ್ಯವೇ ಇಲ್ಲ...!" ಎಂದು ಹೆಮ್ಮೆಯಿಂದಲೇ ಹೇಳಿದ.



ತಕ್ಷಣ ಸ್ವಾಮೀಜಿಯವರು "ನಮ್ಮ ದೇಶದಲ್ಲಿ ಎಲ್ಲಾ ಸ್ತ್ರೀಯರೂ ರಾಣಿಯರು....ಆದ್ದರಿಂದ ಅವರ್‍ಯಾರೂ ಕೈ ಕುಲುಕುವುದಿಲ್ಲ...!" ಎಂದು ಮಿಂಚಿನಂತೆ ಉತ್ತರಿಸಿದರು. ಇಂಗ್ಲಿಷ್‌ನವ ತಲೆತಗ್ಗಿಸಿದ.

ವಾರಭವಿಷ್ಯ

10.08.2025 ರಿಂದ 16.08.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಕುಂಭ, ಮೀನ, ಮೇಷ, ಕುಜ–ಕನ್ಯಾ, ಬುಧ–ಕಟಕ, ಗುರು–ಮಿಥುನ, ಶುಕ್ರ–ಮಿಥುನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದಾರಂಭಕ್ಕೆ ಹೋಟೆಲ್, ಕೇಟರಿಂಗ್ ಉದ್ಯಮಿಗಳು ಹೆಚ್ಚಿನ ಧನಾದಾಯವನ್ನು ಹೊಂದುವರು. ರೇಷ್ಮೆ ಕೃಷಿಕರಿಗೆ ಉತ್ತಮ ಬೆಲೆ ದೊರೆಯುವುದು. ಪಂಚಮ ಕೇತು ದುಡುಕಿನ ತೀರ್ಮಾನಗಳಿಗೆ ಕಾರಣನಾಗುತ್ತಾನೆ. ಗೃಹೀಯ ಸಮಸ್ಯೆಗಳನ್ನು ಗೃಹದಲ್ಲೇ ಇತ್ಯರ್ಥ ಮಾಡಿಕೊಳ್ಳಿ. ವಾಹನ ಸಂಚಾರಗಳಲ್ಲಿ ಜಾಗೃತರಾಗಿರಿ. ಅಕಾಲ ಭೋಜನ, ಅಜೀರ್ಣದಿಂದ ಬಳಲುವ ಸಾಧ್ಯತೆ ಇರುತ್ತದೆ.
–ಶ್ರೀ ಸಂಕಷ್ಟಹರ ಗಣಪತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಗ್ರಹಗಳ ಶುಭ ಸಂಚಾರದಿಂದ ಮನಸ್ಸಿನ ತೊಳಲಾಟ, ಪೇಚಾಟಗಳು ದೂರವಾಗುತ್ತದೆ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಸ್ವಸಾಮರ್ಥ್ಯದಿಂದ ಆಸ್ತಿ ಗಳಿಸುವ ಪ್ರಯತ್ನ ಫಲಿಸಲಿದೆ. ಉದ್ಯೋಗಾರ್ಥಿಗಳಿಗೆ ಶುಭ ಸಮಾಚಾರ ಬರುವುದು. ಸ್ತ್ರೀಯರು ಅಲಂಕಾರ ವಸ್ತುಗಳಿಗೆ ಧಾರಾಳ ಹಣವನ್ನು ವ್ಯಯಿಸುವರು. ದೈವ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾ ಭಾವ.
– ಶ್ರೀ ದೇವಿ ಚರಣ ಸೇವೆ. ಶುಭ ಸಂಖ್ಯೆ–1

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದಾರಂಭಕ್ಕೆ ಮನಸ್ಸಿನ ಕಳವಳ ನಿವಾರಣೆ. ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗುವುದು. ಹೆಚ್ಚಿನ ಆದಾಯವಿದ್ದಾಗ್ಯೂ ಮಿತಿ ಮೀರಿದ ಖರ್ಚುಗಳಿಂದ ಕೈ ಮಾತ್ರ ಖಾಲಿ. ವಾರ ಮುಂದೆ ಸರಿದಂತೆ ಹಿತೈಷಿಗಳ ಸಹಕಾರದಿಂದ ವಿದ್ಯಾರ್ಜನೆಯ ವಿಷಯದಲ್ಲಿ ಸಮಯೋಚಿತ ಸಹಾಯ ದೊರಕುವುದು. ರಾಜಕೀಯ ರಂಗದವರಿಗೆ ಕಾನೂನು ಸಂಕಷ್ಟಗಳು ಎದುರಾಗಲಿದೆ. ಆರೋಗ್ಯ ಅಷ್ಟಕ್ಕಷ್ಟೆ.
– ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–3

ಕಟಕ (ಹೊ,ಹು,ಹೆ,ಡ,ಡಿ,ಡು)
ವಾರದ ಆದಿಗೆ ಕೆಲಸ ಕಾರ್ಯಗಳು ಸುಗಮವಾಗಿ ಸಾಗಿ ಮನಸ್ಸು ಹಗುರವೆನಿಸುವುದು. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಆತುರ ಹಾಗೂ ದುಡುಕಿನಿಂದ ಕೆಲಸ ಕೆಡುವುದು. ನಿಮಗೆ ಹಿರಿಯರೊಬ್ಬರ ಮಾರ್ಗದರ್ಶನದ ಅವಶ್ಯಕತೆ ಇದೆ. ಅನಿರೀಕ್ಷಿತ ಘಟನೆಗಳಿಂದ ವಿಚಲಿತರಾಗುವಿರಿ. ಸ್ತ್ರೀಯರಿಗೆ ರಕ್ತದೋಷ ಕಾಡುವುದು. ಸೂಕ್ತ ವೈದ್ಯರ ಸಲಹೆ ಪಡೆಯಿರಿ.
– ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವೈಯುಕ್ತಿಕ ಕೆಲಸ ಕಾರ್ಯಗಳನ್ನು, ಆಫೀಸ್ ಜವಾಬ್ದಾರಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಲು ನಿಮಗೆ ಗ್ರಹಗಳ ಬೆಂಬಲವಿದೆ. ನ್ಯಾಯಾಲಯ ವಿಚಾರಗಳು ನಿಮ್ಮ ಅನುಕೂಲಕ್ಕಿದೆ. ವಾರ ಮಧ್ಯೆ ಧನ–ಕನಕ ಪ್ರಾಪ್ತಿ, ವಾಹನ ಖರೀದಿಗೆ ಪ್ರೇರಣೆ. ಮಿತ್ರರ ಒಡನಾಟ 'ಲಘು ಪಾರ್ಟಿ'ಗಳು ನಡೆದೀತು. ಸಂಯಮದಿಂದ ವರ್ತಿಸಿ. ಉಷ್ಣಜನಿತ ಕಾಯಿಲೆಗೆ ಗುರಿಯಾಗುವಿರಿ.
– ಶ್ರೀ ಸತ್ಯನಾರಾಯಣ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಹಣಕಾಸಿನ ವಿಷಯದಲ್ಲಿ ಶಿಸ್ತು ಇರಲಿ. ನಿಮ್ಮ ಬ್ಯಾಂಕ್ ವಿವರಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ, ಅನ್ಯಥಾ ತೊಂದರೆಗೆ ಗುರಿಯಾಗುವಿರಿ. ಸಾಮಾಜಿಕ ಜೀವನದಲ್ಲಿ ಎದುರಾಗುವ ಅಡ್ಡಿ–ಆತಂಕಗಳು ಹರಿಕೃಪೆಯಿಂದ ನಿವಾರಣೆ ಆಗುವುದು. ಸಮಯ ಸಮಯಕ್ಕೆ ಭೋಜನವಿಲ್ಲದೆ ವಾಯು ತೊಂದರೆಯಿಂದ ಬಳಲುವಿರಿ. ನೆರೆಹೊರೆಯ ಜನರಲ್ಲಿ ಸೌಹಾರ್ದತೆಯಿಂದ ಇರಿ.
– ಶ್ರೀ ರಾಮಮಂತ್ರ ಜಪಿಸಿ. ಶುಭ ಸಂಖ್ಯೆ–6

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ನವಮ ಭಾಗ್ಯಸ್ಥಾನದಲ್ಲಿರುವ ಗುರುಬಲದ ಸುಫಲಗಳು ಕಾರ್ಯಗತವಾಗಬೇಕಾದರೆ ಸ್ವಂತ ಪರಿಶ್ರಮದ ಅಗತ್ಯವೂ ಬೇಕು. ಹಲವರಿಗೆ ಕನ್ಯಾಸೆರೆಯಿಂದ ಮುಕ್ತಿ ದೊರಕೀತು. ಈ ಶ್ರಾವಣ ಮಾಸದಲ್ಲಿ ತುಳಸೀ ವ್ರತವನ್ನು ಮಾಡಿದರೆ ನಿಶ್ಚಿತ ಫಲ ದೊರೆಯುವುದು. ನಿಮಗಾಗದವರು ಸ್ನೇಹ ಬಯಸಿ ಬಂದರೆ ತಿರಸ್ಕರಿಸಬೇಡಿ. ನೂತನ ವ್ಯಾಪಾರ ಪ್ರಾರಂಭಿಸಬಹುದು.
– ಶ್ರೀ ಸಪ್ತಮಾತೃಕ ದರ್ಶನ. ಶುಭ ಸಂಖ್ಯೆ–2

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ವಾರದಾರಂಭಕ್ಕೆ ಕೆಲವು ಚೇತೋಹಾರಿ ಪ್ರಸಂಗಗಳು ನಡೆಯುವುದು. ಬಂಧು ಬಳಗದವರ ಮಿಲನದಿಂದ ಆನಂದ. ಸಂಸಾರದಲ್ಲಿ ಬರುವ ಏಳು ಬೀಳುಗಳನ್ನು ನಿಮ್ಮ ಸ್ವಶಕ್ತಿಯಿಂದ ಪರಿಹರಿಸಿಕೊಳ್ಳುವಿರಿ. ವಾರ ಸಾಗಿದಂತೆ ಸ್ವಯಂಕೃತಾಪರಾಧಗಳಿಂದ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿನ್ನಡೆಗಳು ಉಂಟಾಗುವುದು. ದೂರ ಪ್ರಯಾಣ ಸಮಯದಲ್ಲಿ ಎಚ್ಚರಿಕೆ ತಪ್ಪದಿರಿ.
– ಶ್ರೀ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಈ ವಾರ ಕಾಗದ ಪತ್ರಾಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಲಾಭವಾಗುವುದು. ಶುಭ ಗುರುವಿನ ಪರಿಣಾಮ ಸರ್ವರಂಗದಲ್ಲಿಯೂ ಸಫಲತೆಯನ್ನು ಪಡೆಯುವಿರಿ. ಧನ ಧಾನ್ಯ ಸಂಗ್ರಹ, ಗೃಹ ಬಳಕೆ ವಸ್ತುಗಳ ಖರೀದಿ ಅಶುಭ ಶನಿಯಿಂದ ತೆರಿಗೆ ಅಧಿಕಾರಿಗಳಿಂದ ತೊಂದರೆ. ಆರೋಗ್ಯ ಸಮಸ್ಯೆ, ಅಪಘಾತ ಸಂಭವ. ಮನೆ ಮಂದಿಯಲ್ಲಿ ಈರ್ಷಾ ವಾತಾವರಣದಿಂದ ಗೃಹ ಶಾಂತಿಗೆ ಭಂಗ ಉಂಟಾಗುವುದು.
– ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ–5

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಈ ವಾರ ಗುತ್ತಿಗೆದಾರರಿಗೂ, ಸಣ್ಣ ಉದ್ಯೋಗಪತಿಗಳಿಗೂ ಉತ್ತಮ ಧನಲಾಭ. ಸನ್ನದುಗಾರರಿಗೆ ದೊಡ್ಡ ಫೈಲ್ ಸಿಗುವುದು. ಚಂದ್ರಗ್ರಹ ಸಂಚಾರ ಶುಭವಿದ್ದು ಸ್ಥಗಿತಗೊಂಡಿದ್ದ ಕೆಲಸಗಳು ಮರುಚಾಲನೆ ಹೊಂದುವುದು. ಗಣಿಗಾರಿಕೆ ವ್ಯವಹಾರಿಗಳಿಗೆ ಉತ್ತಮ ಆರ್ಡರ್ ದೊರೆಯುವುದು. ರಾಹು–ಕೇತುಗಳ ಅಶುಭವಿದ್ದು ಪ್ರಯಾಣಗಳಲ್ಲಿ ಆಪತ್ತು, ವಾಹನ ನಿಧಾನವಾಗಿ ಚಲಿಸಿ.
– ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ–3

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಸಾಡೇಸಾತಿ ಪ್ರಭಾವದ ನಡುವೆಯೂ ಗುರುಕೃಪೆ ಉಂಟು. ನಂಬಿಕಸ್ಥ ಜನರ ಸಹಾಯ ತಾನಾಗಿ ಬಂದು ಒದಗುವುದು. ಸಾಫ್ಟ್‌ವೇರ್ ಕುಶಲಿಗಳಿಗೆ ಬೇಡಿಕೆ ಹೆಚ್ಚುವುದು ಹಾಗೂ ವರಮಾನವೂ ಹೆಚ್ಚುವುದು. ಹಲವರಿಗೆ ಉನ್ನತಾಧಿಕಾರ ದೊರಕಲಿದೆ. ಮನೆಯಲ್ಲಿ ಶುಭ ಕಾರ್ಯ ಜರುಗುವುದು. ಸಮಾಜದಲ್ಲಿ ಪ್ರಭಾವಶಾಲಿಗಳೆನಿಸುವಿರಿ. ಮಾರಕ ಸ್ಥಾನ ಕೇತುವಿನಿಂದ ಸಣ್ಣ ಶಸ್ತ್ರ ಚಿಕಿತ್ಸೆಯಾದೀತು.
– ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದಾರಂಭಕ್ಕೆ ಕೊಟ್ಟ ಸಾಲ ವಾಪಸ್ಸು ಬರದು. ಸರ್ಕಾರಿ ನೌಕರರಿಗೆ ತನಿಖಾಧಿಕಾರಿಗಳಿಂದ ಬಿಸಿ ಮುಟ್ಟುವುದು. ಅಕ್ರಮ ಸಂಪಾದನೆಗೆ ಹೋಗದೆ ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ನಾಣ್ಣುಡಿ ನೆನಪಿಗೆ ತಂದುಕೊಳ್ಳಿ. ವಾರದ ಕಡೆಗೆ ಸಿದ್ಧ ಉಡುಪು ಮಾರಾಟಗಾರರಿಗೆ ಹೇರಳ ಧನಲಾಭ. ದಾನ–ಧರ್ಮ ಕಾರ್ಯಗಳು ನಡೆಯುವುದರಿಂದ ಮಾನಸಿಕ ನೆಮ್ಮದಿ ದೊರಕುವುದು.
– ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–1

ಇಂದು ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಹುಟ್ಟುಹಬ್ಬ ಆಚರಣೆ



ಕೆ.ಆರ್.ನಗರ: ಮಾಜಿ ಸಚಿವ ಸಾ.ರಾ. ಮಹೇಶ್ ಅವರ 59ನೇ ಜನ್ಮ ದಿನೋತ್ಸವವನ್ನು ಭಾನುವಾರ (ಆ.10) ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲೆಡೆ ಅಭಿಮಾನಿಗಳು, ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು ವಿಶಿಷ್ಟವಾಗಿ ಆಚರಣೆ ಮಾಡುತ್ತಿದ್ದಾರೆ.

ಭಾನುವಾರ ಬೆಳಗ್ಗೆ 8:30ಕ್ಕೆ ಪಟ್ಟಣದಲ್ಲಿ ಮಾಜಿ ಸಚಿವ ಅವರ ಸಾ.ರಾ.ಮಹೇಶ್ ಹುಟ್ಟು ಹಬ್ಬದ ಪ್ರಯುಕ್ತ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು, ಕಾರ್ಯಕರ್ತರು ಮತ್ತು ಸಾರಾ ಅಭಿಮಾನಿಗಳು ಪಟ್ಟಣದ ಶ್ರೀ ತೋಪಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮ ಏರ್ಪಡಿಸಿದ್ದು ಈ ಪೂಜಾ ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಸಾ.ರಾ ಮಹೇಶ್ ಭಾಗವಹಿಸಲಿದ್ದಾರೆ.

ಬಳಿಕ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಹಂಪಲು ವಿತರಣೆ ಮಾಡುವರು. ಬೆಳಗ್ಗೆ 10 ಗಂಟೆಗೆ ಪಟ್ಟಣ ಹೊರವಲಯ ಕಾವೇರಿ ನದಿಯ ದಡದಲ್ಲಿರುವ ಶ್ರೀ ಮೀನಾಕ್ಷಿ ಸಮೇತ ಅರ್ಕೇಶ್ವರ ಸ್ವಾಮಿ ದೇವಾಲಯದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್ ಹಾಗೂ ಕುಟುಂಬದವರ ಹೆಸರಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.

ನಂತರ ಚುಂಚನಕಟ್ಟೆ ಶ್ರೀರಾಮ ದೇವಸ್ಥಾನದಲ್ಲಿ ಬೆಳಗ್ಗೆ 10.30 ಗಂಟೆಗೆ ಚುಂಚನಕಟ್ಟೆ ಹೋಬಳಿಯ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಮಾಜಿ ಸಚಿವರಾದ ಸಾ.ರಾ.ಮಹೇಶ್ ಅವರ, 59ನೇ ವರ್ಷದ ಹುಟ್ಟು ಹಬ್ಬದ ಸಂಭ್ರಮದಲ್ಲಿ ಶ್ರೀರಾಮ ದೇವರಿಗೆ ಸಾ.ರಾ.ಮಹೇಶ್ ಹೆಸರಿನಲ್ಲಿ ಕುಂಕುಮಾರ್ಚನೆ, ವಿಶೇಷ ಪೂಜೆ ಸಲ್ಲಿಸಿದ ನಂತರ ಸಾರಾ.ಮಹೇಶ್ ಕೇಕ್ ಕತ್ತರಿಸಲಿದ್ದಾರೆ ಎಂದು ಜಿಲ್ಲಾ ಜೆಡಿಎಸ್ ಮುಖಂಡರು ಹಾಗೂ ಉದ್ಯಮಿ ಹಳೇಯೂರು ಹೆಚ್.ಕೆ. ಮಧುಚಂದ್ರ ತಿಳಿಸಿದ್ದಾರೆ. ಚುಂಚನಕಟ್ಟೆ ಮಾಜಿ ಸಚಿವರಾದ ಸಾ.ರಾ. ಮಹೇಶ್ ಅಣ್ಣನವರ ಅಭಿಮಾನಿಗಳು, ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದ್ದಾರೆ.

ಮಾಜಿ ಸಚಿವರಾದ ಸಾ.ರಾ.ಮಹೇಶ್ ಜನ್ಮದಿನೋತ್ಸವದ ಅಂಗವಾಗಿ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಯುವಕರು ಹಾಗೂ ಗ್ರಾಮಸ್ಥರು ಗ್ರಾಮ ಪಂಚಾಯತಿ ಮುಂಭಾಗದಲ್ಲಿ ಸಮೃದ್ಧಿ ಆಸ್ಪತ್ರೆ ಕೆ.ಆರ್.ನಗರ ಹಾಗೂ ಸಾಲಿಗ್ರಾಮದ ಫೋಕಸ್ ಡಯಾಗ್ನೋಸ್ಟಿಕ್ ಸೆಂಟರ್ ಸಹಯೋಗದೊಂದಿಗೆ ರಕ್ತದಾನ ಶಿಬಿರ ಮತ್ತು ಮಧುಮೇಹ, ಬಿಪಿ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ.


ಸೀತಾರಾಂ ಗಡಿಪಾರಿಗೆ ಆಗ್ರಹ

ಕೆ.ಆರ್.ನಗರ: ಒಕ್ಕಲಿಗರನ್ನು ಅವಾಚ್ಯ ಪದಗಳಿಂದ ನಿಂದಿಸಿರುವ ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ವಿರುದ್ಧ ಜಿಲ್ಲಾಧಿಕಾರಿಗಳು ಪ್ರಕರಣ ದಾಖಲಿಸಿ ಗಡಿಪಾರು ಮಾಡಬೇಕು ಎಂದು ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಹಾಗೂ ತಾಲೂಕು ಒಕ್ಕಲಿಗರ ಕ್ರಿಕೆಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಂ ಕಾವೇರಿ ನೀರಾವರಿ ನಿಗಮದ ಜಮೀನು ಕಬಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಒಕ್ಕಲಿಗ ಸಮುದಾಯವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಸಮುದಾಯದ ವಿರುದ್ಧ ಹಗುರವಾಗಿ ಮಾತನಾಡಿದ್ದಾರೆ. ಒಕ್ಕಲಿಗ ಸಮುದಾಯ ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುತ್ತದೆ ಹೀಗಾಗಿ ಒಕ್ಕಲಿಗ ಸಮುದಾಯವನ್ನು ನಿಂದಿಸಿರುವ ಕಾಂಗ್ರೆಸ್ ಮುಖಂಡ ಸೀತಾರಾಂ ವಿರುದ್ಧ ಪ್ರಕರಣ ದಾಖಲಿಸಬೇಕು. ಅಲ್ಲದೇ ಆತನನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ವಿಷಪ್ರಾಶನವಾಗಿ ಸಾವನ್ನಪ್ಪಿದ ನಾಯಿ ಮಾಂಸ ತಿಂದು ಐದು ರಣಹದ್ದುಗಳು ಸಾವು

ಹೆಚ್.ಡಿ.ಕೋಟೆಯ ಕಬಿನಿ ಹಿನ್ನೀರಿನಲ್ಲಿ ಘಟನೆ



ವಿಷಪ್ರಾಶನದಿಂದ ಸಾವನ್ನಪಿರುವ ನಾಯಿ ಮತ್ತು ರಣಹದ್ದು.

ಹೆಚ್.ಡಿ.ಕೋಟೆ: ವಿಷಪ್ರಾಶನದಿಂದ ಸಾವನ್ನಪ್ಪಿದೆ ಎನ್ನಲಾದ ನಾಯಿಯೊಂದರ ಮಾಂಸವನ್ನು ತಿಂದು ಐದು ರಣ ಹದ್ದುಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ರೆ ವನ್ಯಜೀವಿ ವಲಯದ ಕಬಿನಿ ಹಿನ್ನೀರಿನ ಅರಣ್ಯ ಪ್ರದೇಶದಲ್ಲಿ ಸಂಭವಿಸಿದೆ.

ಅರಣ್ಯ ಸಿಬ್ಬಂದಿಗಳು ಬೋಟ್ ಮೂಲಕ ಗಸ್ತು ನಡೆಸುತ್ತಿದ್ದಾಗ ಹಿನ್ನೀರಿನ ಪ್ರದೇಶದಲ್ಲಿ 5 ರಣಹದ್ದುಗಳು ಮತ್ತು ಒಂದು ಸಾಕು ನಾಯಿ ಸತ್ತು ಬಿದ್ದಿರುವುದು ಕಂಡು ಬಂದಿತು. ಇದನ್ನು ಕಂಡ ಅರಣ್ಯ ಸಿಬ್ಬಂದಿ ತಕ್ಷಣ ವಲಯ ಅರಣ್ಯಾಧಿಕಾರಿ ಅಮೃತೇಶ್ ಅವರಿಗೆ ವಿಚಾರ ಮುಟ್ಟಿಸಿದರು. ಸಿಬ್ಬಂದಿಗಳೊಡನೆ ಸ್ಥಳಕ್ಕೆ ಭೇಟಿ ನೀಡಿ. ಪರಿಶೀಲಿಸಿ ಹೆಡಿಯಾಲ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ಅವರಿಗೆ ಮಾಹಿತಿ ನೀಡಿದ್ದಾರೆ, ತಕ್ಷಣ ಅಧಿಕಾರಿಗಳೊಡನೆ ಡಾ.ವಾಸಿಮ್, ಸ್ಥಳಕ್ಕೆ ತೆರಳಿ ಮರಣೋತ್ತರ ಪರೀಕ್ಷೆ ನಡೆಸಿದಾಗ, ಮೇಲ್ನೋಟಕ್ಕೆ ಸಾಕು ನಾಯಿಗೆ ವಿಷ ಪ್ರಾಶಣ ಮಾಡಿದ್ದು ಸಾವನ್ನಪ್ಪಿದೆ. ಅದನ್ನು ಕಬಿನಿ ಹಿನ್ನೀರಿಗೆ ತಂದು ಬೀಸಾಗಲಾಗಿದ್ದು ಅದನ್ನು ತಿಂದ ರಣಹದ್ದುಗಳು ಸಾವನ್ನಪ್ಪಿಬಹುದು ಎಂಬ ಸಂಶಯ ವ್ಯಕ್ತಪಡಿಸಿದ್ದಾರೆ

ನಾಯಿ ಮತ್ತು ರಣಹದ್ದುಗಳ ದೇಹದ ಒಳ ಅಂಗಾಂಗಗಳ ಮಾದರಿಗಳನ್ನು ಸಂಗ್ರಹಿಸಿ ಹೆಚ್ಚಿನ ತನಿಖೆಗೆ ವಿಧಿ ವಿಜ್ಞಾನ ಪ್ರಾದೇಶಿಕ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಹಾಗೂ ಈ ಸಂಬಂಧ ವನ್ಯಜೀವಿ ಅರಣ್ಯ ಪ್ರಕರಣ (WLOR) ದಾಖಲಿಸಿ, ತನಿಖೆ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಎಸಿಎಫ್ ಪರಮೇಶ್, ಆರ್‌ಎಫ್‌ಒ ಅಮೃತೇಶ್, ಡಾ.ವಾಸಿಮ್, ಎನ್.ಬೇಗೂರು ಗ್ರಾಮ ಪಂಚಾಯಿತಿ ಸದಸ್ಯ ಮಂಜು, ಎನ್‌ಜಿಒ ಪ್ರತಿನಿಧಿ ರಾಜಕುಮಾರ್ ಹಾಗೂ ಅರಣ್ಯ ಸಿಬ್ಬಂದಿಗಳು ಹಾಜರಿದ್ದರು. ನಂತರ ರಣಹದ್ದುಗಳು ಹಾಗೂ ಸಾಕು ನಾಯಿಯ ಕಳೆ ಬರವನ್ನ ಸುಟ್ಟುಹಾಕಲಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ತನಿಖೆ ನಡೆಸುತ್ತಿದ್ದು ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಪೊಲೀಸ್ ಠಾಣೆಗೆ ದೂರು ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ಧರಿಸಿದ್ದಾರೆ.

ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತರಿಗೆ ಆದಿಚುಂಚನಗಿರಿ ಮಠದಿಂದ ಸನ್ಮಾನ



ತಿ.ನರಸೀಪುರ: ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಆಲಗೂಡು ಎಸ್. ಚಂದ್ರಶೇಖರ್ ಅವರನ್ನು ಮೈಸೂರು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಗಳು ಅಭಿನಂದಿಸಿದರು.

ಶ್ರೀ ಆದಿಚುಂಚನಗಿರಿ ಮಠ ಮೈಸೂರಿನಲ್ಲಿ ರಾಜ್ಯದ ಅತ್ಯುತ್ತಮ ಶ್ರೇಷ್ಠ ನಾಗರೀಕ ಸೇವಾ ಪ್ರಶಸ್ತಿ "ಕರ್ನಾಟಕ ಭೂಷಣ" ಪ್ರಶಸ್ತಿ ವಿಜೇತ ದಸಂಸ ರಾಜ್ಯ ವಿಭಾಗಿಯ ಸಂಚಾಲಕ ಡಾ.ಅಲಗೂಡು ಚಂದ್ರಶೇಖರ್ ಸನ್ಮಾನಿಸಿ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳು ಶುದ್ಧ ವಿರಬೇಕು ಮತ್ತು ಯಾವುದೇ ಫಲಾಪೇಕ್ಷೆ ನಿರೀಕ್ಷಿಸದೆ ಮಾನವೀಯತೆ ಮನುಷ್ಯತ್ವ ಬಂಧುತ್ವ ಮನೋಭಾವನೆ ಇಟ್ಟುಕೊಂಡು ಜಾತ್ಯತೀತವಾಗಿ ತಾರತಮ್ಯವಿಲ್ಲದೆ ಎಲ್ಲಾ ಶೋಷಿತ ಅನ್ಯಾಯವಾದಾಗ ಯಾವುದೇ ಪ್ರಭಾವ ಒತ್ತಡಕ್ಕೆ ಮಣಿಯದೆ ಪ್ರತಿಭಟಿಸಿ ನೊಂದವರಿಗೆ ನ್ಯಾಯ ದೊರಕಿಸಿ ಕೊಟ್ಟಾಗ ಜೀವನ ಸಾರ್ಥಕತೆಯಾಗುತ್ತದೆ ಎಂದರು. ಸಮಾಜವೂ ಕೂಡ ವ್ಯಕ್ತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತದೆ ಆದ್ದರಿಂದ ನ್ಯಾಯ, ನೀತಿ, ಧರ್ಮ, ವಾಕ್ಯವನ್ನು ಪಾಲನೆ ಮಾಡುವ ಮೂಲಕ ನಿಮ್ಮ ಸೇವೆಯನ್ನು ನಿರಂತರವಾಗಿಸಿಕೊಂಡು ಹೋಗುವಂತೆ ಆಶೀರ್ವಚನ ನೀಡಿ ಹಾರೈಸಿದರು. ಕೆಂಪಯ್ಯನ ಹುಂಡಿ ಚನ್ನೇಗೌಡ, ಬಸವರಾಜು, ಶಿವಪ್ರಸಾದ್, ಹಾಜರಿದ್ದಾರೆ.

ಪಿಹೆಚ್‌ಡಿ ಪದವಿ



ಬನ್ನೂರು: ಪಟ್ಟಣದ ಮಾಜಿ ಪುರಸಭಾ ಸದಸ್ಯ, ಹಿರಿಯ ಕಾಂಗ್ರೆಸ್ ಮುಖಂಡ, ಮಹಾರಾಣಿ ಕಾಲೇಜಿನ ಉಪನ್ಯಾಸಕ ಡಾ. ಬಿ.ಕೆ.ಜ್ಞಾನಪ್ರಕಾಶ್ ಅವರ ಪುತ್ರಿ ಜಿ.ಪಿ. ಇಂಚರ ಅವರಿಗೆ ಮೈಸೂರು ವಿವಿಯಿಂದ ಪಿಹೆಚ್‌ಡಿ ಪದವಿ ಲಭಿಸಿದೆ.

ಡಾ.ಜೆ.ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಲ್ಲಿಸಿದ ಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ದೊರಕಿದೆ.

ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು: ತಾಲೂಕಿನ ತಾಂಡವಪುರ, ಗೊದ್ದನಪುರ, ಎಸ್‌ಐಪಿಎಂ, ಏಚಗಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವ ಕಾರಣ ತಾಂಡವಪುರ, ಚಿಕ್ಕಯ್ಯನ ಛತ್ರ, ಮರಳೂರು, ಗೊದ್ದನಪುರ, ಏಚಗಳ್ಳಿ, ಕೆಐಡಿಬಿ ಕುಡಿಯುವ ನೀರಿನ ಸ್ಥಾವರ, ಎಬಿಬಿ ಕುಡಿಯುವ ನೀರಿನ ಸ್ಥಾವರ, ಮರಳೂರು ಹಳ್ಳಿದಿಡ್ಡಿ ಗ್ರಾಮಗಳಲ್ಲಿ ಆ.10ರ ಭಾನುವಾರ ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಕಾರ್ಯ ಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುನರ್ವಸತಿಗೆ ಆಗ್ರಹಿಸಿ ಬುಡಕಟ್ಟು ಸಮುದಾಯದಿಂದ ಪ್ರತಿಭಟನೆ



ಕರ್ನಾಟಕ ಅರಣ್ಯ ಮೂಲ ಬುಡುಕಟ್ಟು ಸಮುದಾಯಗಳ ಒಕ್ಕೂಟ, ಹಾಡಿ ಅರಣ್ಯ ಹಕ್ಕು ಸಮಿತಿ ಜಂಟಿಯಾಗಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸರಗೂರು: ತಾಲೂಕಿನ ಲಕ್ಷ್ಮಣಾಪುರ, ಅಳಲಹಳ್ಳಿ ಗ್ರಾಮದ 152 ಬಡ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಬೇಕು ಎಂಬ ಬೇಡಿಕೆ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟ, ಹಾಡಿ ಅರಣ್ಯ ಹಕ್ಕು ಸಮಿತಿ ಜಂಟಿಯಾಗಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಹೆಡಿಯಾಲದಿಂದ ಹೊಸ ಬಿರ್ವಾಳ್ ಗ್ರಾಮದಲ್ಲಿರುವ ನುಗು ವನ್ಯಜೀವಿ ಅರಣ್ಯ ವಲಯ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಿ ಬಂದ ಪ್ರತಿಭಟನಾಕಾರರು ಕಚೇರಿ ಮುಂಭಾಗದಲ್ಲಿ ಜಮಾಯಿಸಿ 31ನೇ ವಿಶ್ವ ಆದಿವಾಸಿ ದಿನಾಚರಣೆ ಅಂಗವಾಗಿ ಆದಿವಾಸಿ ನಾಯಕ ಬಿರ್ಸಾ ಮುಂಡ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ನಂತರ ಅರಣ್ಯ ಇಲಾಖೆ, ಸರಕಾರ, ತಾಲೂಕು ಆಡಳಿತದ ವಿರುದ್ಧ ವಿವಿಧ ಘೋಷಣೆ ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಲಕ್ಷ್ಮಣಾಪುರ ಗ್ರಾಮದ ಸರ್ವೆ ನಂ.30, 32 ಹಾಗೂ ಅಳಲಹಳ್ಳಿ ಗ್ರಾಮದ ಸರ್ವೆ ನಂ.10ರ ಜಮೀನಿನನ್ನು ಅರಣ್ಯ ಇಲಾಖೆಯವರು ಒತ್ತುವರಿ ಮಾಡಿಕೊಂಡಿದ್ದು, ಕೂಡಲೇ ಬಿಡಿಸಿ ಯರವ, ಜೇನುಕುರುಬ, ಸೋಲಿಗ ಸಮುದಾಯಕ್ಕೆ ಸೇರಿದ 152 ಬಡ ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸಿ ಕೊಡಬೇಕು. ಎಲ್ಲ ಕುಟುಂಬಗಳು ತಲಾ 3 ಎಕರೆ ಜಮೀನು ಹೊಂದಿದ್ದು, ಕಲ್ಲಂಗಡಿ ಹಣ್ಣಿನ ಬೆಳೆ ಬೆಳೆದಿದ್ದರು. ಇದಕ್ಕೆ ರಾಸಾಯನಿಕ ಸಿಂಪಡಿಸುತ್ತಾರೆ ಎಂದು ಅರಣ್ಯ ಇಲಾಖೆಯವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ತಾಲೂಕು ಒಕ್ಕೂಟದ ಅಧ್ಯಕ್ಷ ಯಶವಂತಪುರ ನಾಗರಾಜು ಮಾತನಾಡಿದರು.

ಈ ಸಂದರ್ಭದಲ್ಲಿ ಎಸಿಎಫ್ ಡಿ.ಪರಮೇಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಮಾತನಾಡಿದ ಎಸಿಎಫ್ ಡಿ.ಪರಮೇಶ್, ಮನವಿಯನ್ನು ಮೇಲಾಧಿಕಾರಿಗಳ ಮೂಲಕ ಸರಕಾರಕ್ಕೆ ಕಳುಹಿಸಿ ಕೊಡಲಾಗುವುದು. ಈ ವಿಷಯ ಕುರಿತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಗಮನಕ್ಕೆ ತರಲಾಗಿದ್ದು, ಮುಂದಿನ ದಿನಗಳಲ್ಲಿ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಕಚೇರಿಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಸಭೆಯ ಕರೆಲಾಗಿದೆ. ಈ ವಿಚಾರವನ್ನು ಸಭೆಯಲ್ಲಿ ಪ್ರಸ್ತಾವನೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಆದಿವಾಸಿ ಮುಖಂಡ ಶೈಲೇಂದ್ರ ಕುಂದೇಗಾಲ ಶ್ರೀನಿವಾಸ್, ಒಕ್ಕೂಟದ ಸದಸ್ಯ ಇಂದ್ರಕುಮಾರ್, ಮಹದೇವ ಸ್ವಾಮಿ, ಬಸವರಾಜು, ಅಯ್ಯಪ್ಪ, ಸಿದ್ದರಾಜು, ದಾಸಪ್ಪ, ಮಾರಮ್ಮ, ಕೆಂಪಾಲಮ್ಮ, ಸರಗೂರು ಕೃಷ್ಣ, ಮುಳ್ಳೂರು ಪುಟ್ಟಸ್ವಾಮಿ, ಮಹಾದೇವಯ್ಯ, ವಾಲ್ಮೀಕಿ ಸಿದ್ದರಾಜು, ಮಹಾಲಿಂಗ, ಪರಿಶಿಷ್ಟ ಪಂಗಡದ ಇಲಾಖೆ ಅಧಿಕಾರಿ ಮಹೇಶ್, ಪಿಎಸ್ಐ ಆರ್.ಕಿರಣ್, ಕ್ರೈಂ ಬ್ರಾಂಚ್ ಇನ್‌ಸ್ಪೆಕ್ಟರ್ ಗೋಪಾಲ್, ಆರ್‌ಎಫ್‌ಒಗಳಾದ ವಿವೇಕ್, ಅಮೃತ, ಕಂದಾಯ ಇಲಾಖೆ ಅಧಿಕಾರಿಗಳಾದ ರವಿಚಂದ್ರನ್, ಕುಮಾರ್, ಸಹಾಯಕ ಡಿಆರ್‌ಎಫ್‌ಒ ಅಭಿಲಾಷ್, ದೀಪಕ್, ಎಎಸ್ಐ ಕೃಷ್ಣಮಾರ್, ಶಿವಕುಮಾರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮೂರನೇ ಪುಟದಿಂದ

ಮುಂದಿನ ಚುನಾವಣೆಯಲ್ಲೂ ನನಗೆ ಶಕ್ತಿ ತುಂಬಿ



ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ 1107.72 ಕೋಟಿ ರೂ. ವೆಚ್ಚದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣಾ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಬಿಜೆಪಿಗೆ ಅಧಿಕಾರ ದಾಹ: ಬಿಜೆಪಿಯವರಿಗೆ ಅಧಿಕಾರದ ದಾಹವಿದೆ. ಯಾವಾಗಲೂ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ನಡೆದುಕೊಳ್ಳುವ ಬಿಜೆಪಿಯವರು ಅಂಬೇಡ್ಕರ್ ಹೆಸರು ಮಾತ್ರ ಹೇಳುತ್ತಾರೆ. ಅಂಬೇಡ್ಕರ್ ಅವರು ಸಂವಿಧಾನ ಬರೆದಾಗ ವಿರೋಧ ವ್ಯಕ್ತಪಡಿಸಿದರು. ಸಂವಿಧಾನ, ಪ್ರಜಾಪ್ರಭುತ್ವ ಉಳಿಸಿಕೊಳ್ಳಬೇಕಿರುವುದು ಇಂದು ನಮ್ಮ ಜವಾಬ್ದಾರಿ. ಸಂವಿಧಾನ ಉಳಿಸಿದರೆ ನಾವು ಉಳಿಯುತ್ತೇವೆ ಎಂದರು.

ಮತಗಳ್ಳತನ ನಡೆದಿದೆ: 2018ರ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಜನತೆ ಬಹುಮತ ನೀಡಲಿಲ್ಲ. ಅದಕ್ಕೆ ಜೆಡಿಎಸ್ ನೊಂದಿಗೆ ಸಮ್ಮಿಶ್ರ ಸರ್ಕಾರ ಮಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಆದರೆ, ಬಿಜೆಪಿಯ ಅಪರೇಷನ್ ಕಮಲದ ಮೂಲಕ ಕುಮಾರಸ್ವಾಮಿ ಅಧಿಕಾರ ಕಳೆದುಕೊಂಡರು. ಅಂದು ಹೀನಾಯವಾಗಿ ಬಿಜೆಪಿಯನ್ನು ಬೈದು ಈಗ ಮತ್ತೆ ಹೊಗಳುವ ಕೆಲಸಕ್ಕೆ ಅವರು ಮುಂದಾಗಿದ್ದಾರೆ. ಇಂದು ಅಧಿಕಾರಕ್ಕೋಸ್ಕರ ಬಿಜೆಪಿ ಅವರೊಟ್ಟಿಗೆ ಹೋಗಿದ್ದಾರೆ ಎಂದು ಆರೋಪಿಸಿದರು. ಬಿಜೆಪಿಯವರು ಅಪರೇಷನ್ ಕಮಲ ಮಾಡಿ ಎರಡು ಬಾರಿ ಅಧಿಕಾರಕ್ಕೆ ಬಂದಿದ್ದಾರೆ. ಇವಿಎಂ ದುರುಪಯೋಗ ಮಾಡಿಕೊಂಡು, ಮತಗಳ್ಳತನ ಮಾಡಿ ಅಧಿಕಾರಕ್ಕೆ ಬಂದಿದ್ದಾರೆಯೇ ಹೊರತು ಜನರ ಆಶೀರ್ವಾದ ಪಡೆದು ಅಧಿಕಾರಕ್ಕೆ ಬಂದಿಲ್ಲ ಎಂದರು.

ವರುಣಾದಲ್ಲಿ ಭಾರೀ ಅಭಿವೃದ್ಧಿ: ಚಾಮರಾಜನಗರ ಸಂಸದ ಸುನೀಲ್ ಬೋಸ್ ಮಾತನಾಡಿ, ವರುಣಾ ವಿಧಾನಸಭಾ ಕ್ಷೇತ್ರದ ಜನತೆ ರಾಜ್ಯಕ್ಕೆ ಜನಪ್ರಿಯ ಮುಖ್ಯಮಂತ್ರಿಗಳನ್ನು ನೀಡಿದ್ದಾರೆ. ಸಿದ್ದರಾಮಯ್ಯ ಅವರು ಈ ಕ್ಷೇತ್ರದಲ್ಲಿ ಗೆದ್ದು 2 ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದೆ. ನಾನು ಸಹ ವರುಣಾ ಕ್ಷೇತ್ರದ ಮತದಾರ. ಇಲ್ಲಿನ ಅಭಿವೃದ್ಧಿ ಬಗ್ಗೆ ಕಣ್ಣಾರೆ ಕಂಡಿದ್ದೇನೆ. ಹದಿನಾರು ಗ್ರಾಮದ ಹೆಸರು ಈ ಹಿಂದೆ ಯದುನಾಡು ಎಂದು ಇತ್ತು. ಈ ಹಿನ್ನೆಲೆಯಲ್ಲಿ ಮತ್ತೆ ಯದುನಾಡು ಎಂದು ನಾಮಕರಣ ಮಾಡಿ ಎಂದು ಸಿಎಂಗೆ ಮನವಿ ಸಲ್ಲಿಸಿದರು.

ಅಡ್ಡದಾರಿಯಿಂದ ಬಿಜೆಪಿ ಅಧಿಕಾರಕ್ಕೆ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಇದು ನಮ್ಮ ಕ್ಷೇತ್ರ ನಮ್ಮ ಮನೆ. ನಮ್ಮ ಸರ್ಕಾರ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾಮಗಾರಿಗಳಿಗೂ ಹಣ ನೀಡಲಾಗುತ್ತದೆ. ದೇಶದಲ್ಲಿ ಚುನಾವಣಾ ಅವ್ಯವಹಾರ ನಡೆಯುತ್ತಿದೆ. ಅಡ್ಡ ದಾರಿಯಿಂದ ಬಿಜೆಪಿ ಅಧಿಕಾರಕ್ಕೆ ಬರುತ್ತಿವೆ. ಇದಕ್ಕೆ ಚುನಾವಣೆ ಆಯೋಗ ಶಾಮೀಲಾಗಿದೆ ಎಂದು ರಾಹುಲ್ ಗಾಂಧಿ ಸಾಕ್ಷಿ ಸಮೇತ ಆರೋಪಿಸಿದ್ದಾರೆ. ಪ್ರತಿ ಚುನಾವಣೆ ಫೇಕ್ ಮತದಾರರನ್ನು ಸೇರಿಸಿ ಬಿಜೆಪಿ ಪಕ್ಷ ಗೆದ್ದಿದೆ.

ಎಲೆಕ್ಟ್ರಾನಿಕ್ ಡೇಟಾ ಕೊಡಲು ಚುನಾವಣೆ ಆಯೋಗ ಹಿಂದೇಟು ಹಾಕುತ್ತಿದೆ. ಆದರಿಂದ ರಾಹುಲ್ ಗಾಂಧಿ ಕೊಟ್ಟ ಕರೆಗೆ ನಾವು ಜೊತೆಯಾಗಬೇಕು. ನೀವು ಕೂಡ ಹೋರಾಟ ನಡೆಸಿ ರಾಹುಲ್ ಗಾಂಧಿಯವರಿಗೆ ಕೈ ಜೊಡಿಸಿ ಎಂದು ಡಾ.ಯತೀಂದ್ರ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಇತಿಹಾಸ ತಜ್ಞ ಪ್ರೊ.ಪಿ.ವಿ.ನಂಜರಾಜ ಅರಸ್ ಅವರು ಬರೆದಿರುವ 'ಹದಿನಾರು ಇತಿಹಾಸ' ಕೃತಿಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಹದಿನಾರು ಗ್ರಾಮ ಪಂಚಾಯತಿ ಅಧ್ಯಕ್ಷೆ ಸಣ್ಣ ತಾಯಮ್ಮ ಮತ್ತಿತರರು ಉಪಸ್ಥಿತರಿದ್ದರು.

1107.72 ಕೋಟಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿ

ಕಾವೇರಿ ನೀರಾವರಿ ನಿಗಮದ 636.92 ಕೋಟಿ ರೂ. ವೆಚ್ಚದಲ್ಲಿ 117 ಕಾಮಗಾರಿ, ಲೋಕೋಪಯೋಗಿ ಇಲಾಖೆ 283.96 ಕೋಟಿ ರೂ. 33 ಕಾಮಗಾರಿ, ಸಣ್ಣ ನೀರಾವರಿ ಇಲಾಖೆ 72 ಕೋಟಿ 15 ಕಾಮಗಾರಿ, ಆಯುಷ್ ಇಲಾಖೆ 2.32 ಕೋಟಿ 1 ಕಾಮಗಾರಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ 21.50 ಕೋಟಿ ರೂ. ವೆಚ್ಚದಲ್ಲಿ 13 ಕಾಮಗಾರಿ, ಕೆಪಿಟಿಸಿಎಲ್ 25.54 ಕೋಟಿ ರೂ. 2 ಕಾಮಗಾರಿ, ಕೆಐಡಿಬಿ 18.95 ಕೋಟಿ 1 ಕಾಮಗಾರಿ, ಗ್ರಾಮೀಣ ಕುಡಿಯುವ ನೀರು, ನೈರ್ಮಲ್ಯ ವಿಭಾಗ 10.44 ಕೋಟಿ 64 ಕಾಮಗಾರಿ, ನಗರಾಭಿವೃದ್ಧಿ ಕೋಶ(ಪೌರಾಡಳಿತ) 10 ಕೋಟಿ 18 ಕಾಮಗಾರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ 7.45 ಕೋಟಿ ರೂ. 7 ಕಾಮಗಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 4.56 ಕೋಟಿ 1 ಕಾಮಗಾರಿ, ಸಮಾಜ ಕಲ್ಯಾಣ ಇಲಾಖೆ 4.45 ಕೋಟಿ 6 ಕಾಮಗಾರಿ, ನಿರ್ಮಿತಿ ಕೇಂದ್ರ (ಸಿಎಸ್‌ಆರ್ ಅನುದಾನ) 4.35 ಕೋಟಿ 28 ಕಾಮಗಾರಿ, ಶಿಕ್ಷಣ ಇಲಾಖೆ ಸಿಎಸ್ ಆರ್ 3.98 ಕೋಟಿ 6 ಕಾಮಗಾರಿ, ಗಣಿ–ಭೂ ವಿಜ್ಞಾನ 0.80 ಕೋಟಿ 4 ಕಾಮಗಾರಿ, ಪಶುಸಂಗೋಪನೆ 0.50 ಕೋಟಿ 1 ಕಾಮಗಾರಿ.


ನಾಳೆ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಫ್ರೀಡಂ ಪಾರ್ಕ್‌ನಲ್ಲಿ ಧರಣಿ

ಮೈಸೂರು,ಆ.9(ಎಂಟಿವೈ)–ಒಳ ಮೀಸಲಾತಿಗಾಗಿ ನ್ಯಾ.ನಾಗಮೋಹನ್ ದಾಸ್ ಅವರು ನೀಡಿರುವ ವರದಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ಆ.11ರಿಂದ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತದೆ ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿ ಒಕ್ಕೂಟದ ಸಂಚಾಲಕ ಅಂಬಣ್ಣ ಅರೋಳಿಕ್ಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಒತ್ತಡಕ್ಕೆ ಮಣಿಯದೆ ನ್ಯಾ.ನಾಗಮೋಹನ್‌ದಾಸ್ ಅವರು ಸಲ್ಲಿಸಿರುವ ವೈಜ್ಞಾನಿಕ ವರದಿಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು. ವರದಿ ತಯಾರಿಸಲು ನ್ಯಾ.ನಾಗಮೋಹನ್ ದಾಸ್ ವೇತನವನ್ನೂ ಪಡೆಯದೆ, ಸಂವಿಧಾನ ಬದ್ಧವಾಗಿ ಸಮೀಕ್ಷೆ ನಡೆಸಿದ್ದಾರೆ. ಪ್ರತಿ ವರದಿ ಬಂದಾಗಲೂ ಸಣ್ಣ ಪುಟ್ಟ ವಿರೋಧ ಇರುತ್ತದೆ. ಮುಖ್ಯಮಂತ್ರಿಗಳು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ಗೌರವ ನೀಡಿ ವರದಿ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ಕೆಲವು ಸಮುದಾಯಗಳು ವರದಿಯ ಬಗ್ಗೆ ಅಪಸ್ವರ ಎತ್ತಿವೆ. ನಾವು ಈ ಹಿಂದೆಯೇ ಮೀಸಲಾತಿಯ ಸಮಾನ ಹಂಚಿಕೆಗೆ ಸಮ್ಮತಿ ಸೂಚಿಸಿದ್ದೆವು. ಅದನ್ನು ಅವರು ಒಪ್ಪಿರಲಿಲ್ಲ. ಈಗ ಎಲ್ಲರೂ ಸರ್ಕಾರದ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಬೇಕು. ಒಳಮೀಸಲಾತಿಗಾಗಿ ಸಮುದಾಯವು ಅನೇಕ ವರ್ಷದಿಂದ ಕಾದಿದೆ. ಇನ್ನೂ ವಿಳಂಬಧೋರಣೆ ಅನುಸರಿಸಿದರೆ ನಾವು ರಸ್ತೆಗಿಳಿದು ಹೋರಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಡಿ.ಟಿ.ವೆಂಕಟೇಶ್, ಸುಬ್ರಹ್ಮಣ್ಯ, ಚಂದ್ರು ತರಹುಣಿಸೆ ಇದ್ದರು.

ತಿಮ್ಮಮ್ಮ ನಿಧನ



ಮಳವಳ್ಳಿ, ಆ.9–ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯ (ವಿಎಸ್‌ಎಲ್) ನಿವೃತ್ತ ನೌಕರರ ತಿಮ್ಮಯ್ಯ ಪತ್ನಿ ತಿಮ್ಮಮ್ಮ(88) ಮಳವಳ್ಳಿ ತಾಲೂಕಿನ ಕಸಬಾ ಹೋಬಳಿ ಕೆಂಬೂತಗೆರೆ ಗ್ರಾಮದಲ್ಲಿರುವ ಮಗಳ ಮನೆಯಲ್ಲಿ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಭದ್ರಾವತಿ ತಾಲೂಕಿನ ಭೋವಿ ಕಾಲೋನಿ ನಿವಾಸಿಯಾಗಿರುವ ಇವರಿಗೆ ಪುತ್ರಿ ಭಾಗ್ಯಮ್ಮ ಸೇರಿದಂತೆ ಅಳಿಯ, ಮೊಮ್ಮಕ್ಕಳು, ಬಂಧು ಬಳಗದವರಿದ್ದಾರೆ. ಗ್ರಾಮದಲ್ಲೇ ಶನಿವಾರ ಮಧ್ಯಾಹ್ನ ಅಂತ್ಯ ಕ್ರಿಯೆ ನಡೆಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ರಾಹುಲ್ ಗಾಂಧಿಯ ಮತಗಳ್ಳತನ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ

ತಜ್ಞರ ಜೊತೆ ಚರ್ಚೆ ಬಳಿಕ ಕಾನೂನು ಹೋರಾಟ ಮಾಡುತ್ತೇವೆ...

- ಅಷ್ಟಕ್ಕೂ ರಾಹುಲ್ ಗಾಂಧಿ ಹೇಳಿಕೆಯಲ್ಲಿ ಸತ್ಯವಿದೆ
- ಮತಗಳ್ಳತನದ ಬಗ್ಗೆ ಇಷ್ಟು ದಿನ ರಿಸರ್ಚ್ ಮಾಡುತ್ತಿದ್ದೆವು
- ಮತಗಳ್ಳತನದಿಂದ 16 ಸೀಟ್ ಗೆಲ್ಲುವ ಅವಕಾಶ ತಪ್ಪಿತ್ತು



ಮೈಸೂರು, ಆ.9(ಬಿಎಲ್‌ಯು)– ರಾಹುಲ್ ಗಾಂಧಿ ಮಾಡಿರುವ ಮತಗಳ್ಳತನ ಆರೋಪ ಸಂಬಂಧ ತಜ್ಞರ ಜೊತೆ ಸಮಾಲೋಚನೆ ನಡೆಸಿ ಕಾನೂನು ಹೋರಾಟ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮತಗಳ್ಳತನದ ಬಗ್ಗೆ ರಾಹುಲ್ ಗಾಂಧಿ ಅವರು ನೀಡಿರುವ ಹೇಳಿಕೆ ಸತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ ಮುಂದಿನ ಹೋರಾಟ ರೂಪಿಸುತ್ತೇವೆ ಎಂದು ಹೇಳಿದರು.

ರಿಸರ್ಚ್ ಮಾಡುತ್ತಿದ್ದೆವು!: ಕಳೆದ ಒಂದೂವರೆ ವರ್ಷದಿಂದ ಮೌನವಾಗಿದ್ದು ಈಗ ಮತಗಳ್ಳತನದ ಬಗ್ಗೆ ಆರೋಪ ಮಾಡುತ್ತಿರುವುದೇಕೆ ಎಂಬ ಪ್ರಶ್ನೆಗೆ, ಮತಗಳ್ಳತನ ಆಗಿರುವ ಬಗ್ಗೆ ನಾವು ರಿಸರ್ಚ್ ಮಾಡುತ್ತಿದ್ದೆವು. ಈ ಸಂದರ್ಭದಲ್ಲಿ ಮತಗಳ್ಳತನ ಆಗಿರುವುದು ಖಚಿತವಾಯಿತು. ಈಗ ಸಾಕ್ಷಾಧಾರ ಸಮೇತ ಹೋರಾಟ ಆರಂಭಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಒಂದೇ ಒಂದು ಕೊಠಡಿಯಲ್ಲಿ 80 ಮತದಾರರಿರುವ ವಿಳಾಸವಿದೆ. ಒಂದು ಸಣ್ಣ ಕೊಠಡಿಯಲ್ಲಿ 80 ಜನರು ವಾಸ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ನಮ್ಮ ಸರ್ವೆ ಪ್ರಕಾರ ಲೋಕಸಭಾ ಚುನಾವಣೆಯಲ್ಲಿ 16 ಸೀಟ್ ಗೆಲ್ಲುವ ಅವಕಾಶವಿತ್ತು. ಆದರೆ ಬಿಜೆಪಿಯವರ ಮತಗಳ್ಳತನದಿಂದ ಅದು ಸಾಧ್ಯವಾಗಲಿಲ್ಲ ಎಂದು ಸಿದ್ದರಾಮಯ್ಯ ದೂರಿದರು.


ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಪೀಟರ್ ಇಲ್ಲದೇ ಹೋಗಿದ್ದರೆ ನನ್ನನ್ನ ಸೋಲಿಸುತ್ತಿದ್ದರು!

ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಚುನಾವಣಾ ವೀಕ್ಷಕ ಪೀಟರ್ ಇಲ್ಲದೇ ಇದ್ದಿದ್ದರೆ ನನ್ನನ್ನು ಸೋಲಿಸುತ್ತಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕದಲ್ಲೇ ನುಡಿದರು. ಸತ್ತವರು, ಕೆಟ್ಟವರು ಮತ ಹಾಕಿದ್ದರಿಂದ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆಯಲ್ಲಿ ನಾನು ಗೆಲುವು ಸಾಧಿಸಿದೆ ಎಂಬ ತಮ್ಮ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾನು ಆ ರೀತಿಯ ಯಾವುದೇ ಹೇಳಿಕೆ ನೀಡಿಯೇ ಇಲ್ಲ ಎಂದರು.

ಒಂದು ವೇಳೆ ಸತ್ತವರಿಂದ ಮತ ಹಾಕಿಸಿಕೊಂಡಿದ್ದರೆ ಅದಕ್ಕೆ ಜವಾಬ್ದಾರರು ಚುನಾವಣಾ ಆಯೋಗ. ಹಾಗೆ ಆಗಿದ್ದರೆ ಚುನಾವಣಾ ಆಯೋಗ ಅದನ್ನು ಪರಾಮರ್ಷಿಸಬೇಕಿತ್ತು. ಚುನಾವಣಾ ವೀಕ್ಷಕ ಪೀಟರ್‌ನಿಂದ ಗೆಲುವು ಸಾಧಿಸಿದ್ದೀರೆಂಬ ಬಿಜೆಪಿ ಆರೋಪಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಅಂದು ಪೀಟರ್ ಇಲ್ಲದೆ ಇದ್ದಿದ್ದರೆ ನನ್ನನ್ನು ಸೋಲಿಸಿ ಬಿಡುತ್ತಿದ್ದರು ಎಂದು ಉದ್ಗಾರ ತೆಗೆದರು.

ಬಾದಾಮಿ ವಿಧಾನಸಭಾ ಕ್ಷೇತ್ರದಲ್ಲಿ 3 ಸಾವಿರ ಮತಗಳನ್ನು ನಾವು ಖರೀದಿ ಮಾಡಿದ್ದರಿಂದ ಸಿದ್ದರಾಮಯ್ಯ ಗೆಲುವು ಸಾಧಿಸಿದ್ದರು ಎಂಬ ಸಿ.ಎಂ. ಇಬ್ರಾಹಿಂ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಆ ಬಗ್ಗೆ ನನಗೇನು ಗೊತ್ತಿಲ್ಲ ಎಂದು ನಯವಾಗಿ ಪ್ರತಿಕ್ರಿಯಿಸಿದರು. ಇಬ್ರಾಹಿಂ ಅವರು ಈಗ ನಮ್ಮ ಪಕ್ಷದಲ್ಲಿ ಇಲ್ಲ. ಆದರೆ ಆ ಸಂದರ್ಭದಲ್ಲಿ ಇಬ್ರಾಹಿಂ ನನ್ನ ಪರವಾಗಿ ಕೆಲಸ ಮಾಡಿದ್ದರು. ಆಗ ಅವರು ಮತ ಖರೀದಿ ಮಾಡಿದ್ದರು ಎಂಬುದು ನನಗೆ ಹೊಸ ವಿಚಾರ. ಒಂದು ಬಾರಿ ನಾಮಿನೇಷನ್ ಸಲ್ಲಿಸಲು ಬಾದಾಮಿಗೆ ಹೋಗಿದ್ದೆ. ಮತ್ತೊಂದು ಬಾರಿ ಚುನಾವಣಾ ಪ್ರಚಾರಕ್ಕೆ ಹೋಗಿದ್ದೆ. ಇದರಿಂದ ಆ ವಿಚಾರ ನನಗೆ ಗೊತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಒಂದು ವೇಳೆ ತಮಗೆ ತಿಳಿಯದೆ ಅಲ್ಲಿ ಮತ ಖರೀದಿ ಆಗಿದೆಯೇ ಎಂಬ ಪ್ರಶ್ನೆಗೆ, ಆ ವಿಚಾರ ನನಗೆ ಗೊತ್ತಿಲ್ಲ ಎಂದ ಮೇಲೆ ನಾನ್ಹೇಗೆ ಆ ಬಗ್ಗೆ ಪ್ರತಿಕ್ರಿಯೆ ನೀಡಲಿ ಎಂದು ಕೋಪದಿಂದಲೇ ನುಡಿದರು.

ಸಾಮೂಹಿಕ ಋಗ್ವೇದ ಉಪಾಕರ್ಮ



ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಆವರಣದಲ್ಲಿರುವ ಶ್ರೀ ಶಾರದಾನಿಕೇತನದಲ್ಲಿ ಶನಿವಾರ ಸಾಮೂಹಿಕ ಋಗ್ವೇದ ಉಪಾಕರ್ಮ ನಡೆಯಿತು. ಈ ವೇಳೆ ಸಮುದಾಯದ ಬಂಧುಗಳು ಪೂಜಾ ಕೈಂಕರ್ಯಗಳನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು.

ದೇಸಿ ಅಕ್ಕಿ ಖರೀದಿಗೆ ಮುಗಿ ಬಿದ್ದ ಮೈಸೂರಿಗರು

ಮೈಸೂರು,ಆ.9(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ 'ದೇಸಿ ಅಕ್ಕಿ ಮೇಳ'ದಲ್ಲಿ ಹಲವು ತಳಿಗಳ ಅಕ್ಕಿ ಮಾರಾಟಕ್ಕಿಡಲಾಗಿದ್ದು, ಅಕ್ಕಿ ಖರೀದಿಗಾಗಿ ಗ್ರಾಹಕರು ಮುಗಿ ಬಿದ್ದಿದ್ದಾರೆ.

ಸಹಜ ಸಮೃದ್ಧ ಸಂಸ್ಥೆ ಹಾಗೂ ಭತ್ತ ಉಳಿಸಿ ಆಂದೋಲನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ದೇಸಿ ಅಕ್ಕಿ ಮೇಳದಲ್ಲಿ ಕರ್ನಾಟಕ ಮಾತ್ರವಲ್ಲದೆ ಹೊರ ರಾಜ್ಯಗಳಿಂದಲೂ ಹಲವು ಮಂದಿ ದೇಸಿ ತಳಿಯ ಅಕ್ಕಿ ಮಾರಾಟಕ್ಕೆ ಆಗಮಿಸಿದ್ದಾರೆ.

ದೇಸಿ ಅಕ್ಕಿ ಮೂಲೆಗುಂಪು: ಅಕ್ಕಿ ಮೇಳಕ್ಕೆ ಕೊಡಗು ಜಿಲ್ಲೆಯ ಪೊನ್ನಂಪೇಟೆಯ ಹುದೂರಿನ ಬೀಜ ಸಂರಕ್ಷಕ ಬಿ.ಪಿ.ರವಿಶಂಕರ್ ಚಾಲನೆ ನೀಡಿ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಭತ್ತದ ಕೃಷಿ ದುಬಾರಿಯಾಗುತ್ತಿದ್ದು, ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ವಾಣಿಜ್ಯ ಬೆಳೆ ಬೆಳೆಯಲು ರೈತರು ಮುಂದಾಗುತ್ತಿದ್ದಾರೆ. ಇದರಿಂದ ದೇಸಿ ತಳಿ ಭತ್ತ ಮೂಲೆ ಗುಂಪಾಗಿದೆ. ದೇಸಿ ಭತ್ತವನ್ನು ಮತ್ತೆ ಬೆಳೆಯಲು ಅಗತ್ಯವಿರುವ ನೆರವನ್ನು ಸರ್ಕಾರ ನೀಡಬೇಕು ಎಂದು ಒತ್ತಾಯಿಸಿದರು.

ನೂರಾರು ವರ್ಷಗಳಿಂದ ರೈತರು ಸ್ಥಳೀಯ ಭತ್ತದ ತಳಿಗಳನ್ನು ಉಳಿಸಿ, ಬೆಳೆಸುತ್ತಾ ಬಂದಿದ್ದಾರೆ. ದೇಸಿ ಅಕ್ಕಿಗಳು ನಮ್ಮ ಆಹಾರ ಸಂಸ್ಕೃತಿ–ಸೊಗಡಿನೊಂದಿಗೆ ಬೆಳೆದುಕೊಂಡು ಬಂದಿವೆ. ಈ ತಳಿಗಳನ್ನು ಮುಂದಿನ ಪೀಳಿಗೆಗೂ ನೀಡುವ ಹೊಣೆ ಎಲ್ಲರ ಮೇಲಿದೆ. ಗ್ರಾಹಕರು ಇವುಗಳ ಬಳಕೆ ಮಾಡಿ ಆರೋಗ್ಯ ವೃದ್ಧಿಮಾಡಿಕೊಳ್ಳಬೇಕು ಎಂದರು.

ಕೇಂದ್ರೀಯ ಆಹಾರ ಸಂಶೋಧನಾಲಯದ ನಿವೃತ್ತ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿ, ಸಾಂಪ್ರದಾಯಿಕ ತಳಿಗಳು ಪೋಷಕಾಂಶಗಳಿಂದ ಸಮೃದ್ಧವಾಗಿವೆ. ಕಪ್ಪು ಮತ್ತು ಕೆಂಪು ಅಕ್ಕಿಗಳಲ್ಲಿ ಔಷಧೀಯ ಗುಣವಿದೆ. ಇವುಗಳನ್ನು ಬಳಸಿದರೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ದೇಸಿ ಭತ್ತ ಬೆಳೆಗಾರರ ಬಳಗದ ರೇಣುಕಾ ಮಹಿಳಾ ಸಂಘದ ಮುಖ್ಯಸ್ಥೆ ಪ್ರೇಮ ಮಾತನಾಡಿ, ಆಶ್ರಿತ ಪ್ರದೇಶದಲ್ಲಿ ಬೆಳೆಯುವ ದೊಡ್ಯಗ, ನವಿಲು ಸಾಲಿ, ಡಂಬರ ಸಾಳಿ, ಉದುರು ಸಾಲಿ ಮೊದಲಾದ ಕೆಂಪಕ್ಕಿ ತಳಿಗಳು ನಮ್ಮಲ್ಲಿವೆ. ಸ್ಥಳೀಯವಾಗಿ ಬೇಡಿಕೆ ಇಲ್ಲದ ಕಾರಣ ಈ ರುಚಿಕರ ತಳಿಗಳು ಗೋವಾ ಮತ್ತು ಕೇರಳದ ಪಾಲಾಗುತ್ತಿವೆ. ಆರೋಗ್ಯದ ದೃಷ್ಟಿಯಿಂದ ಈ ತಳಿಗಳು ಅಮೂಲ್ಯವಾದವು. ಇವುಗಳನ್ನು ಬಳಸಲು ಗ್ರಾಹಕರು ಮುಂದಾಗಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹಜ ಸಮೃದ್ಧ– ಸಾವಯವ ಕೃಷಿಕರ ಬಳಗದ ನಿರ್ದೇಶಕ ಜಿ.ಕೃಷ್ಣ ಪ್ರಸಾದ್ ಮಾತನಾಡಿ, ಕರ್ನಾಟಕದ ರೈತ ವಿಜ್ಞಾನಿಗಳು ಸಿದ್ದ ಸಣ್ಣ, ಸಿಂಧೂರ ಮಧುಸಾಲೆ, ಅಂದನೂರು ಸಣ್ಣ, ಎನ್‌ಎಂಎಸ್–2 ಸೇರಿದಂತೆ ವಿವಿಧ ಉತ್ತಮ ತಳಿಯ ಭತ್ತಗಳನ್ನು ಅಭಿವೃದ್ಧಿಪಡಿಸಿದ್ದಾರೆ. ರೈತರ ಮೆಚ್ಚುಗೆಗೆ ಪಾತ್ರವಾಗಿರುವ ಈ ತಳಿಗಳನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಪರಿಸರ ಮತ್ತು ಗ್ರಾಹಕರ ಆರೋಗ್ಯಕ್ಕೆ ಅಪಾಯ ತಂದೊಡ್ಡುವ ಕುಲಾಂತರಿ ಭತ್ತದ ತಳಿಗಳನ್ನು ಕೃಷಿಗೆ ತರುವ ಪ್ರಯತ್ನ ನಡೆಯುತ್ತಿದೆ. ಕುಲಾಂತರಿ ಭತ್ತದ ತಳಿಗಳು ರೈತರ ಹೊಲಕ್ಕೆ ಬರದಂತೆ ರೈತರು ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ತಮಿಳುನಾಡಿನ ಭತ್ತ ಉಳಿಸಿ ಆಂದೋಲನದ ಸುರೇಶ್ ಕನ್ನ ಮಾತನಾಡಿದರು. ಕಾರ್ಯಕ್ರಮದಲ್ಲಿ ಯುಎನ್‌ಡಿಪಿಯ 'ಈಕ್ವೇಟರ್ ಇನಿಷಿಯೇಟಿವ್' ಪ್ರಶಸ್ತಿಯನ್ನು ಪಡೆದಿರುವ ಧಾರವಾಡ ಜಿಲ್ಲೆ ಕುಂದಗೋಳ ತಾಲೂಕು ತೀರ್ಥ ಗ್ರಾಮದ ಬೀಬಿ ಫಾತಿಮಾ ಮಹಿಳಾ ಸಂಘದ ಅಧ್ಯಕ್ಷೆ ಬೀಬಿ ಜಾನ್ ಉಪಸ್ಥಿತರಿದ್ದರು. ಭತ್ತ ಉಳಿಸಿ ಆಂದೋಲನದ ಸಂಚಾಲಕ ಶಾಂತಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ದೇಸಿ ಅಕ್ಕಿ ಮೇಳದಲ್ಲಿ ಮುಗಿ ಬಿದ್ದಿರುವ ಗ್ರಾಹಕರು

ಮೇಳದಲ್ಲಿ



ಎರಡು ದಿನಗಳ ದೇಸಿ ಅಕ್ಕಿ ಮೇಳದಲ್ಲಿ ವಿವಿಧ ರಾಜ್ಯಗಳ ನೂರಕ್ಕೂ ಹೆಚ್ಚಿನ ದೇಸಿ ಅಕ್ಕಿಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಬಂದಿದೆ. ಕೆಂಪಕ್ಕಿ, ಸುವಾಸನೆ ಅಕ್ಕಿ, ಕಪ್ಪು ಅಕ್ಕಿ, ಔಷಧಿ ಅಕ್ಕಿ ದಪ್ಪಕ್ಕಿ, ರಾಜಮುಡಿ, ಬರ್ಮಾ ಬ್ಲಾಕ್, ಸಿದ್ದ ಸಣ್ಣ, ರತ್ನಚೂಡಿ, ನವರ, ಗೋವಿಂದ ಭೋಗ್, ಹೆಚ್.ಎಂ.ಟಿ, ಸಿಂಧೂರ ಮಧುಸಾಲೆ ಮೊದಲಾದ ಜನಪ್ರಿಯ ದೇಸಿ ಭತ್ತಗಳ ಬೀಜ ಕೂಡ ಕೊಳ್ಳಬಹುದು. ಮೇಳದಲ್ಲಿ ಸಿರಿಧಾನ್ಯ, ತರಕಾರಿ ಬಿತ್ತನೆ ಬೀಜಗಳು, ಗೆಡ್ಡೆ ಗೆಣಸು ಮತ್ತು ಸಾವಯವ ಉತ್ಪನ್ನಗಳು, ಹಣ್ಣಿನ ಗಿಡಗಳು ಮಾರಾಟಕ್ಕಿಡಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡಕ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಕಿಂಗ್‌ಡಮ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜದ್ರೋಹಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
MVC

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಅರಮನೆ ಅಂಗಳಕ್ಕೆ ಇಂದು ಗಜಪಡೆ ಪ್ರವೇಶ

ಮೈಸೂರು, ಆ.9(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿ, ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಬೀಡು ಬಿಟ್ಟಿರುವ ಅಭಿಮನ್ಯು ನೇತೃತ್ವದ ಗಜಪಡೆಯ 9 ಆನೆಗಳು ನಾಳೆ(ಆ.10) ಸಂಜೆ 6.45 ರಿಂದ 7.20ರ ಶುಭ ಮಕರ ಗೋಧೂಳಿ ಲಗ್ನದಲ್ಲಿ ಅರಮನೆ ಅಂಗಳ ಪ್ರವೇಶಿಸಲಿವೆ.

ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ಅರಮನೆ ಮಂಡಳಿ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಗಜಪಡೆಯನ್ನು ಅರಮನೆಗೆ ಬರಮಾಡಿಕೊಳ್ಳಲಾಗುತ್ತದೆ. ಆ.4ರಂದು ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಿ ಅರಣ್ಯ ಭವನದ ಆವರಣದಲ್ಲಿ ಬೀಡು ಬಿಟ್ಟಿರುವ ಮೊದಲ ತಂಡದ 9 ಆನೆಗಳಿಗೆ ನಾಳೆ ಮಧ್ಯಾಹ್ನ 3.30ಕ್ಕೆ ರೊಳಗೆ ಅರಣ್ಯ ಇಲಾಖೆ ವತಿಯಿಂದ ಪೂಜೆ ಸಲ್ಲಿಸಿ, ಅರಣ್ಯ ಭವನದಿಂದ ಬೀಳ್ಕೊಡಲಾಗುತ್ತದೆ. ಬಳಿಕ ಅಶೋಕಪುರಂ, ಅಶೋಕ ವೃತ್ತ(ಬಲ್ಲಾಳ್ ಸರ್ಕಲ್), ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬಿ.ಎನ್.ರಸ್ತೆ ಮೂಲಕ ಜಯ ಮಾರ್ತಾಂಡ ದ್ವಾರದ ಬಳಿ ಆಗಮಿಸಲಿವೆ.



ಸಾಂದರ್ಭಿಕ ಚಿತ್ರ

ರಾಹುಕಾಲ ಮುಗಿದ ನಂತರ ಸಂಜೆ 6.45 ರಿಂದ 7.20ರ ಶುಭ ಮಕರ ಗೋಧೂಳಿ ಲಗ್ನದಲ್ಲಿ ಗಜಪಡೆಗೆ ಅರಮನೆ ಮಂಡಳಿ ವತಿಯಿಂದ ಪೂಜೆ ಸಲ್ಲಿಸಿ, ಬರಮಾಡಿಕೊಳ್ಳಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ ಗಜಪಡೆಗೆ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿರುವ ಈ ಕಾರ್ಯಕ್ರಮದಲ್ಲಿ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ವೃತ್ತದ ಸಿಎಫ್ ರವಿಶಂಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಪಶುವೈದ್ಯ ಡಾ.ಆದರ್ಶ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಜೆಎಸ್‌ಎಸ್ ಸಂಗೀತ ಸಭಾದಿಂದ ವಚನಗಾಯನ

ಮೈಸೂರು, ಆ. 9–ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನಿಂದ ಆ.13ರಂದು ಬುಧವಾರ ಸಂಜೆ 6.00 ಗಂಟೆಗೆ ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲಾ ಆವರಣದಲ್ಲಿರುವ ಮಂತ್ರಮಹರ್ಷಿ ಸಭಾಭವನದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿದುಷಿ ಪಾವನಿ ಭಾರದ್ವಾಜ್ ಅವರ ವಚನ ಗಾಯನ ಏರ್ಪಡಿಸಲಾಗಿದೆ.

ವಿದುಷಿ ಸಿ.ವಿ. ಶ್ರುತಿ – ವಯೋಲಿನ್, ವಿದ್ವಾನ್ ಮಾಲೋಲ ಸಿಂಹ–ಮೃದಂಗ, ವಿದ್ವಾನ್ ಧೀಮಂತ ಭಟ್ – ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಒಳಮೀಸಲಾತಿ ಕುರಿತ ನ್ಯಾ.ನಾಗಮೋಹನದಾಸ್ ವರದಿ ತಿರಸ್ಕರಿಸಲು ಸರ್ಕಾರಕ್ಕೆ ದಸಂಸ ಆಗ್ರಹ

ಮೈಸೂರು, ಆ.9– ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಕುರಿತ ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕ ವಾಗಿದ್ದು, ಅದನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಮುಖಂಡ ದೇವಗಳ್ಳಿ ಸೋಮಶೇಖರ್ ಆಗ್ರಹಿಸಿದ್ದಾರೆ.

ವೈಜ್ಞಾನಿಕ ಹಾಗೂ ಸಮಗ್ರವಾಗಿ ಸಮೀಕ್ಷೆ ನಡೆಸಿ ರಾಜ್ಯದ ನೂರೊಂದು ಪರಿಶಿಷ್ಟ ಜಾತಿ–ಉಪಜಾತಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಬಗ್ಗೆ ವರದಿ ನೀಡಲು ರಚಿಸಿದ್ದ ನ್ಯಾ.ನಾಗ ಮೋಹನ್‌ದಾಸ್ ಆಯೋಗವು ಆ.4ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆದರೆ ಯಾರಿಗೂ ಅನ್ಯಾಯವಾಗದಂತೆ ಮೀಸಲಾತಿ ಹಂಚಿಕೆ ಮಾಡುವ ಉದ್ದೇಶ ಮರೆತು, ಪರಿಶಿಷ್ಟ ಜಾತಿಗಳವರು ಪರಸ್ಪರ ಅನುಮಾನದಿಂದ ನೋಡುವಂತೆ ವರದಿ ನೀಡಿದ್ದಾರೆ.

ಸರ್ಕಾರ ಆಯೋಗ ರಚಿಸಿ ನ್ಯಾ.ನಾಗ ಮೋಹನ್ ದಾಸ್ ಅವರನ್ನು ನೇಮಿಸಿದ್ದನ್ನು ಎಲ್ಲಾ ದಲಿತ ಸಮುದಾಯಗಳು ಹಾಗೂ ಸಂಘಟನೆಗಳು ಸ್ವಾಗತಿಸಿದ್ದವು. ಆಯೋಗದ ಮೇಲೆ ಅತೀವ ವಿಶ್ವಾಸ ಹೊಂದಿದ್ದವು. ಆದರೆ ನಮ್ಮ ನಂಬಿಕೆಗಳು ಸುಳ್ಳಾಗಿವೆ. ಸಮೀಕ್ಷೆ ವೇಳೆ ಪೂರ್ವಾ ಗ್ರಹಪೀಡಿತರಾದ ಭಾಸ್ಕರ್ ಪ್ರಸಾದ್ ಮತ್ತು ಅರುಣ್‌ಕುಮಾರ್ ಅನಾವಶ್ಯಕ ಹೇಳಿಕೆಗಳನ್ನು ನೀಡಿ, ಪ್ರತಿಭಟನೆ ಮಾಡಿ ಆಯೋಗದ ಸಮೀಕ್ಷೆಯನ್ನು ದಿಕ್ಕು ತಪ್ಪಿಸಿದ್ದಾರೆ. ನ್ಯಾ.ನಾಗಮೋಹನ್‌ದಾಸ್ ಕೂಡ ಲಯ ತಪ್ಪಿದ್ದರಿಂದ ಬಲಗೈ ಸಮುದಾಯದ ಲಕ್ಷಾಂತರ ಮಂದಿ ಸಮೀಕ್ಷೆಯಿಂದ ವಂಚಿತರಾಗಿದ್ದಾರೆ.



ಸೋಮಶೇಖರ್

ನಾಗಮೋಹನ್‌ದಾಸ್ ಅವರು ಎಡಗೈ ಸಮುದಾಯಕ್ಕೆ ಸಂಬಂಧಿಸಿದಂತೆ ಆದಿದ್ರಾವಿಡ, ಆದಿ ಆಂಧ್ರ, ಪೌರಕಾರ್ಮಿಕ, ಚಮ್ಮಾರ, ಮಾದಿಗ ಮುಂತಾದ ಉಪಜಾತಿಗಳನ್ನು ಮಾದಿಗ ಎಂಬ ಒಂದೇ ವೇದಿಕೆಗೆ ಸಮೀಕರಿಸಿ 27,73,780 ಜನಸಂಖ್ಯೆ ನಮೂದಿಸಿ ಪ್ರಥಮ ಸ್ಥಾನ ಕೊಟ್ಟಿದ್ದಾರೆ. ಆದರೆ ಬಲಗೈ ಸಮುದಾಯವನ್ನು ವ್ಯವಸ್ಥಿತವಾಗಿ ಒಡೆದು ಛಿದ್ರ ಮಾಡಿದ್ದಾರೆ. ಪರಯ, ಆದಿಕರ್ನಾಟಕ, ಛಲವಾದಿ ಸಮುದಾಯಗಳನ್ನು ಬಲಗೈ ಸಮುದಾಯದ ಹೊಲಯ ಗುಂಪಿಗೆ ಸಮೀಕರಿಸದೆ, ವಿಂಗಡಿಸಿದ್ದಾರೆ. ವರದಿ ಅನ್ವಯ ಬಲಗೈ ಹೊಲಯ ಕೇವಲ 24,72,103, ಛಲವಾದಿ 3,76,448, ಪರಯ 1,61,164, ಆದಿ ಕರ್ನಾಟಕ 1,47,199 ಜನಸಂಖ್ಯೆ ಇರುವುದಾಗಿ ತಿಳಿಸಿ ಹೊಲಯ ಜಾತಿಯನ್ನು ತುಳಿಯಲು ಹೊರಟಿದ್ದಾರೆ. ಈ ತಾರತಮ್ಯಕ್ಕೆ ಕಾರಣವೇನು? ಇದರ ಹಿಂದೆ ಯಾರ ಒತ್ತಡವಿದೆ? ಎಂದು ಪ್ರಶ್ನಿಸಿದ್ದಾರೆ.

ಗೊಂದಲಗಳಿರುವುದರಿಂದ ಸರ್ಕಾರ ಈ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸಬೇಕು. ಸಮೀಕ್ಷೆಯಿಂದ ವಂಚಿತರಾದವರಿಗೆ ಮತ್ತೊಂದು ಅವಕಾಶ ನೀಡಬೇಕು. ಬಲಗೈ ಸಮುದಾಯದ ಆದಿಕರ್ನಾಟಕ, ಪರಯ, ಛಲವಾದಿ, ಹೊಲಯ ಉಪ ಜಾತಿಗಳ ಸಮೀಕ್ಷೆಯ ಅಂಕಿ ಅಂಶಗಳನ್ನು ಹೊಲಯ ಗುಂಪಿಗೆ ಪರಿಗಣಿಸಿ, ವೈಜ್ಞಾನಿಕವಾದ ನ್ಯಾಯ ಒದಗಿಸಬೇಕೆಂದು ದಸಂಸ ಒತ್ತಾಯಿಸುವುದಾಗಿ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಚಾಮುಂಡಿಬೆಟ್ಟ ಗ್ರಾಮದಲ್ಲಿ ಬೀದಿನಾಯಿ ಮೇಲೆ ಚಿರತೆ ದಾಳಿ

ಮೈಸೂರು, ಆ.9(ಎಂಟಿವೈ)– ಚಾಮುಂಡಿಬೆಟ್ಟದ ಗ್ರಾಮದ ಬೀದಿಗಳಲ್ಲಿ ಪ್ರತ್ಯಕ್ಷವಾದ ಚಿರತೆಯೊಂದು ನಾಯಿಯೊಂದರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದು, ಚಿರತೆ ಸಂಚಾರದ ದೃಶ್ಯ ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆ.

ಚಾಮುಂಡಿಬೆಟ್ಟದ ಬೀದಿಗೆ ಮುಂಜಾನೆ 2.45ರ ವೇಳೆ ಬಂದ ಚಿರತೆ ರಸ್ತೆಯಲ್ಲಿ ಮಲಗಿದ್ದ ಬೀದಿ ನಾಯಿಗಳ ಮೇಲೆ ಮುಗಿ ಬಿದ್ದಿದೆ. ಆದರೆ ನಾಯಿ ತಪ್ಪಿಸಿಕೊಂಡು ಓಡಿದೆ. ಇದರಿಂದ ಕಂಗೆಟ್ಟ ಚಿರತೆ ಬೆಟ್ಟದ ಬೀದಿಗಳಲ್ಲಿ ಓಡಾಡಿ ನಾಯಿ ಬೇಟೆಗೆ ವಿಫಲ ಯತ್ನ ನಡೆಸಿದೆ. ಚಿರತೆ ದಾಳಿಗೆ ಒಳಗಾದ ನಾಯಿಯ ಮುಖಕ್ಕೆ ಗಂಭೀರವಾದ ಗಾಯವಾಗಿದ್ದು, ಇಂದು ಬೆಳಗ್ಗೆ ರಕ್ತ ಸೋರುತ್ತಿರುವುದನ್ನು ಗಮನಿಸಿದ ಸ್ಥಳೀಯರು, ಚಿರತೆ ದಾಳಿ ನಡೆಸಿರಬಹುದು ಎಂದು ಶಂಕಿಸಿದ್ದರು.

ನಾಯಿ ಮಲಗುವ ರಸ್ತೆಯ ಮನೆಗಳ ಮುಂದೆ ಅಳವಡಿಸಿದ್ದ ಸಿಸಿ ಕ್ಯಾಮರಾ ದೃಶ್ಯ ಪರಿಶೀಲಿಸಿದಾಗ ಚಿರತೆ ದಾಳಿ ನಡೆಸಿದ ದೃಶ್ಯ ಕಂಡು ಬಂದಿದೆ ಅಲ್ಲದೆ, ಬೆಟ್ಟದ ವಿವಿಧ ರಸ್ತೆಗಳಲ್ಲಿ ಚಿರತೆ ಓಡಾಟದ ದೃಶ್ಯವೂ ಸೆರೆ ಸಿಕ್ಕಿದೆ. ಚಿರತೆ ದಾಳಿ ವಿಷಯವನ್ನು ಗ್ರಾಮಸ್ಥರು ಅರಣ್ಯ ಇಲಾಖೆಗೆ ನೀಡಿದ್ದು, ಚಿರತೆ ಸೆರೆ ಹಿಡಿಯುವಂತೆ ಮನವಿ ಮಾಡಿದ್ದಾರೆ. ಚಿರತೆ ದಾಳಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಚಾಮುಂಡಿಬೆಟ್ಟಕ್ಕೆ ಹೋಗುವವರು ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಲಾಗಿದೆ.

ಇಂದು ಮಣಿಪಾಲ್ ಆಸ್ಪತ್ರೆಯಲ್ಲಿ ಸಂತಾನಾಕಾಂಕ್ಷಿ ದಂಪತಿಗಳಿಗೆ ಕಾರ್ಯಕ್ರಮ

ಮೈಸೂರು, ಆ.9(ಎಂಕೆ)– ಮೈಸೂರು ಮಣಿಪಾಲ ಆಸ್ಪತ್ರೆಯಲ್ಲಿ ಆ.10 ರಂದು ಸಂತಾನಾಕಾಂಕ್ಷಿ ದಂಪತಿಗಳಿಗಾಗಿ 'ದಿ ಬಿಗಿನಿಂಗ್ ಆಫ್ ಅಸ್–ಎ ಸೆಲೆಬ್ರೇಷನ್ ಆಫ್ ಹೋಪ್ ಅಂಡ್ ಜಾಯ್(ನಮ್ಮ ಆರಂಭ – ಭರವಸೆ ಮತ್ತು ಸಂತೋಷದ ಆಚರಣೆ)' ಎಂಬ ಸ್ಫೂರ್ತಿದಾಯಕ ಕಾರ್ಯಕ್ರಮ ಆಯೋಜಿಸಲಾಗಿದೆ.


manipal hospitals

ಗರ್ಭಧಾರಣೆ ಮತ್ತು ಸಂತಾನ ಪ್ರಾಪ್ತಿ ದಂಪತಿಗಳ ಜೀವನದ ಅತ್ಯಂತ ಅಮೂಲ್ಯವಾದ ಮೈಲಿಗಲ್ಲುಗಳಲ್ಲಿ ಒಂದಾಗಿದ್ದು, ಐವಿಎಫ್‌ನಂತಹ ಉನ್ನತ ಮತ್ತು ಸುಧಾರಿತ ಗರ್ಭಧಾರಣೆ ಚಿಕಿತ್ಸೆಗಳು, ವೈಯಕ್ತಿಕ ಆರೈಕೆ ಜೊತೆಗೆ ಭರವಸೆ ಮತ್ತು ಧೈರ್ಯ ತುಂಬುದ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಿದೆ.

ಮಣಿಪಾಲ ಆಸ್ಪತ್ರೆಯ ಡೈರೆಕ್ಟರ್ ಮತ್ತು ಸಂತಾನೋತ್ಪತ್ತಿ ಚಿಕಿತ್ಸೆಯ ಕನ್ಸಲ್ಟೆಂಟ್ ಡಾ.ನಿವೇದಿತಾ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದ್ದು, ಭ್ರೂಣ ಪೂಲಿಂಗ್, ಬ್ಲಾಸ್ಟೊಸಿಸ್ಟ್ ವರ್ಗಾವಣೆ ಮತ್ತು ಪ್ರಿ–ಇಂಪ್ಲಾಂಟೇಶನ್ ಜೆನೆಟಿಕ್ ಪರೀಕ್ಷೆ(PGT) ಯಂತಹ ಹೊಸ ಸಾಧ್ಯತೆಗಳನ್ನು ದಂಪತಿಗಳಿಗೆ ಪರಿಚಯಿಸಲಾಗುತ್ತದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ 96206 33255ಗೆ ಕರೆ ಮಾಡುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನ್ಯಾ.ನಾಗಮೋಹನ್ ದಾಸ್ ವರದಿ ರದ್ದುಗೊಳಿಸಲು ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಪ್ರತಿಭಟನೆ

ವರದಿ ಪ್ರತಿ ಸುಟ್ಟು ಆಕ್ರೋಶ; ಉಪ ಸಮಿತಿ ಮೂಲಕ ಬಲಗೈ ಸಮುದಾಯಕ್ಕೆ ನ್ಯಾಯ ಕಲ್ಪಿಸಲು ಒತ್ತಾಯ





ನ್ಯಾ.ಹೆಚ್.ಎಸ್.ನಾಗಮೋಹನ್ ದಾಸ್ ಆಯೋಗದ ವರದಿ ಜಾರಿಗೊಳಿಸದೆ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿ ಮಾಡುವಂತೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸದಸ್ಯರು ವರದಿ ಪ್ರತಿ ಸುಟ್ಟು ಹಾಕಿ ಪ್ರತಿಭಟಿಸಿದರು. ಮತ್ತೊಂದು ಚಿತ್ರದಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಎನ್. ಭಾಸ್ಕರ್ ಮಾತನಾಡುತ್ತಿರುವುದನ್ನು ಕಾಣಬಹುದು

ಮೈಸೂರು, ಆ.9(ಎಂಟಿವೈ)– ಪರಿಶಿಷ್ಟ ಜಾತಿಯ ಒಳಮೀಸಲಾತಿಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿ ರದ್ದು ಮಾಡಿ, ಕೂಡಲೇ ಉಪ–ಸಮಿತಿ ರಚಿಸಿ ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸದಸ್ಯರು ನ್ಯಾ.ನಾಗಮೋಹನ್ ದಾಸ್ ವರದಿ ಪ್ರತಿಯನ್ನು ಸುಟ್ಟು ಹಾಕಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಶನಿವಾರ ಪ್ರತಿಭಟನೆ ನಡೆಸಿದ ಸಮಿತಿ ಸದಸ್ಯರು ವಿವಿಧ ಘೋಷಣೆಗಳನ್ನು ಕೂಗಿ ಬಲಗೈ ಸಮುದಾಯಕ್ಕೆ ನ್ಯಾಯ ಒದಗಿಸುವಂತೆ ಒತ್ತಾಯಿಸಿದರು.

ಇತ್ತೀಚೆಗೆ ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಅವರು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಕುರಿತು ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಪ್ರಮುಖ ಅಂಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ವೈಜ್ಞಾನಿಕವಾಗಿ ಒಳ ಮೀಸಲಾತಿ ವರ್ಗೀಕರಣ ಮಾಡುವ ಬದಲು ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಸೇರಿಸಿಕೊಂಡು ದೋಷಪೂರಿತ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 101 ಜಾತಿಗಳನ್ನು ವರ್ಗೀಕರಣ ಮಾಡಲಾಗಿದೆ. 'ಹೊಲೆಯ' ಮತ್ತು ಅದೇ ರೀತಿಯ ಸಾಮಾಜಿಕ ಅಂಶಗಳನ್ನು ಒಳಗೊಂಡ ಕೆಲವು ಜಾತಿಗಳನ್ನು 'ಪ್ರವರ್ಗ–ಸಿ' ನಲ್ಲಿ ಇರಿಸಿ ಇದೇ ಸಾಮಾಜಿಕ ಅಂಶಗಳನ್ನು ಒಳಗೊಂಡ ಹೊಲೆಯ ಸಂಬಂಧಿತ ಜಾತಿಗಳನ್ನು 'ಪ್ರವರ್ಗ–ಬಿ' ಅಂದರೆ, ಮಾದಿಗ ಸಂಬಂಧಿತ ಜಾತಿಗಳ ಪಟ್ಟಿಗೆ ಸೇರಿಸಿ ಈ ಮೂಲಕ ಹೊಲೆಯ ಸಂಬಂಧಿತ ಜಾತಿಗಳ ಸಂಖ್ಯೆಯನ್ನು ಕಡಿಮೆ ಬರುವಂತೆ ಮಾಡಿ ಒಳ ಮೀಸಲಾತಿ ವರ್ಗೀಕರಣದ ಹೆಸರಿನಲ್ಲಿ ಅನ್ಯಾಯವೆಸಗಿದ್ದಾರೆ ಎಂದು ಕಿಡಿ ಕಾರಿದರು.

'ಪ್ರವರ್ಗ–ಇ' ವರ್ಗವನ್ನು ಸೃಷ್ಟಿಸಿ ಆದಿ ಕರ್ನಾಟಕ ಆದಿ ಅಂಧ್ರ ಆದಿ ದ್ರಾವಿಡ ಎಂಬ ಹೆಸರಿನ ಜಾತಿ ಸೂಚಕ ಗುಂಪುಗಳನ್ನು ಹೊಲೆಯ ಸಮುದಾಯದಿಂದ ಆದಿ ಕರ್ನಾಟಕದಲ್ಲಿ ಗುರುತಿಸಿಕೊಂಡಿರುವ ಬಲಗೈ ಸಮುದಾಯವನ್ನು ಪ್ರತ್ಯೇಕಿಸಿ ಇಲ್ಲಿಯೂ ಹೊಲಯ(ಬಲಗೈ) ಸಮುದಾಯವನ್ನು ವಂಚಿಸಲಾಗುತ್ತಿದೆ. ವೈಜ್ಞಾನಿಕ ವರ್ಗೀಕರಣದ ಹೆಸರಿನಲ್ಲಿ ಹೊಲಯ ಸಂಬಂಧಿತ ಜಾತಿಗಳನ್ನು ಮಾದಿಗ ಸಂಬಂಧಿತ ಜಾತಿಗಳ ಪಟ್ಟಿಗೆ ಸೇರ್ಪಡೆ ಮಾಡಿರುವುದು ಸಾಮಾಜಿಕ ನ್ಯಾಯದ ಮೂಲತತ್ವಕ್ಕೆ ವಿರುದ್ಧವಾಗಿದೆ. ಪ್ರವರ್ಗ–ಎ ಅಡಿಯಲ್ಲಿ 51 ಜಾತಿಗಳನ್ನು ನಮೂದಿಸಿದ್ದು, ಹೊಲೆಯ ಸಂಬಂಧಿತ ಸಮುದಾಯದ ಜನಸಂಖ್ಯೆ ಕಡಿಮೆಯಾಗುವಂತೆ ಮಾಡಿ ಆ ಮೂಲಕ ಒಳ ಮೀಸಲಾತಿ ವೈಜ್ಞಾನಿಕ ವರ್ಗೀಕರಣದ ಹೆಸರಿನಲ್ಲಿ ಹೊಲೆಯ ಸಮುದಾಯವನ್ನು ವಂಚಿಸಿದ್ದಾರೆ ಎಂದು ದೂರಿದರು.

ಹೀಗಾಗಿ ಕೂಡಲೇ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಆಯೋಗವು ನೀಡಿರುವ ಅವೈಜ್ಞಾನಿಕ ವರದಿ ತಡೆಹಿಡಿದು, ತಕ್ಷಣವೇ ಉಪ–ಸಮಿತಿಯನ್ನು ನೇಮಿಸುವ ಮೂಲಕ ಸ್ಪಷ್ಟ ಮತ್ತು ನ್ಯಾಯ ಸಮ್ಮತವಾದ ವೈಜ್ಞಾನಿಕ ವರದಿ ಸಿದ್ಧಪಡಿಸಿ ಸಮಸ್ತ ಪರಿಶಿಷ್ಟ ಜಾತಿಗಳಿಗೆ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಅಶೋಕಪುರಂ ಪೈ.ಕೃಷ್ಣ, ಸಿದ್ದಸ್ವಾಮಿ, ಎಂ.ವಿ.ಚಂದ್ರಶೇಖರ್, ವಿಷ್ಣುವರ್ಧನ, ಚೇತನ್, ಕಾಂತರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೈಸೂರು ಮೃಗಾಲಯದಲ್ಲಿ ಸಿಂಹಿಣಿ ಸಾವು

ಮೈಸೂರು,ಆ.9(ಎಂಟಿವೈ)– ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಎರಡು ದಶಕಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದ 'ರಕ್ಷಿತ' ಹೆಸರಿನ ಸಿಂಹಿಣಿ ಶನಿವಾರ ಬೆಳಗ್ಗೆ ವಯೋಸಹಜ ಸಮಸ್ಯೆಯಿಂದ ಅಸುನೀಗಿದೆ.



ಮೈಸೂರು ಮೃಗಾಲಯದಲ್ಲಿನ ನರಸಿಂಹ ಮತ್ತು ಮಾನಿನಿ ಜೋಡಿಗೆ 2004ರ ಏ.1ರಂದು ಜನಿಸಿದ್ದ ರಕ್ಷಿತ ಸಿಂಹಿಣಿ ಕಳೆದ 21 ವರ್ಷ 4 ತಿಂಗಳಿಂದ ಮೃಗಾಲಯಕ್ಕೆ ಬರುವ ಪ್ರವಾಸಿಗರ ಆಕರ್ಷಣೀಯ ಕೇಂದ್ರ ಬಿಂದುವಾಗಿತ್ತು. ಆದರೆ, ಕಳೆದ ಒಂದು ವಾರದಿಂದ ಅನಾರೋಗ್ಯಕ್ಕೆ ತುತ್ತಾಗಿತ್ತು. ಈ ಹಿನ್ನೆಲೆಯಲ್ಲಿ ದೇಶ ಹಾಗೂ ವಿದೇಶದ(ಜಾಗತಿಕ) ತಜ್ಞ ವೈದ್ಯರ ಸಲಹೆ ಪಡೆದು ರಕ್ಷಿತ ಸಿಂಹಿಣಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಇಂದು ಬೆಳಗ್ಗೆ ವಯೋಸಹಜ ಸಮಸ್ಯೆಯಿಂದ ಮೃತಪಟ್ಟಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಕ್ಷಿತ ಸಿಂಹಿಣಿಯ ಸಾವು ಮೈಸೂರು ಮೃಗಾಲಯಕ್ಕೆ ಅಪಾರ ನಷ್ಟವನ್ನುಂಟು ಮಾಡಿದೆ. ಮೃಗಾಲಯದ ಆಡಳಿತ ವರ್ಗ, ಪಶು ವೈದ್ಯಕೀಯ ತಂಡ ಮತ್ತು ಪ್ರಾಣಿ ಪಾಲನಾ ತಂಡ ರಕ್ಷಿತಳ ಸಾವಿಗೆ ತೀವ್ರ ಸಂತಾಪ ಸೂಚಿಸಿದೆ. ಈ ಹೆಣ್ಣು ಸಿಂಹದ ಚಿಕಿತ್ಸೆಯ ಸಂದರ್ಭದಲ್ಲಿ ಜಾಗತಿಕ ಪಶುವೈದ್ಯಕೀಯ ಸಮುದಾಯ ನೀಡಿದ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಸಿಂಹಿಣಿಯ ಅಂತ್ಯಕ್ರಿಯೆ ನೆರವೇರಿಸಲಾಯಿತು.


ಲೋಕೇಶ್ ಸೋಮಣ್ಣ
ಯುವ ಜನತಾದಳ ಅಧ್ಯಕ್ಷರು ಮೈಸೂರು ನಗರ,
ಮಾಜಿ ನಿರ್ದೇಶಕರು, ಕೆಎಸ್‌ಟಿಡಿಸಿ, ಕರ್ನಾಟಕ ಸರ್ಕಾರ
ಶುಭಕೋರುವವರು: ಶಿವಶಕ್ತಿ ಡೆವೆಲಪರ್ಸ್, ಮೈಸೂರು
ಮಾಜಿ ಸಚಿವರು ಹಾಗೂ ಜನಪ್ರಿಯ ಶಾಸಕರಾದ
ಶ್ರೀ ಸಾ.ರಾ.ಮಹೇಶ್
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು


ಸ್ನೇಹಜೀವಿ ಸಾರಾ ಮಹೇಶ್ ಅಣ್ಣನವರಿಗೆ
ಹುಟ್ಟುಹಬ್ಬದ ಶುಭಾಷಯಗಳು
ವಕ್ತಾರಾಮ್
ಕೈಗಾರಿಕ ಉದ್ಯಮಿ ಮೈಸೂರು
ಶುಭಕೋರುವವರು
ವಕ್ತ ರಾಮ್ ಸ್ನೇಹ ಬಳಗ
8748034488